ಬಿ. ಎಂ. ಶ್ರೀಕಂಠಯ್ಯನವರು
ಪರಿಚಯ – ಕಾಣಿಕೆ

ಈವರೆಗಾಗಲೆ ಬಿ. ಎಂ. ಶ್ರೀ. ಅವರನ್ನು ಕುರಿತು 'ಸಂಭಾವನೆ' ಗ್ರಂಥ ಬಂದಿದೆ; ಇಂಗ್ಲಿಷಲ್ಲಿ, ಕನ್ನಡದಲ್ಲಿ ಪ್ರತ್ಯೇಕವಾಗಿ ಡಾ. ಎಸ್.ವಿ. ರಂಗಣ್ಣನವರೂ ಪ್ರೊ. ಎ.ಎನ್. ಮೂರ್ತಿರಾಯರೂ ಬರೆದಿದ್ದಾರೆ. ಇತರರು ಬೇರೆ ಬೇರೆ ಸಂದರ್ಭಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅವರು ಆ ಗ್ರಂಥಗಳಲ್ಲಿ ಹೇಳಿರುವುದಕ್ಕಿಂತ ಹೆಚ್ಚಿನ ಯಾವ ಮೌಲಿಕ ವಿಷಯಗಳನ್ನೂ ನಾನು ಹೇಳಲಾರೆ. ಅವರಿಬ್ಬರೂ ಇಂಗ್ಲಿಷ್ ಸಾಹಿತ್ಯವನ್ನು ತಮ್ಮ ಎಂ.ಎ. ಪಾಠಕ್ಕಾಗಿ 'ಶ್ರೀ' ಯವರಲ್ಲಿ ಅಭ್ಯಾಸ ಮಾಡಿದವರು. ರಂಗಣ್ಣನವರೂ 'ಶ್ರೀ' ಅವರೂ ಸುಮಾರು ಸಮಾಜದ ಒಂದೇ ಜನವರ್ಗಕ್ಕೆ ಸೇರಿದವರು; ಆದುದರಿಂದ ಅವರ ಬಾಲ್ಯದ ವಿಷಯವನ್ನು, ಬಂಧುಗಳನ್ನು ಹೆಚ್ಚಾಗಿ ತಿಳಿದುಕೊಂಡಿರುವವರು. ವಿದ್ಯಾರ್ಥಿಯಾಗಿ ಮಹಾರಾಜ ಕಾಲೇಜಿಗೆ ಹೋಗುವುದಕ್ಕೆ ಮುಂಚೆ 'ಶ್ರೀ' ಯವರನ್ನು ಕುರಿತು ನಾವು 'ಎಂಟ್ರೆನ್ಸ್' ವಿದ್ಯಾರ್ಥಿಗಳಾಗಿದ್ದಾಗ ಭಯ ಉಂಟುಮಾಡುವ ಮಾತುಗಳನ್ನು ಕೇಳಿದ್ದೆವು. "ಅವರು ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ಕೊಡುತ್ತಾರೆ., ಉತ್ತರ ಕಷ್ಟ; ಅಂಕಗಳನ್ನು ಕೊಡುವುದರಲ್ಲಿ ಸೊನ್ನೆ ಹಾಕಿದರೂ ಹಾಕಿದರೆ! ಏನು ಗ್ರಹಚಾರವೋ!" – ಎಂದೆಲ್ಲ ಕೇಳಿದ್ದೆವು. ಆದರೆ ಇಟ್ಟ ಪುಸ್ತಕಗಳನ್ನು ಪೂರ್ತಿ ಓದಿದ್ದವರಿಗೆ ತೇರ್ಗಡೆ ಹೊಂದುವಷ್ಟು ಮಾತ್ರವಾದರೂ ಅಂಕ ಗಳಿಕೆಯಾಗುವ ಸಂಭವ ಇರುತ್ತದೆಯೆಂಬ ಒಂದು ನಂಬಿಕೆಯಿಂದ ನಮ್ಮಲ್ಲಿ ಹೆದರದೆ ಇದ್ದೆವು. ನಾವು ೧೯೧೭ರಲ್ಲಿ ಮೈಸೂರಿಗೆ ಮೊದಲನೆಯ ವರ್ಷದ ಬಿ.ಎ.ತರಗತಿಗೆ (ಆಗ ಬಿ.ಎ, ಮೂರು ವರ್ಷಗಳ ವ್ಯಾಸಂಗದ್ದು) ಹೋಗುವ ಹೊತ್ತಿಗೆ ಅವರಿಗೆ ಪತ್ನಿ ವಿಯೋಗವಾಗಿತ್ತು. (ಸುಮಾರು ೧೯೧೪), ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ, ತಾಯಿ ಇದ್ದರು. ಮಗನಿಗೆ ಉಂಟಾಗಿದ್ದ ದೃಷ್ಟಿನಷ್ಟ ಆವರೆಗೆ ಆಗಿತ್ತು. ಹೆಂಡತಿ ತೀರಿಕೊಂಡ ದಿನವೂ ಕೆಲಸಕ್ಕೆ ತಪ್ಪಿಸಿಕೊಳ್ಳದೆ, ಎಂದಿನ ಶಿಸ್ತಿನಲ್ಲಿ ಬಂದು, ಯಾವ ನಷ್ಟವೂ ಸಂಭವಿಸದವರಂತೆ ನಡೆದುಕೊಂಡರೆಂಬಂತೆ– ಒಂದು ಆಕ್ಷೇಪಣೆಯ ರೀತಿಯಲ್ಲಿ ಸುದ್ದಿ ಇತ್ತು. ತಪ್ಪೇನು? ಅಳುತ್ತಾ ಮನೆಯಲ್ಲಿ ಕುಳಿತರೆ ದುಃಖ ಶಮನವಾಗುವುದೆ? ಮನಸ್ಸು ದಿನದ ಕರ್ತವ್ಯದ ಕಡೆ ತಿರುಗಿದರೆ ಆಯಿತು ಎಂದುಕೊಂಡರಾದೀತು. ದೇವಿಯಮ್ಮ ಎಂಬ ಹೆಸರಿದ್ದ ಆಕೆಯಲ್ಲಿ ಅವರಿಗೆ ಅತಿಶಯವಾದ ಪ್ರೇಮವಿತ್ತೆಂದೂ ಆ ಪ್ರೀತಿಯ ಪ್ರಕಾಶಕವಾಗಿ 'ಇಂಗ್ಲಿಷ್ ಗೀತೆ' ಗಳಲ್ಲಿ ಕೆಲವನ್ನು ಬರೆದರೆಂದೂ ಕೇಳಿದ್ದೇನೆ.

ಈ ಶತಮಾನದ ಮೊದಮೊದಲ ವರ್ಷಗಳಲ್ಲಿಯೇ ಅವರು ಕನ್ನಡಕ್ಕೆ ಸಂಬಂಧಿಸಿದಂತೆ ಕನಸುಗಳನ್ನು ನೆಯ್ದುಕೊಳ್ಳುತ್ತಿದ್ದರು ಎಂಬ ಸಂಗತಿಯನ್ನು ಅವರ ಬರವಣಿಗೆಯಲ್ಲಿಯೆ ನಾವು ಓದಿದ್ದೇವೆ. ಎಂ.ಎನ್. ಶ್ರೀನಿವಾಸರಾಯರೆಂಬುವರೊ ಏನೊ– ಮದರಾಸಲ್ಲಿ ಅವರ ಜೊತೆಯಲ್ಲಿದ್ದರಂತೆ. ಸಂಜೆ ಕಡಲಕರೆಯ ಹೊಯಿಗೆಯ ಮೇಲೆ ಕುಳಿತು ನಾನಾ ಬಗೆಯ ಚರ್ಚೆಗಳನ್ನೂ ಸಂಭಾಷಣೆಗಳನ್ನೂ ನಡೆಸುತ್ತಿದ್ದರಂತೆ. ೧೯೧೭ರ ವರೆಗಾಗಲೇ ಅವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಎರಡು ಉಪನ್ಯಾಸಗಳನ್ನು ಕೊಟ್ಟಿದ್ದರು. ವಿದ್ಯಾವರ್ಧಕ ಸಂಘಕ್ಕೆ ಹಿಂದೆ ಮೈಸೂರಿನ ಮಹಾರಾಜರಾಗಿದ್ದವರು ಪ್ರೋತ್ಸಾಹ ಕೊಟ್ಟಿದ್ದರೆಂದು ಕೇಳಿದ್ದೇನೆ. ಎಂದರೆ, ಕನ್ನಡ ಸಾಹಿತ್ಯಪರಿಷತ್ತು ಬೆಂಗಳೂರಲ್ಲಿ ಸ್ಥಾಪಿತವಾಗುವುದಕ್ಕೆ ಮುಂಚಿನಿಂದ ಧಾರವಾಡ ಕನ್ನಡಕ್ಕೆ ಒಂದು ಕೇಂದ್ರವಾಗಿತ್ತು. **ಕನ್ನಡ ಭಾಷೆಯ ವಿಚಾರಗಳು, ಕನ್ನಡ ಮಾತು ತಲೆ ಎತ್ತುವ ಬಗೆ–** ಎಂಬ ವಿಳಾಸಗಳಲ್ಲಿ ಭಾಷಣ ಮಾಡಬಲ್ಲವರಾಗಿ ಆಗಲೇ (೧೯೧೧) ಅವರು ಪ್ರಸಿದ್ಧರಾಗಿದ್ದರೆಂಬುದು ವೇದ್ಯವಾಗಿತ್ತು. ಅದನ್ನು ಕುರಿತು ಮುಂದೆ ಎರಡು ಮಾತು ಹೇಳುತ್ತೇನೆ. ಆ ಹೊತ್ತಿಗಾಗಲೇ ಅವರು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮುಖ್ಯವಾದವುಗಳನ್ನೆಲ್ಲ ಓದಿದರು; ಅವುಗಳ ಗುಣ ಅವಗುಣಗಳನ್ನು ಅರಿತಿದ್ದರು. ಭಾಷೆಯ ಸ್ವರೂಪ, ನುಡಿಗಟ್ಟು, ಜೀವಂತವಾದ ಭಾಷೆ ಹೇಗೆ ಕಾಲಕಾಲಕ್ಕೆ ತಕ್ಕಂತೆ ಮಾರ್ಪಡುತ್ತ ಹೋಗುತ್ತದೆ; ಇವೊತ್ತು ಕನ್ನಡ ನುಡಿಯ ಸ್ವರೂಪ – ರಚನೆ ಅರ್ಥಶಕ್ತಿ ಹೇಗಿವೆ? ನಾಳೆಗೆ ಬರವಣಿಗೆ ಹೇಗಾದರೆ ಒಳಿತು?–ಎಂಬುದನ್ನು ಕುರಿತ ಆಲೋಚನೆ –ಇಂಗ್ಲಿಷ್ ಭಾಷಾಚರಿತ್ರೆಯನ್ನು ಮತ್ತು ಸಾಹಿತ್ಯವನ್ನು ಓದಿದವರಿಗೆ ಹೇಗೆ ಭಾಸವಾಯಿತೊ –ಅದನ್ನು ಆ ಭಾಷಣಗಳಲ್ಲಿ ನಾವು ಕಾಣಬಹುದು.

ಆ ಹೊತ್ತಿಗೆ ಮಂಗಳೂರಲ್ಲಿ ಪಂಜೆಯವರೂ ಅವರ ಗೆಳೆಯರೂ ಇದೇ ರೀತಿಯ ವಿಶ್ವಾಸ ಭರವಸೆಗಳನ್ನು ಇಟ್ಟುಕೊಂಡು ದುಡಿಯುತ್ತಿದ್ದರು. ಧಾರವಾಡದಲ್ಲಿ ರಾ.ಹ. ದೇಶಪಾಂಡೆ, ಚೆನ್ನಬಸಪ್ಪನವರು, ಆಲೂರ ವೆಂಕಟರಾಯರು, ಬಿಜಾಪುರದ ಕೆಂಭಾವಿ ಮುಂತಾದವರು ಕನ್ನಡ ದೀಕ್ಷೆಯನ್ನು ವಹಿಸಿದ್ದರು. ಕೇವಲ ಕವಿತೆ, ನಾಟಕ, ಶಾಸ್ತ್ರ ವ್ಯಾಸಂಗ ಮಾಡಿದ್ದವರು ಬೇರೆ. ಒಬ್ಬರನ್ನು ಒಬ್ಬರು ಕಂಡಿರಲಿಲ್ಲವೇನೊ. ಆಗ ಮಂಗಳೂರು ಮದರಾಸ್ ಆಧಿಪತ್ಯಕ್ಕೆ ಸೇರಿತ್ತು. ಪ್ರಯಾಣ ಕಷ್ಟ; ಸಹ್ಯಾದ್ರಿಶ್ರೇಣಿ ಈ ಬಯಲಸೀಮೆಗೆ ಕಡಲ ಕಡೆಯಿಂದ ಬರಲು ಸೌಲಭ್ಯವನ್ನು ಒದಗಿಸುತ್ತಿರಲಿಲ್ಲ. ಯಾವ ಯಾವವೊ ಕಾರಣಗಳಿಂದ ಕನ್ನಡ ಜಿಲ್ಲೆಯ ವಿದ್ಯಾವಂತರಿಗೂ ಮೈಸೂರು ಕಡೆಯವರಿಗೂ ಆಪ್ತವಾದ ಸ್ನೇಹ ಬೆಳೆದಿರಲಿಲ್ಲ. ತಲೆಯಾಳುಗಳನ್ನು ಮದರಾಸ್ ವಿಶ್ವವಿದ್ಯಾನಿಲಯದಲ್ಲಿ, ಅಲ್ಲಿನ ಪರೀಕ್ಷಾಮಂಡಲಿಗಳಲ್ಲಿ ಅಥವಾ ವ್ಯಾಸಂಗನಿರ್ಣಯ ಸಂಸ್ಥೆಗಳಲ್ಲಿ ೨–೩ಮಂದಿ ಸೇರಿಸಿಕೊಳ್ಳುತ್ತಿದ್ದಿರಬೇಕು, ಅಷ್ಟೇ. ಇತ್ತ ಮೈಸೂರಲ್ಲಿ ಕನ್ನಡಕ್ಕೆ ನೆಲೆ, ಹಾರೈಕೆ, ಶ್ರದ್ಧೆ ಅಷ್ಟಕ್ಕಷ್ಟೇ. ನಮ್ಮಲ್ಲಿ ಮದರಾಸಲ್ಲಿ ಇಂಗ್ಲಿಷಿಗೇ ಮಾನ್ಯತೆ. ಕಡೆಯ ಶತಮಾನದ ಕಡೆಕಡೆಯ ಒಂದೆರಡು ದಶಕಗಳಲ್ಲಿ ಶ್ರೀ ಚಾಮರಾಜ ಒಡೆಯರ ಪ್ರೋತ್ಸಾಹದಿಂದಾಗಿ, ಕೆಲವು ವ್ಯಕ್ತಿಗಳ ಹುಮ್ಮಸ್ಸಿನಿಂದಾಗಿ ಕನ್ನಡಕ್ಕೆ ಸಂಸ್ಕೃತದಿಂದ ಇಂಗ್ಲಿಷಿಂದ ಭಾಷಾಂತರಗಳು ಬಂದವು. ಹಾಗೆಯೇ ಇನ್ನು ಕೆಲವು ದಿನಗಳಲ್ಲಿ ಕೆಲವು ಮಂದಿ ಹಿರಿಯರು ಕನ್ನಡಕ್ಕೆ ಬಂಗಾಳಿಯಿಂದ, ಮರಾಠಿಯಿಂದ ಕೆಲವು ಗ್ರಂಥಗಳನ್ನು ಭಾಷಾಂತರ ಮಾಡಲು

ತೊಡಗಿದರು. ಸ್ವತಂತ್ರವಾಗಿ ಕೆರೂರವರು ಕಾದಂಬರಿ, ನಾಟಕ ರಚನೆ ಮಾಡುತ್ತಿದ್ದರು. ಇವು ಈ ಶತಮಾನದ ಮೊದಲ ದಶಕಗಳಲ್ಲಿ ಪ್ರಚುರವಾಗಿ, ಒಂದು ಬಗೆಯ ಗದ್ಯಪದ್ಯ ಸಾಹಿತ್ಯ ಪ್ರಕಾರಗಳನ್ನು ದೊರಕಿಸಿಕೊಟ್ಟವು. ಅಲ್ಲದೆ, ಕನ್ನಡದಲ್ಲಿ ಗ್ರಂಥಗಳಿವೆ, ಅವನ್ನು ಓದಬೇಕು ಎಂಬ ಕುತೂಹಲವನ್ನು ತಂದು ಕೊಟ್ಟ ಕಾಲ ಅದು.

ಆವರೆಗೂ ಹೊರಗಿನ ಭಾಷಾಂತರಗಳ ಮೂಲಕವಾಗಿಯೇ ಹೊಸಕನ್ನಡ ಕಣಜ ಸ್ವಲ್ಪ ಮಟ್ಟಿಗೆ ತುಂಬಿದ್ದರೂ ಸ್ವತಂತ್ರವಾಗಿ ಇಲ್ಲಿನ ಜೀವನಕ್ಕೆ ಸಂಭಂಧಿಸಿದ್ದಂತೆ ಕಾದಂಬರಿ ನಮ್ಮ ಕಡೆ ಹುಟ್ಟಿದ್ದು ಬಹುಶಃ ಎಂ.ಎಸ್. ಪುಟ್ಟಣ್ಣನವರ ಬರವಣಿಗೆಯಿಂದ. ಅವರ 'ಮಾಡಿದ್ದುಣ್ಣೋ ಮಹಾರಾಯ', 'ಮುಸುಕು ತೆಗೆಯೇ ಮಾಯಾಂಗನೇ'[1] ಎಂಬವು ಕನ್ನಡ ನುಡಿಗಟ್ಟಿಗೆ ಹೇಗೆ ಒಂದು ಚುರುಕು ತಂದವೊ ಹಾಗೆಯೆ ಒಂದು ರಂಜನೆಗೂ ಎಡೆಮಾಡಿಕೊಟ್ಟವು. ಗದ್ಯದಲ್ಲಿ, ಪದ್ಯದಲ್ಲಿ ಎಚ್.ವಿ. ನಂಜುಂಡಯ್ಯನವರು, ವೆಂಕಟಕೃಷ್ಣಯ್ಯನವರು, ಬೆಳ್ಳಾವೆ ಸೋಮನಾಥಯ್ಯ, ಭಾಷಾಂತರದ ಇಲಾಖೆಯ ಲಕ್ಷ್ಮೀನಾರಣಯ್ಯ, ಆರ್. ನರಸಿಂಹಾಚಾರ್ಯ, ಆರ್. ರಘುನಾಥರಾವ್, ಎಸ್. ಜಿ. ನರಸಿಂಹಾಚಾರ್ಯ, ಎಂ. ಎ ರಾಮಾನುಜಯ್ಯಂಗಾರ್ಯ, ಶ್ರೀಕಂಠೇಶಗೌಡ– ಮುಂತಾದವರು ಬಗೆ ಬಗೆಯಾದ ಸಾಹಿತ್ಯಸೇವೆಯನ್ನು ಮಾಡತೊಡಗಿದ್ದರು. ಬಹುತರ 'ಅರ್ಥಶಾಸ್ತ್ರ', 'ವ್ಯವಹಾರ ಧರ್ಮ' ಎಂಬ ಶಾಸ್ತ್ರಗ್ರಂಥಗಳನ್ನು ಮೊಟ್ಟಮೊದಲಿಗೆ ಬರೆದವರು ಎಚ್, ವಿ. ನಂಜುಂಡಯ್ಯನವರು. ಎಸ್. ಜಿ. ನರಸಿಂಹಾಚಾರ್ಯರು ಇಂಗ್ಲಿಷಿಂದಲೂ ಸಂಸ್ಕೃತದಿಂದಲೂ, ತಿಳಿಯಾದ ಕನ್ನಡದಲ್ಲಿ, ಹೊಸದೆಂಬಂತಿರುವ ಕಾವ್ಯಗಳನ್ನು ಬರೆದರು. ಇವರ ಜೊತೆಗೆ ಪಂಡಿತ ಜಯರಾಯಾಚಾರ್ಯ ಮುಂತಾದ ಇತರ ಪಂಡಿತರು ನೆರವು ಕೊಟ್ಟು ಕನ್ನಡವನ್ನು ಬೆಳಸಿದರು. ಮಲ್ಲಪ್ಪನವರು ಒಂದು 'ಶಬ್ದಾದರ್ಶ' ವನ್ನು ಕನ್ನಡಕ್ಕೆ ಮಾಡಿಕೊಡುವ ಅನುಕೂಲ ದೊರೆಯಿತು. ಮಹಾರಾಜಾ ಕಾಲೇಜಲ್ಲಿ ಚರಿತ್ರೆಯ ಉಪಾಧ್ಯಾಯರಾಗಿದ್ದ ಬಾಪು ಸುಬ್ಬರಾಯರು 'ವಿದ್ಯಾದಾಯಿನಿ' ಎಂಬ ಒಂದು ಪತ್ರಿಕೆಯನ್ನೂ ಮಂ. ಆ. ರಾಮಾನುಜಯ್ಯಂಗಾರ್ಯರು ' ಕರ್ಣಾಟಕ ಕಾವ್ಯಕಲಾನಿಧಿ' ಎಂಬ ಒಂದು ಗ್ರಂಥಮಾಲೆ

1 ಈಚಿನವರೆಗೂ ಕನ್ನಡ ಪುಸ್ತಕಗಳು ಮನೆಯ ಹೆಂಗಸರ ಸಂತೋಷಕ್ಕಾಗಿ ಎಂಬ ಮಾತು ವಾಡಿಕೆಯಾಗಿತ್ತು. ಇವೊತ್ತಿಗೂ ಕೆಲವು ವಿದ್ವಜ್ಜನರು ಹಾಗೆ ಆಡುತ್ತಿರುವುದನ್ನು ಕೇಳಿದ್ದೇನೆ.

ಯನ್ನೂ ಹೊರತಂದಿದ್ದರು. ಅವುಗಳಲ್ಲಿ ನಮ್ಮ ಪ್ರಾಚೀನ ಗ್ರಂಥಗಳೂ ಹೊಸಕಾಲದ ಕೆಲವು ಕೃತಿಗಳೂ ಹೊರಬಂದವು. ನ್ಯಾಯನಿರ್ಣಯ ಇಲಾಖೆಯಲ್ಲಿ ನ್ಯಾಯಧೀಶರಾಗಿದ್ದ ಬಿ. ವೆಂಕಟಾಚಾರ್ಯರು ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಕಾದಂಬರಿಗಳನ್ನೂ ನವೀನಚಂದ್ರಸೇನ್, ಅಯುಧೀನಾಥ ಚಟ್ಟೋಪಾಧ್ಯಾಯ, ಪಾಂಚ ಕೋರಿ ದೇ, ರಮೇಶಚಂದ್ರದತ್ತ– ಮುಂತಾದವರ ಕಾದಂಬರಿಗಳನ್ನೂ ಕನ್ನಡಕ್ಕೆ ಭಾಷಾಂತರ ಮಾಡಿದ್ದಲ್ಲದೆ ಸ್ವಂತವಾಗಿಯೂ ಒಂದೆರಡು ಪುಸ್ತಕಗಳನ್ನು ಹೊರಕ್ಕೆ ತಂದರು. ಈ ಕಾದಂಬರಿಗಳಲ್ಲಿ ಒಂದು ಜಾತಿ ರೋಮಾಂಚಕಾರಿ ಮತ್ತು ಐತಿಹಾಸಿಕ ಕತೆಗಳು; ಇನ್ನೊಂದು ಪತ್ತೇದಾರಿ ಕಥೆಗಳು; ಎಂದರೆ, ಎರಡು ಬಗೆಯ ಕಲ್ಪಿತ ಕಥೆಗಳು– (Fiction)-ಪ್ರಚಾರಕ್ಕೆ ಬಂದವು. ನಮ್ಮಲ್ಲಿ ಇಂಥ ರಂಜನೆಯುಳ್ಳ ಕತೆಗಳಿಗೆ ಕಾದಂಬರಿ ಇಂದು ಯಾರು ಹೆಸರಿಟ್ಟರೊ ಕಾಣೆ–ಬಾಣನ ಕಾದಂಬರಿಯನ್ನು ನೆನಸಿಕೊಂಡು ಹಾಗೆ ಮಾಡಿರಬೇಕು.[2] ಪತ್ತೇದಾರಿ ಕತೆಗೆ ಮುಂದುವರಿಕೆ ಬರುವಂತೆ ಬೆಂಗಳೂರು ಕೋಟೆ ಎ.ವಿ. ಸ್ಕೂಲಲ್ಲಿ ನಮ್ಮ Drawing ಉಪಾಧ್ಯಾಯರಾಗಿದ್ದ ಬಾಲಸರಸ್ವತಿಯವರು 'ಮಾಯಾವಿನಿ' ಮುಂತಾದ ಅನೇಕ ಕತೆಗಳನ್ನು ಬರೆದರು. ಜೊತೆಗೆ ಇವರಿಗೆ ಪೈಪೋಟಿಯಾಗಿ ಎಂಬಂತೆ ಎಂ.ವಿ. ಶಾಸ್ತ್ರಿ ಎಂಬವರು ಬರೆದರು; ಅವರೂ ಬಂಗಾಳಿಯಿಂದ ಕನ್ನಡಿಸಿದರು. ಹಿರಿಯರಾಗಿ ಚನ್ನಪಟ್ಟಣದ ವಾಸುದೇವಯ್ಯನವರು 'ಆರ್ಯಕೀರ್ತಿ' ಎಂಬ ಹೆಸರಿನ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಿ, ಸ್ಫೂರ್ತಿ ತರುವ ಇತಿಹಾಸ ಸನ್ನಿವೇಶಗಳನ್ನು ಯುವಕರ ರಕ್ತ ಕುದಿಯುವಂತೆ ಮಾಡುವ ಒಂದು ಗದ್ಯಶೈಲಿಯಲ್ಲಿ ಒದಗಿಸಿದರು.[3] 'ಆರ್ಯಕೀರ್ತಿ' ಭಾಗ ಒಂದರಲ್ಲಿ ರಾಜಪುತ್ರರ ಸ್ವದೇಶಪ್ರೀತಿ, ಮುಘಲ್ ಆಳಿಕೆಯ ಕಾಲದ ವೀರಕತೆಗಳು; ರಜಪೂತರ ಸಾಹಸ, ದೇಶಾಭಿಮಾನ ಹೊಮ್ಮಿ ತುಳುಕುವ ಚಿತ್ರಗಳು ಇವೆ. ಅದೇ ಕಾಲದಲ್ಲಿ– ಅಥವಾ ೧೯೦೫– ೬ರ ಸಮಯದಲ್ಲಿ – ಬಂಗಾಳವನ್ನು ಎರಡು ಭಾಗಗಳಾಗಿ ಒಡೆವ ಪ್ರಸಂಗ (Partition of Bengal) –ಭಾರತದ ದೌರ್ಭಾಗ್ಯದಿಂದ ಭರತಖಂಡ ಎರಡಾಗಿ ಒಡೆದೇ ನಾಡಿಗೆ ಸ್ವಾತಂತ್ರ್ಯ, ಸ್ವಾಧೀನತೆ ಬರಬೇಕಾದ್ದು ವಿಧಿಯ ವ್ಯಂಗ್ಯವಿಪರೀತ– ಮುಂದೆ ತಲೆ ಎತ್ತಿ, ಬಂಗಾಳಿ ಯುವಕರ ರಕ್ತಕುದಿಯುತ್ತಿರುವ ಸಮಯದಲ್ಲಿ ಸ್ವದೇಶ ಪ್ರೀತಿಯ ಅಂಥ ಕೃತಿಗಳ ನಿರ್ಮಾಣವಾಗಿತ್ತು.

ಭರತಖಂಡ ಪೂರ್ವಭಾಗದ ಬಂಗಾಳ, ಪಶ್ಚಿಮದಲ್ಲಿ ಪುಣೆಯ ಮಹಾರಾಷ್ಟ್ರ – ಈ ಎರಡೂ ಎರಡು ಬಗೆಯ ಕಥಾನಕಗಳನ್ನು– ಪ್ರಾಂತ ಭಾಷೆಯ ಸ್ವತಂತ್ರ ಸೃಷ್ಟ್ಯಾತ್ಮಕ ಅಥವಾ ಭಾಷಾಂತರದ ಕೃತಿಗಳನ್ನೂ ಶಾಸ್ತ್ರಗ್ರಂಥಗಳನ್ನೂ–ರಚಿಸುತ್ತಿದ್ದುದು ವಿಶೇಷ. ರಮೇಶಚಂದ್ರದತ್ತರು ರಾಮಾಯಣ –ಮಹಾಭಾರತ ಕತೆಗಳನ್ನು ಇಂಗ್ಲಿಷ್ ಛಂದಸ್ಸಿನಲ್ಲಿ ರಚಿಸಿ ಭಾರತದ ಮಹಾಕೃತಿಗಳನ್ನು ಪರಿಚಯ ಮಾಡಿಕೊಟ್ಟಿದ್ದರು. The Slave Girl of Agra ಎಂಬ ಇತಿಹಾಸ ಕಾದಂಬರಿಯನ್ನು ಇಂಗ್ಲಿಷಲ್ಲಿ ಬರೆದರು; 'ವಂಗವಿಜೇತ' ಎಂಬ ಕಾದಂಬರಿಯಲ್ಲಿ ಮಹಾಶ್ವೇತೆ ಎಂಬ ಪಾತ್ರವನ್ನು ನಿರ್ಮಾಣ ಮಾಡಿ ಬಾಣ 'ಕಾದಂಬರಿ'ಯ ನೆನಪು ಬರುವಂತೆ ಮಾಡಿದರು. ಬಹುಶಃ ಅವರೇ ಮೊದಲ ಬಾರಿಗೆ ಭರತಖಂಡದ ಆರ್ಥಿಕ ಜೀವನದ ಚಿತ್ರವನ್ನು ಕೊಟ್ಟವರು. ಅದೇ ಸುಮಾರಿಗೆ ಭಾರತೀಯರಲ್ಲದಿದ್ದರೂ ಸರ್ ಎಡ್ವಿನ್ ಆರ್ನಲ್ಡರು The Light of Asia ಎಂಬ ಗ್ರಂಥದಲ್ಲಿ ಬುದ್ಧನ

ಜೀವನವನ್ನು ಹೊಮ್ಮಿಸಿದ್ದರು. ಈ ಪ್ರಭಾವ ಭರತಖಂಡದಲೆಲ್ಲ ಹರಡಿದಂತೆ ಕರ್ನಾಟಕದಲ್ಲಿಯೂ ಹರಡಿತು. ಮಹಾರಾಷ್ಟ್ರದಲ್ಲಿ ಅಗರ್‌ಕರ್, ಮ, ಗೋ. ರಾನಡೆ, ಅರ್. ಜಿ. ಭಾಂಡಾರಕರ್,

2 ಭರತಖಂಡದಲ್ಲಿ Novel, Romance ಎಂಬ –ಒಟ್ಟು Fiction ಹೆಸರಲ್ಲಿ ಬರೆಯುವ ಗ್ರಂಥಗಳಿಗೆ ಬೇರೆ ಬೇರೆ ಹೆಸರಿವೆ. ನಮ್ಮಲ್ಲಿ ಇನ್ನೂ ಕಾದಂಬರಿ ಎಂದೇ ಇದೆ.

3 ಇದನ್ನು ಇಂದು Rhetoric ಎನ್ನುತ್ತಾರೆ; ತಪ್ಪೇನು? Rhetoric ಅಲ್ಲಿ ಜೀವವಿದ್ದರೆ, ಸಾರವಿದ್ದರೆ ಅದು ಕೃತಾರ್ಥವಾಗುತ್ತದೆ. ರೋಮಲ್ಲಿ ಸಿಸೆರೊ ಇರಲಿಲ್ಲವೆ? ಗ್ರೀಸಲ್ಲಿ ಡೆಮಾಸ್ತನೀಸ್ ಇರಲಿಲ್ಲವೆ? ಇಂಗ್ಲೆಂಡಲ್ಲಿ ಬರ್ಕ, ಫಾಕ್ಸ್, ಗ್ರಾಟನ್, ಮಕಾಲೆ ಇರಲಿಲ್ಲವೆ? Rhetoric ಎಂದರೇ ಮೂಗು ಮುರಿಯಬೇಕಾದ ಅಗತ್ಯ ಇರಲಿಲ್ಲವೇನೊ, ಎಲ್ಲ ವಿದ್ಯೆಯ, ಕಲಿಕೆಯ ಹಿಂದೆಯೂ ಈ ಭಾಗ ಇದ್ದೇ ಇರುತ್ತದೆ.

'ಸತಾರ ಹೈಸ್ಕೂಲಿ'ನ ಹೆಡ್ ಮಾಸ್ಟರ್ ಜೋಶಿ, ಹರಿನಾರಾಯಣ ಆಪ್ಟೆ, ಬಾಲಗಂಗಾಧರ್ ತಿಲಕ ಮುಂತಾದವರು ಬಗೆಬಗೆಯಾದ ಶಾಸ್ತ್ರಸಾಹಿತ್ಯ ಮತ್ತು ಸೃಷ್ಟ್ಯಾತ್ಮಕ ಕಥಾಸಾಹಿತ್ಯ ನಿರ್ಮಾಣ ಮಾಡಿದರು. ತಿಲಕರಂತೂ ಸ್ವದೇಶಪ್ರೀತಿಗೆ ನಂದಾದೀವಿಗೆಯನ್ನು ಹಚ್ಚಿ, ಇಂಗ್ಲಿಷಲ್ಲಿ 'Mahratta ವನ್ನೂ ಮರಾಠಿಯಲ್ಲಿ 'ಕೇಸರಿ' ಪತ್ರಿಕೆಯನ್ನೂ ಆರಂಭಿಸಿದ್ದರು. ಅವರ ಶಾಸ್ತ್ರಾನ್ವೇಷಣೆ, Orion or the Arctic Home of the Vedas ಎಂಬ ಗ್ರಂಥ ಬಹು ವಿಚಿತ್ರವಾದ ಪರಿಣಾಮವನ್ನು ಉಂಟು ಮಾಡಿತು. ಅವರ 'ಗೀತಾ ರಹಸ್ಯ' ಉದ್ಧೃತಿ, ಬಂಕಿಮಚಂದ್ರರ 'ಕೃಷ್ಣ ಚರಿತೆ' ಮತ್ತು ಹಿಂದೂಧರ್ಮಕ್ಕೆ ಸಂಬಂಧಿಸಿದಂತೆ ಇತರ ಗ್ರಂಥಗಳು ಬಂಗಾಳದಲ್ಲಿ ಏನು ಕೆಲಸ ಮಾಡಿತೊ ಅದನ್ನು ತಿಲಕರ ಬರವಣಿಗೆ ಮತ್ತು ಸಮಾಜಸುಧಾಕರಾದ, ಶಾಸ್ತ್ರಜ್ಞರಾದ ಅಗರ್‌ಕರ್ ಮುಂತಾದವರ ಬರವಣಿಗೆ ಮಹಾರಾಷ್ಟ್ರದಲ್ಲಿ ಮಾಡಿತು. ಬಂಗಾಳವಾದರೂ ಕರ್ನಾಟದಕ್ಕೆ ದೂರ. ಆದರೂ ಸ್ವದೇಶ ಪ್ರೀತಿಗಾಗಿ ಬಂಡಾಯ ನಡೆದುದು ಮೊದಲು ಬಹುಕಾಲ ಭರತಖಂಡದ ರಾಜಧಾನಿಯಾಗಿದ್ದ ಕಲ್ಕತ್ತದಲ್ಲಿ; ಆ ಸುತ್ತಮುತ್ತಲ ಪ್ರದೇಶದಲ್ಲಿ. ಮಹಾರಾಷ್ಟ್ರ ಆಗ ಬೊಂಬಾಯಿ ಆಧಿಪತ್ಯದಲ್ಲಿ ಸೇರಿತ್ತು. ಗುಜರಾತ, ಸಿಂಧ್, ಕರ್ನಾಟಕದ ತುಂಗಭದ್ರೆಯ ಉತ್ತರಭಾಗ ಬೊಂಬಾಯಿ ಅಧಿಪತ್ಯಕ್ಕೆ ಸೇರಿತ್ತು. ಧಾರವಾಡದಲ್ಲಿ ಒಂದು, ಕೊಲ್ಹಾಪುರದಲ್ಲಿ ಒಂದು ಸರ್ಕಾರದ ಕಾಲೇಜುಗಳಿದ್ದರೆ ಉಳಿದವರೆಲ್ಲ ಪುಣೆಗೊ ಬೊಂಬಾಯಿಗೊ ಪ್ರೌಢ ವ್ಯಾಸಂಗಕ್ಕೆ ಹೋಗಬೇಕಿತ್ತು. ಅವರ ಸಮಸ್ತ ಸಾರ್ವಜನಿಕ ಜೀವನಕ್ಕೆ ಬೊಂಬಾಯಿ ಕೇಂದ್ರವಾಗಿದ್ದರೆ, ಸಾಂಸ್ಕೃತಿಕ ಜೀವನಕ್ಕೆ ಪುಣೆ ಕೇಂದ್ರ. ಮರಾಠಿ ಕಲಿಕೆಯದೇ ಹುಬ್ಬಳ್ಳಿ–ಧಾರವಾಡ ಎನ್ನುವ ಭಾಗದ ಕನ್ನಡಿಗರಿಗೆ ಬೇರೆ ಮಾರ್ಗವಿರಲಿಲ್ಲ. ಈ ಹುಬ್ಬಳ್ಳಿ–ಧಾರವಾಡ ಎನ್ನುವುದರ ಜೊತೆಗೆ ಬೆಳಗಾಂವ–ಬಿಜಾಪುರ ಹೇಳದೆಯೇ ಸೇರಿಕೊಂಡಿದ್ದುವು. ಹರಿನಾರಾಯಣ ಆಪ್ಟೆಯವರ ಐತಿಹಾಸಿಕ ಕಾದಂಬರಿಗಳು ರಂಜಕ ಕಾದಂಬರಿಗಳೂ ಮರಾಠಿ ಅರಿತಿದ್ದ ಉತ್ತರ ಕರ್ನಾಟಕದ ಜನರಿಗೆ ವೆಂ.ತಿ.ಕು. ಗಳಗನಾಥರಿಂದ ಬಂದಿತು. ಹಾಗೆಯೇ ಪತ್ತೆದಾರಿ ಕಥೆಗಳು ಭೀ. ಪ. ಕಾಳೆ, ಮಹಾಲಿಂಗ ತಟ್ಟಿ ಮುಂತಾದವರ ಮೂಲಕ 'ಸದ್ಬೋಧ ಚಂದ್ರಿಕೆ'ಯಲ್ಲಿ ಬಂದವು. ಕವಿತೆಗೆ ಸಂಬಂಧಿಸಿದ ಹೆಚ್ಚು ಮರಾಠಿ ಇತ್ತ ಕಡೆ ಬಂತೊ ಇಲ್ಲವೊ. ಬಂಕಿಮರ 'ವಂದೇ ಮಾತರಂ' ಹಾಡು ಅವರ 'ಆನಂದ ಮಠ'ದಲ್ಲಿನದು. ೧೯೧೧–೧೨ ಸುಮಾರಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ ರವೀಂದ್ರನಾಥ ಠಾಕೂರರ[೪] ಕೀರ್ತಿ ಪ್ರತಿಷ್ಠೆಗಳಿಂದಾಗಿ ಅವರ ಕೆಲವು ಗೀತೆಗಳು ಕನ್ನಡಕ್ಕೆ ಬಂದವು ಅವರ ಜೊತೆಗೆ ದೀಲಿಪ ಚಂದ್ರರಾಯ್, ಗಿರೀಶ್ ಚಂದ್ರ ಘೋಷ್ ನಾಟಕ ಬರೆಯುತ್ತಿದ್ದರು.

ಹೋದ ಶತಮಾನದ ಕಡೆಯ ದಶಕದಲ್ಲಿ ನಡೆದ ಇನ್ನೊಂದು ಸಂಗತಿ ಮಂಗಳೂರಿನ ಬೇಸೆಲ್ ಮಿಷನ್ ಪ್ರೆಸ್ಸಿನವರ ಪ್ರಭಾವದಿಂದ, ಕಿಟ್ಟೆಲ್ಲರ ವಿದ್ವತ್ ಕಾರ್ಯದಿಂದ ನಮಗೆ ವ್ಯಾಕರಣ, ಛಂದಸ್ಸು, ನಿಘಂಟು, ಮುಂತಾದವು ಬಂದುದು. ಇಂಗ್ಲಿಷ್ ಸಾರದರ್ಶನ ಮತ್ತು ಪಾಶ್ಚಿಮಾತ್ಯ ಬಗೆಯ ಕೃತಿರಚನೆಗಳ ಸರಳತೆ, ಸಹಜತೆ, ನೇರವಾದ ಹೃದಯಾಕರ್ಷಣ ಇತ್ತಕಡೆಯ ಜನಕ್ಕೆ– ಅಂದರೆ ಕನ್ನಡ ಜನಕ್ಕೆ– ಒಂದು ಹೊಸ ಬೆಳಕನ್ನು ತಂದುಕೊಟ್ಟಿತು. ಆವರೆಗಾಗಲೆ ಕೆಂಪುನಾರಾಯಣನ 'ಮುದ್ರಾಮಂಜೂಷ' ಇಲ್ಲಿ ಬಂದಿತ್ತು. ಮುದ್ದಣನ 'ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧ' ಮೈಸೂರಲ್ಲಿ ಅಚ್ಚಾದವು. ಮೈಸೂರು ಪ್ರಾಚ್ಯ ಸಂಶೋಧನಾ ಇಲಾಖೆಯ ಅಧಿಕಾರಿಗಳಾಗಿದ್ದ ಬಿ.ಎಲ್. ರೈಸ್ ಅವರು ಶಾಸನಗಳನ್ನು ಅನೇಕವಾಗಿ ಅಚ್ಚು ಮಾಡಿದ್ದಲ್ಲದೆ, ಅವರೂ ಪಾಠಕರೂ ಆಮೇಲೆ ಅರ್. ನರಸಿಂಹಾಚಾರ್ಯರೂ, ರಾಮಾನುಜಯ್ಯಂಗಾರ್ಯರೂ ಅನೇಕ ಹಳಗನ್ನಡ ಕೃತಿಗಳನ್ನು ಪ್ರಕಟಿಸಿದರು. ತಾತ್ಕಾಲಿಕವಾಗಿ ದೊರೆತ ಆಧಾರಗಳ ಮೇಲೆ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಕಿಟ್ಟೆಲ್, ರೈಸ್ ಪೀಠಿಕೆಗಳಲ್ಲಿ ಅಳವಡಿಸಿದರು. ಅರ್. ನರಸಿಂಹಾಚಾರ್ಯರು, 'ನೀತಿಮಂಜರಿ' ಎಂಬ ಹೆಸರಿನಲ್ಲಿ ತಮಿಳಿನ ಕುರಳ್ ಭಾಷಾಂತರ ಮಾಡಿದರು. ಪೂರ್ತಿ ಹಳಗನ್ನಡ ಎಂದಾದರೂ ಹೊಸ ಜೀವನಸ್ಫೂರ್ತಿಯುಳ್ಳಂತಿರುವ ಮತ್ತು ಗದ್ಯದ ಧಾತುವಿನ ಪ್ರಕಾಶಕವಾದ ಗ್ರಂಥಗಳು ಕನ್ನಡಕ್ಕೆ ಬಂದಿದ್ದವು. ಒಂದು ರೀತಿ ನೋಡಿದರೆ 'ರಾಮಾಶ್ವಮೇಧ' ಪ್ರಾಚೀನ ಕರ್ನಾಟಕ ಸಂಪ್ರದಾಯದ ಚರಮಪ್ರಕಾರ ಮತ್ತು ವಾಣಿ ಎಂದು ಕಾಣಿಸಿದರೂ ಅದಕ್ಕೆ ಚೌಕಟ್ಟು ಕೊಟ್ಟ ಮುದ್ದಣ– ಮನೋರಮೆಯರ ಸಂವಾದ ಒಂದು ಹೊಸ ಬಗೆಯ ಸರಸನಗೆಯನ್ನೂ ದಾಂಪತ್ಯ ಜೀವನದಲ್ಲಿ ಗಂಡು ಹೆಣ್ಣಿನ ಪ್ರೀತಿಯಲ್ಲಿ ಒಂದು ಸುಭಗವಾದ ಪ್ರಕಾರವನ್ನೂ ತಂದು ಕೊಟ್ಟುದಲ್ಲದೆ, ಹೊಸಕಾಲದ್ದೆನ್ನಬಹುದಾದ ಒಂದು ಅನುಕೂಲದ ಆವರಣಸ್ಥಿತಿಯನ್ನು ತೋರಿಸುತ್ತದೆ. ಸುಮಾರು ಮೊದಲ ಯುದ್ಧ ಮುಗಿದ (೧೯೨೦) ಕಾಲದ ಹೊತ್ತಿಗೆ ಮೈಸೂರು ಸಿವಿಲ್

4 ಅವರು ಬ್ರಾಹ್ಮಣರಾದರೂ ಬ್ರಾಹ್ಮೊ ಪಂಥದವರು.

ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನ್ನಡದಲ್ಲಿ ವಿಶ್ವಾಸವುಳ್ಳ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು 'ಶೀನಿವಾಸ' ಎಂಬ ಹೆಸರಲ್ಲಿ ಸಣ್ಣಕತೆಗಳನ್ನು ಬರೆಯಲು ತೊಡಗಿದ್ದರು. ಡಿ.ವಿ.ಜಿ. ಯವರು ಕನ್ನಡದಲ್ಲಿ ಕಥೆಗಳನ್ನು, ನಾಟಕವನ್ನು ಬರೆದಿದ್ದರು.

* *

ಬೊಂಬಾಯಿ ಆಧಿಪತ್ಯದಲ್ಲಿ ಎಂಜಿನಿಯರ್ ಆಗಿದ್ದು ತಮ್ಮ ಕಾಲಕ್ಕೆ ಮುಂಚೆ ಕೆಲಸದಿಂದ ಬಿಡಿಸಿಕೊಂಡು ಹೊರಗೆ ಬಂದಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರಿಗೆ ಬಂದು ಇಲ್ಲಿನ ಜೀವನವನ್ನು ಮತ್ತು ವಿದ್ಯಾಭ್ಯಾಸವನ್ನು ತಿದ್ದಬೇಕೆಂದು ವಿ.ಪಿ. ಮಾಧವರಾಯರೇ ಕೇಳಿದ್ದರು. ಕಾರಣಾಂತರಗಳಿಂದ ಆಗಲಿಲ್ಲ, ಸುಮಾರು ಆನಂದರಾಯರ ಕಾಲದಲ್ಲಿ ಅವರ ಮಾತನ್ನೂ ಮಹಾರಾಜರವರ ಮಾತನ್ನೂ ನಡಸಿಕೊಡಲು ನಮ್ಮಲ್ಲಿ ಪ್ರಧಾನಶಿಲ್ಪತಂತ್ರಜ್ಞ (Chief Engineer)- ಆಗಿ ಕೆಲಸ ಮಾಡಲು ಒಪ್ಪಿಕೊಂಡರು. ಅವರು ಒಂದೆರಡು ಸಂಗತಿಗಳನ್ನು ಮೈಸೂರು ಅಧಿಕಾರಿಗಳಿಗೆ ತಿಳಿಸಿದರು. ಇಲ್ಲಿ ಯಂತ್ರೋದ್ಯೋಗ, ವ್ಯಾಪಾರ ವಾಣಿಜ್ಯ ಸಂಬಂಧವಾದ ಶಿಕ್ಷಣ, ಕೈಗಾರಿಕೆಯ ಬೆಳವಣಿಗೆಯ ಸಂಬಂಧದಲ್ಲಿ ಕಾರ್ಯ ಕೈಗೊಳ್ಳಲು ಒಪ್ಪಿಕೊಂಡರೆ ತಾನು Chief Engineer ಕೆಲಸದಲ್ಲಿ ತೊಡಗುವೆನೆಂದು ಹೇಳಿ, ಅದನ್ನು ಒಪ್ಪಿಕೊಂಡಾಗ ಇಲ್ಲಿಗೆ ಬಂದರು. ಎಚ್.ವಿ.ನಂಜುಂಡಯ್ಯನವರು ದಿವಾನರಾಗಬಹುದಾಗಿದ್ದ ಸಂದರ್ಭದಲ್ಲಿ, ಸಿವಿಲ್ ಸರ್ವಿಸ್ಸಿನವರಲ್ಲದ, ರಾಜ್ಯ ಆಡಳಿತದ ಅನುಭವವಿಲ್ಲದ ವಿಶ್ವೇಶ್ವರಯ್ಯನವರನ್ನೇ ದಿವಾನರನ್ನಾಗಿ ಮಾಡಿದ್ದು ಒಂದು ಕಡೆ ಹಿರಿಯ ನಂಜುಂಡಯ್ಯನವರಿಗೆ ಮತ್ತು ಇತರರಿಗೆ ಅಸಮಾಧಾನವನ್ನುಂಟುಮಾಡಿದರೂ ವಿಶ್ವೇಶ್ವರಯ್ಯನವರೇ ದಿವಾನರಾಗಿದ್ದು, ತಮ್ಮ ಇಷ್ಟಕ್ಕೆ ತಕ್ಕಂತೆ ಕಾರ್ಯಭಾರವನ್ನು ನಿರ್ವಹಿಸಬೇಕೆಂದು ಮಹಾರಾಜರು ಅನುಗ್ರಹಿಸಿದರು. ಅನೇಕವಾಗಿ ತಾವು ಸೂಚಿಸಿದ್ದ ಇಷ್ಟವನ್ನು ಬೆಳಸಿದ ಕಾಲದಲ್ಲಿ Civic and Social Welfare ಇಲಾಖೆಯನ್ನೂ Economic Conference, Chamber of Commerce ಮತ್ತು ಉದ್ಯೋಗ ಕೈಗಾರಿಕೆಗಳ ಬ್ಯಾಂಕ್, ಮೈಸೂರು ಬ್ಯಾಂಕ್ ಮುಂತಾದವುಗಳ ಸ್ಥಾಪನೆ, ಪ್ರಜಾಪ್ರತಿನಿಧಿಸಭೆಯ ಮತ್ತು ಶಾಸನಮಂಡಲದ ಸ್ಥಾನಮಾನಗಳನ್ನು ಹೆಚ್ಚಿಸಿದ್ದಲ್ಲದೆ ಆವರೆಗೂ ಮದರಾಸ್ ವಿಶ್ವವಿದ್ಯಾನಿಲಯಕ್ಕೆ ಅಧೀನವಾಗಿ ನಡೆಯಬೇಕಿದ್ದ ಮೆಟ್ರಿಕ್ಯುಲೇಷನ್ ಇಂದ ಹಿಡಿದು ಬಿ.ಎ., ಬಿ.ಎಲ್ .ಬಿ. ಕಾಂ., ಎಂ.ಎ., ವ್ಯಾಸಂಗ ಮೈಸೂರು– ಬೆಂಗಳೂರಲ್ಲೇ ಏರ್ಪಡುವಂತೆ ಆಗಲು ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಮೊದಲು ಕಾಂತರಾಜ ಅರಸರ ಬಂಗಲೆಯಲ್ಲಿ– ಎಂದರೆ ಈಗ ಮಾನಸಗಂಗೋತ್ರಿ ಪ್ರದೇಶದಲ್ಲಿ– ಛಾತ್ರರು ವಾಸಮಾಡಿ ಕಲಿಯುವ ಒಂದು ಬೋಧಕ ವಿಶ್ವವಿದ್ಯಾನಿಲಯವಾಗಿ ಅದು Teaching University ಆಗಬೇಕೆಂದು ಎಣಿಸಿರೂ ೨–೩ ಕಾರಣಗಳಿಂದ ಆಗಲಿಲ್ಲ. ಆ ಬಂಗಲೆ ದೊರೆಯದೆ ಬೆಂಗಳೂರಲ್ಲಿ Central College ಅಲ್ಲಲ್ಲಿ ವಿಜ್ಞಾನಭಾಗವನ್ನೂ ಮೈಸೂರಲ್ಲಿ ಕಲಾಸಂಬಂಧವಾದ ಭಾಗಗಳನ್ನು ಒಡೆದು ವಿಭಾಗಿಸಬೇಕಾಯಿತು. ವಿಶ್ವೇಶ್ವರಯ್ಯನವರೇ ಬೊಂಬಾಯಿಯಲ್ಲಿರುವಾಗ ಮೊದಲು ಇಲ್ಲಿ ತಾತಾ ಇನ್‌ಸ್ಟಿಟ್ಯೂನ್ನು ಸ್ಥಾಪಿಸಲು ಸ್ಥಳಾದಿ ಸೌಕರ್ಯ ಕಲ್ಪಿಸಿಕೊಡಬೇಕೆಂದು ಇಲ್ಲಿನ ಅಧಿಕಾರಿಗಳಿಗೆ ಬರೆದು ಅದನ್ನು ಸಾಧಿಸಿದ್ದರು. ಇದರಿಂದ ಭರತಖಂಡಕ್ಕೆಲ್ಲ ಪ್ರಧಾನ ಕೇಂದ್ರವಾಗಬಲ್ಲ ಒಂದು ವಿಜ್ಞಾನ ಸಂಸ್ಥೆ ಬೆಂಗಳೂರಲ್ಲಿ ಸ್ಥಾಪಿತವಾಗಿತ್ತು. ಹೊಸದಾಗಿ ಕೈಗಾರಿಕೆಗಳು, ಕಾರ್ಖಾನೆಗಳು ಆರಂಭವಾಗತೊಡಗಿದ್ದವು. ರೈಲ್ವೆ ಸಲಕರಣೆಯ ಕಾರಣದಿಂದಾಗಿ ಒಂದು ರೀತಿಯಲ್ಲಿ ಕೇಂದ್ರಪ್ರದೇಶವಾಗುತ್ತಿದ್ದುದರಿಂದ ಬೆಂಗಳೂರು ಬಹುಬೇಗ ಶಾಸ್ತ್ರವಿದ್ಯೆಗಳಲ್ಲಿಯೂ ಶಿಲ್ಪತಂತ್ರಗಳ ವಿಚಾರದಲ್ಲಿಯೂ ಮುಂದುವರಿಯಲು ಅವಕಾಶವಾಯಿತು. ಎಂಜಿನಿಯರಿಂಗ್ ಕಾಲೇಜ್ ಬೆಂಗಳೂರಲ್ಲಿಯೇ ಆಯಿತು. ವಿಶೇಷವಾಗಿ ಕನ್ನಡಕ್ಕೆ ಪ್ರೋತ್ಸಾಹ ದೊರೆಯಬೇಕೆಂಬ ಇಷ್ಟದಿಂದ ಕನ್ನಡದ ಹಿರಿಯರೆಲ್ಲರನ್ನೂ ಸಲಹೆ ಕೇಳಿ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸು. ೧೯೧೫–೧೬ರಲ್ಲಿ ಅವರು ಸ್ಥಾಪಿಸಿದರು. ಈ ಕಾರ್ಯಗಳೆಲ್ಲ ಜನದ ವಿದ್ಯೋತ್ಸಾಹವನ್ನು ಕುದುರಿಸಿ, ಕಲೆ ಸಂಸ್ಕೃತಿಗಳ ಏಳಿಗೆಯ ಕಡೆಗೆ ಅದು ತಿರುಗುವಂತಾದುದು ದೊಡ್ಡ ಸಂದರ್ಭ. ವಿಜ್ಞಾನಯುಗ ಇದು; ಯಂತ್ರತಂತ್ರವಿದ್ಯೆ ಇದು; ಮೈಸೂರು ಜಪಾನ್, ಸ್ವಿಟ್ಸರ್ಲಂಡ್, ಜರ್ಮನಿ ಮುಂತಾದ ರಾಷ್ಟ್ರಗಳಂತೆ ಕೈಗಾರಿಕೆಯಲ್ಲಿ, ವಿಜ್ಞಾನದಲ್ಲಿ, ಶಿಲ್ಪದಲ್ಲಿ ರೂಪಗೊಳ್ಳಬೇಕೆಂದು ಇದ್ದದ್ದು ಅವರ ಆಕಾಂಕ್ಷೆ. ಹುಲುಜನರ ಬಾಯಲ್ಲಿ ಈತನು ಹುಚ್ಚನೆಂಬಂತೆ ಆಡಿದರೂ ಅವರ ರತ್ಸಹ ಕಂದಲಿಲ್ಲ, ಕುಂದಲಿಲ್ಲ.

* * * * *

ಈ ಸಮಯದಲ್ಲಿ ಮಹಾರಾಜಾ ಕಾಲೇಜಲ್ಲಿ ಕನ್ನಡ–ಇಂಗ್ಲಿಷ್ ಎರಡರ ಉಪಾಧ್ಯಾಯರಾಗಿ ಬಿ.ಎಂ.ಶ್ರೀ ಬೋಧಕರಾಗಿ ನೇಮಿತರಾದರು. ಕೇಂಬ್ರಿಜಲ್ಲಿ 'Greats' ಪರೀಕ್ಷೆಯಲ್ಲಿ ಪ್ರಶಸ್ತಿ ಪಡೆದು ಹಿಂದಕ್ಕೆ ಬಂದಿದ್ದ ಎನ್. ಎಸ್. ಸುಬ್ಬರಾಯರನ್ನು ಇದೇ ಕಾಲದಲ್ಲಿ ಪ್ರೊಫೆಸರಾಗಿ ಮಹಾರಾಜಾ ಕಾಲೇಜಲ್ಲಿ ನೇಮಿಸಿದ್ದರೂ, ಅಲ್ಲಿಗೆ ಥಾಮಸ್ ಡೆನ್ ಹ್ಯಾಂ ತರುವಾಯ ಅದೇ ಕೇಂಬ್ರಿಜ್ ವಿಶ್ವವಿದ್ಯಾನಿಲಯದಿಂದ ಬಂದಿದ್ದು, ಇಲ್ಲಿ ಪ್ರೊಫೆಸರ್ ಆಗಿ ಇದ್ದ ಸಿ. ಆರ್. ರೆಡ್ಡಿಯವರು ಎಂ. ಶಾಮರಾಯರು ವಿಶ್ರಾಂತರಾಗುವವರೆಗೂ ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಆದರು; ಸುಬ್ಬರಾಯರು ಎರಡನೆಯ ವ್ಯಕ್ತಿಯಾಗಿ ಕಾಲೇಜಲ್ಲಿ ಪಾಠ ಹೇಳಬೇಕಾಗಿತ್ತು.

ಇತ್ತ ಸುಬ್ಬರಾಯರೂ ಬಿ. ಎಂ. ಶ್ರೀಕಂಠಯ್ಯನವರೂ ಪಿ. ಎಸ್. ಅಣ್ಣಾಜಿರಾಯರೂ ಶ್ರೀರಂಗಪಟ್ಟಣದಲ್ಲಿ ಜೊತೆಯ ವಿದ್ಯಾರ್ಥಿಗಳಾಗಿದ್ದರಂತೆ. ಮದರಾಸಿಗೆ ಹೋಗಿ ಎಂ. ಎ. ಡಿಗ್ರಿಯನ್ನೂ ಲಾ ಡಿಗ್ರಿಯನ್ನೂ ಬಿ. ಎಂ. ಶ್ರೀ ಅವರು ಪಡೆಯಬೇಕಾಯಿತು. ಸುಬ್ಬರಾಯರು ಕೇಂಬ್ರಿಜಿಗೆ ಹೋಗಿ ಬಾರ್ ಅಟ್ ಲಾ ಆಗಿದ್ದುದರಿಂದ ಅಲ್ಲಿಂದಾಚೆಗೆ ಈ ಇಬ್ಬರ ಪದವಿಗಳಲ್ಲಿ ವ್ಯತ್ಯಾಸ ಉಂಟಾಯಿತು. ಆದರೂ ಕಡೆಯವರೆಗೂ ಈ ಮೂವರೂ ಸೋದರ ಸ್ನೇಹದಿಂದ ನಡೆದುಕೊಳ್ಳುತ್ತಿದ್ದರು.

ಕನ್ನಡದ ಪಾಠ ಹೇಳುವಾಗ ಕನ್ನಡಕ್ಕೆ ಹೊಸದಾದ ಬೋಧನ ಮಾರ್ಗವನ್ನು ಹೊಸಕಾಲದ ದೃಷ್ಟಿ ಧ್ಯೇಯಗಳಿಂದ ಕಲಿಸಬೇಕೆಂಬ ಉದ್ದೇಶದಿಂದ 'ಶ್ರೀ' ಯವರು ಕನ್ನಡದ ಪಾಠವನ್ನು ಆವರೆಗೂ ಇಲ್ಲದಿದ್ದ ಒಂದು ರೀತಿಯಲ್ಲಿ ಮಾಡಿ, ಪ್ರತಿಷ್ಠೆಯನ್ನೂ ಕೀರ್ತಿಯನ್ನೂ ಜೊತೆಗೇ ಮೊದಲು ತಂದರು. ಅದು ವಿಚಿತ್ರ ಕಾಲ. ಆಕ್ಸ್‌ಫರ್ಡ್–ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಪಡೆದು ಬಂದ ಹೊರತು ಇಂಗ್ಲಿಷ್ ಪಾಠ ಹೇಳುವ ಯಾರಿಗೂ ಇಲ್ಲಿ ಇಂಗ್ಲಿಷ್ ಪ್ರೊಫೆಸರ ಪದವಿ ದೊರೆವುದು ಶಕ್ಯವಿರಲಿಲ್ಲ. ಎಲ್ಲ ಕಡೆಯೂ ಪ್ರಿನ್ಸಿಪಲ್‌ರೂ ಇಂಗ್ಲಿಷ್ ಪ್ರೊಫೆಸರರೂ ಬ್ರಿಟಿಷರು. ಇಂಗ್ಲಿಷಿಗಿಂತ ಕನ್ನಡಕ್ಕೆ ಹೆಚ್ಚು ಗಮನ ಕೊಡುತ್ತಾರೆ ಎಂಬ ಸುಳಿವು ಕೂಡ ಗೊತ್ತಾಗದ ಹಾಗೆ 'ಶ್ರೀ' ಯವರು ಇತರ ವಿದೇಶಿ ಇಂಗ್ಲಿಷ್ ಪ್ರೊಫೆಸರಿಗೆ ಸಮನಾದ –ಮೇಲಾದ– ಯೋಗ್ಯತೆಯನ್ನು ಪಡೆದುಕೊಳ್ಳಲು ಪಣತೊಟ್ಟಂತೆ ಇಂಗ್ಲಿಷ್ ಸಾಹಿತ್ಯದ ಮೇಲೆ ಪ್ರಭುತ್ವವನ್ನು ಸಾಧಿಸಿಕೊಂಡರು. ಗುಪ್ತಗಾಮಿನಿಯಾಗಿ ಕನ್ನಡದ ಪ್ರೀತಿ ಹರಿಯುತ್ತಲೇ ಇದ್ದು, ಬಾಪು ಸುಬ್ಬರಾಯರ 'ವಿದ್ಯಾದಾಯಿನಿ'ಯಲ್ಲಿ ಕೆಲವು ಇಂಗ್ಲಿಷ್ ಗೀತೆಗಳನ್ನು ಪ್ರಕಟನೆ ಮಾಡಿಸಿದರು (೧೯೧೯). ದಕ್ಷಿಣ ಕನ್ನಡ ಜಿಲ್ಲೆಯ ಹಟ್ಟಿಯಂಗಡಿ ನಾರಾಯಣರಾಯರು, ಪಂಜೆಯವರು, ಎಂ.ಎನ್. ಕಾಮತ್, ಗೋವಿಂದ ಪೈ ಮುಂತಾದವರು ಬಗೆಬಗೆಯಾಗಿ ಇಂಥ ಕಾರ್ಯವನ್ನು ಅಲ್ಲಿ ಮಾಡುತ್ತಿದ್ದರೂ ಅದು ನೇರವಾಗಿ ಮೈಸೂರಿನ ಕಡೆಗೆ ಬರದೆ ಮದರಾಸ್ ಆಧಿಪತ್ಯದ ಸಂಪರ್ಕದಿಂದ ಅಚ್ಚಾಗುತ್ತಿದ್ದ ರೀಡರುಗಳು. ಶಿಕ್ಷಣದ ಪುಸ್ತಕಗಳು ಮುಂತಾದವುಗಳ ಮೂಲಕ ಮಾತ್ರ ಅಷ್ಟಿಷ್ಟು ಈ ಕಡೆಗೆ ಬರುತ್ತುತ್ತು. ಬಿ.ಎಂ.ಶ್ರೀ. ಅವರು ಕನ್ನಡದ ಪಾಠವನ್ನು ಮಾಡುವಾಗ ಟಿ. ಎಸ್. ವೆಂಕಣ್ಣಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು – ಮುಂತಾದವರಿಗೆ ಡಿಗ್ರಿ ತರಗತಿಗಳಿಗೆ ಕನ್ನಡ ಸಾಹಿತ್ಯ ಚರಿತ್ರೆ, ಭಾಷಾ ಚರಿತ್ರೆ, ತೌಲನಿಕ ವ್ಯಾಕರಣ ಮತ್ತು ಭಾಷಾವಿಜ್ಞಾನ, ದ್ರಾವಿಡ ಛಂದಸ್ಸು ಮುಂತಾದವುಗಳನ್ನು ಪಾಠ ಹೇಳಿದ್ದರು. ಸುಮಾರು ೧೯೧೨–೧೪ರಲ್ಲಿ Notes on Prosody ಎಂಬ ನಕ್ಷೆಯನ್ನು (Notes)ಬರೆದಿಟ್ಟುಕೊಂಡು ಅದರಲ್ಲಿ ಈವರೆಗೂ ಅಚ್ಚಾಗದಿರುವ ಕೆಲವು ಭಾಗಗಳನ್ನು Rhythm-ಛಂದೋಲಯ ಎಂಬ ಅಂಶದಲ್ಲಿಯೂ Verse ಛಂದಸ್ಸಿನಲ್ಲಿ ಪಾದಸಂಯೋಜನೆ, Structure of the Verse ಮತ್ತು ಅದರ ಅಂಗಗಳು ಎಂಬುದನ್ನು ಕುರಿತೂ ಮೂಲಭೂತವಾದ ಭಾಗಗಳನ್ನು ಬರೆದಿಟ್ಟುಕೊಂಡಿದ್ದರು. ಛಂದಸ್ಸಿಗೆ ಸಂಬಂಧಿಸಿದಂತೆ ಪ್ರಾತಿಶಾಖ್ಯಗಳ ಕಾಲದಿಂದ ಹಿಡಿದು ಈಗಿನವರೆಗೂ ಯಾವ ಯಾವ ಭಾಗಗಳು ಈ ಬಗೆಗೆ ನೆರವು ಕೊಡಬಲ್ಲವು– ಆ ಆಕರಗಳನ್ನು ಕೂಡ ಬರೆದಿಟ್ಟಿದ್ದರು. ಅದರ ಮುಖ್ಯ ಭಾಗ ಅವರು ಬಹುಕಾಲದ ಮೇಲೆ 'ಕನ್ನಡ ಕೈ ಪಿಡಿ'ಗೆ ಬರೆದುಕೊಟ್ಟ ಕನ್ನಡ ಛಂದಸ್ಸಿನ ಚರಿತ್ರೆ ಭಾಗದಲ್ಲಿ ಸೇರಿದ್ದರೂ ಅವರ ಆ ನಕ್ಷೆಯನ್ನು ಆದಷ್ಟು ಬೇಗ ಅದಿದ್ದ ಹಾಗೆಯೇ ಪ್ರಕಟಿಸುವ ಭಾಗ್ಯ ಕನ್ನಡನಾಡಿಗೆ ಬರಬೇಕು. ಆ ಟಿಪ್ಪಣಿಗಳಲ್ಲಿ ಒಂದು ಕಡೆ ಸಾಮಾನ್ಯವಾಗಿ ಒಂದು ಪಂಕ್ತಿಯ ಉದ್ದ ಎಷ್ಟಿದ್ದರೆ ಚೆನ್ನಾಗುತ್ತದೆ, ಹೆಚ್ಚಾಗುವುದಿಲ್ಲ, ಕಡಮೆಯಾಗುವುದಿಲ್ಲ ಎಂಬುದನ್ನು ಕುರಿತು ಬರೆದಿದ್ದಾರೆ. ಎರಡು ಜೊತೆ ಗಣಗಳು –ಸಮವೊ ಅಸಮವೊ– ಸ್ವಜಾತಿಯವೊ ವಿಜಾತಿಯವೊ– ಇದ್ದಾಗ ಒಂದು ಜೊತೆ ತುಂಬಾ ಕಡಮೆಯಾಗುತ್ತದೆ; ಎರಡೆರಡು ಜೊತೆ ಗಣಗಳು ಚೊಕ್ಕವಾಗುತ್ತವೆ. ಸಂಸ್ಕೃತದ ಅಕ್ಷರವೃತ್ತಗಳಲ್ಲಿ ಯತಿಗಳು ಬರುವಾಗಲೂ ಎರಡಕ್ಕಿಂತ ಹೆಚ್ಚು ಯತಿಗಳು ಬಂದರೆ ಸಾಲು ಸಡಿಲವಾಗುತ್ತದೆ. ಈ ಎರಡೆರಡು ಜೊತೆಗಳು ೨+೩, ೩+೪, ೩+೫ ಬಂದರೆ ರಚನೆ ಸುಷ್ಠುವಾಗುತ್ತದೆ. ಸಂಯುಕ್ತಗಣಗಳು ಆರು ಮಾತ್ರೆಯವಾದಾಗ ಕೇವಲ ೩+೩ಅಥವಾ ೪+೪ರ ಎಂಟು ಯಾಂತ್ರಿಕವಾಗುತ್ತದೆ. ಇಲ್ಲಿಯೂ ನಿಜವಾದ ಕವಿಯ ಕಿವಿ ಇದನ್ನು ನದಸಿಕೊಂಡುಹೋದರೆ ಲಯಗಾನ ಚೆನ್ನಾಗುತ್ತದೆ. ಸಮವಾದ ಎರಡು ಗಣಗಳು ಬಂದ ಮೇಲೆ ಒಂದು ತನಿಮಾತ್ರೆಯೊ ಅಂಶವೊ ಅಸಂಪೂರ್ಣಗಣವೊ ಬಂದಾಗ ಸಹಜವಾಗಿ ಓಟದಲ್ಲಿ ಕೇಳ್ಮೆಗೆ ಸೊಗಸುತ್ತದೆ–ವಂದೂ ಬಹುಹಿಂದೆ ಬರೆದುಕೊಂಡಿದ್ದರು. ಹಾಗೆಯೇ ಅವರು ಬಳಸುತ್ತಿದ್ದ ಪುಸ್ತಕದಲ್ಲಿ ವೇದಕಾಲದಿಂದ ಹಿಡಿದು ಈಚಿನವರೆಗೂ ಯಾವ ಯಾವ ಪ್ರಾಚೀನ ಗ್ರಂಥಗಳು ಛಂದಸ್ಸನ್ನು ಕುರಿತು, ಲಯವನ್ನು ಕುರಿತು ತಿಳಿಸುತ್ತವೆ ಎಂಬುದನ್ನೂ –ಲಯವೆಂಬಪದದ ಬಳಕೆ ನಮ್ಮಲ್ಲಿದ್ದರೂ ಲಯದ ನಡೆ, ಅದರಲ್ಲಿ ಖಚಿತತೆ, ನಿಯತಿ, ಅವುಗಳ ಓಟ ಇವು ಛಂದಸ್ಸಿನ ಸಮಸ್ತ ಸುಭಗತೆಗೂ ಕಾರಣ ಮೂಲಾಧಾರ ಎಂಬ ಮಾತನ್ನು ಈವರೆಗೆ ತಿಳಿದಿರಲಿಲ್ಲ–ಬರೆದಿದ್ದಾರೆ.[5] ತಮಿಳಿನ ಬೇರೆ ಬೇರೆ ಬಗೆಯ ಛಂದೋರೂಪಗಳಲ್ಲಿ ಓಟವನ್ನು ಹೇಗೆ ಸಾಧಿಸುತ್ತಾರೆ. ಅಂಶಗಣಗಳ ಮೊದಲಂಶದಲ್ಲಿ ಮಾತ್ರವಲ್ಲದೆ ಮಧ್ಯಗಣಗಳಲ್ಲಿ ಕೂಡ ೨+೩ ಕೆಲವೇಳೆ ಒಂದಂಶವಾಗಿ ಹೇಗೆ ಉಚ್ಚಾರವಾಗುತ್ತದೆ ಎಂಬುದನ್ನು ನೋಡಬೇಕು ಎಂಬ ಅಂಶವನ್ನು ಸುಮಾರು ಅನುಲಕ್ಷಿಸಿದ್ದರು. ಅವರು ಓದುತ್ತಿದ್ದ ಹಾಗೆ ಓದಿದರೆ ಲಯಗಾನ ತುಂಬ ಸೊಗಸುತ್ತಿತ್ತು. ಎಲ್ಲಿಗೆ ನಿಲುಗಡೆ, ಏಕೆ? ಎಲ್ಲಿಗೆ ಸಾಕು? – ಎಂಬ ಹಾಳತವನ್ನು ಅಂಶಗಣಗಳಲ್ಲಿ ಏರು, ಇಳಿತ, ಹೊರಳು, ಹೇಗೆ ಸುಶ್ರಾವ್ಯ –ಇಂಥ ಸಂದರ್ಭಗಳಲ್ಲಿ ಅರಿಯ ಬೇಕಾದುದು ತುಂಬ ಅಗತ್ಯ.[6] ನಮ್ಮ ಛಂದೋರಚನೆ ಇಂದು ಏನೇ ಆಗಲಿ, ಮಾತ್ರಾವಿವಕ್ಷೆಯಿಂದಲೇ ನಡೆಯಬೇಕಾಗುತ್ತದೆ. ಅವರಿಗೆ Free Verse ಬಿಡುಲಯದ ಪಾದರಚನೆ –ಮನಸ್ಸಿಗೆ ಹೆಚ್ಚಾಗಿ ಪ್ರಿಯವಲ್ಲದಿದ್ದರೂ ಅದಕ್ಕೆ ವಿಮುಖರಾಗಲಿಲ್ಲ. ಮ್ಯಾಥ್ಯು ಆರ್ನಲ್ಡಂಥ ಸಮಪ್ರದಾಯರಕ್ಷಕನಾದ ಕವಿಯ 'Empedocles' ಪದ್ಯವನ್ನೂ ಬ್ರೌನಿಂಗ್ ನ 'Pippa Passes' ಆರಂಭದ ಸೂರ್ಯೋದಯದ ವರ್ಣನೆಯನ್ನೂ ಹೇಗೆ ಮೆಚ್ಚುತ್ತಿದ್ದರು ಎಂಬುದನ್ನೂ ಷೇಕ್‌ಸ್ಪಿಯರ್ ಕಾಲದಲ್ಲಿಯೇ ಒಂದು ಮಾತು ಅಥವಾ ಎರಡು ಮಾತು ಹೇಗೆ ಒಂದು Iambic (U–) ಐದು ಲಗ ಗಣ ತುಂಬಿಕೊಳ್ಳಬೇಕಾಗಿತ್ತು ಎಂಬುದನ್ನು ತೋರಿಸುತ್ತಿದ್ದರು. ಟೆನಿಸನ್ನನ Break, Break, Break ಹೇಗೆ ಆ ಪದ್ಯದ ನಿಡುಸಾಲುಗಳ ಪ್ರಮಾಣದಷ್ಟು ಉಸಿರಿನದಾಗಿ ಓದ\ಡಬೇಕು. ಸಾನೆಟ್ ಅಥವಾ ಚೌದಶಪದಿಯಲ್ಲಿ ಪಾದರಚನೆ ಅರ್ಥಖಂಡ ಪ್ರಾಸಖಂಡ ೮+೬ ಪಾದಗಳಾಗಿದ್ದಾಗಲೂ ಹೇಗೆ ಕಡೆಯ ಪಂಕ್ತಿ, ಇಲ್ಲಿಗೆ ಈ ಕೃತಿಯ ಓಟ ಸಂಪೂರ್ಣವಾಯಿತು ಎಂಬ ಹಾಗೆ ಲಯದ ನಿಲುಗಡೆ ಬರುವಂತೆ ಮಾಡದಿದ್ದರೆ, ಜಾಳಾಗುತ್ತದೆ ಎಂಬುದನ್ನೂ ತೋರಿಸುತ್ತಿದ್ದರು. Blank verse -ಸರಳ ರಗಳೆಯಲ್ಲಿ ನಿಲುಗಡೆಯನ್ನು ಹೇಗೆ ಸಾಧಿಸುವುದು ಕಷ್ಟ. ಅಕ್ಷರವನ್ನು ಕಡಮೆಮಾಡದೆ ಹೆಚ್ಚುಮಾಡದೆ ಕೂಡ ಹೇಗೆ ಇದನ್ನು ಸಾಧಿಸಿಕೊಂಡು ಬರಬೇಕು ಎಂಬುದನ್ನು ಯಾವ ಯಾವುದನ್ನೊ ಓದುತ್ತ ಖಾಸಗಿಯಾಗಿಯೂ ಸಾರ್ವಜನಿಕವಾಗೆಯೂ ಅವರು ನುಡಿದುದನ್ನೂ ಕೇಳಿದ್ದೇನೆ.[7]

ಇಂದು ನಮಗೆ ಕಾಣುವ ಬಿಡಿವೃತ್ತಗಳಲ್ಲಿಯೂ ಲಯದ ನಡೆ ಅರ್ಥದಂತೆ ಭಾವದಂತೆ ನಡೆದರೂ ಅದನ್ನು ಸ್ವೇಚ್ಛೆಯಾಗಿ ಒಡೆಯುವ ರೀತಿ ಬಹುಶಃ ಅಸಾಧು. ಸಹಜವಾಗಿ ಭಾವದ ಓಟವಾದರೂ ಲಯದ ಓಟದಲ್ಲಿ ಹೊಂದಿಕೊಂಡರೆ ಚೆನ್ನ. ಸಣ್ಣದರಿಂದ ದೊಡ್ಡದಕ್ಕೆ, ದೊಡ್ಡದರಿಂದ ಸಣ್ಣದಕ್ಕೆ ಪಂಕ್ತಿ ತಿರುಗುವಾಗ ಆ ತಿರುಗು (ವೃತ್ತ?)– ಸಣ್ಣದು ದೊಡ್ಡದಕ್ಕೆ ಹೇಗೆ ಸೇರಿಕೊಳ್ಳುತ್ತದೆ, ದೊಡ್ಡದು ಸಣ್ಣದನ್ನು ಹೇಗೆ ಎಳೆದುಕೊಳ್ಳುತ್ತದೆ– ಶ್ರುತಿ ಸುಭಗವಾಗಿದ್ದರೆ ಮೇಲು– ಎಂಬ ತತ್ವವನ್ನು ನಾವು ಅವರ ಓದಿನಲ್ಲಿ ಕಂಡೆವು. ತ್ರಿಪದಿ, ಸಾಂಗತ್ಯ, ಪಿರಿಯಕ್ಕರ– ಇವುಗಳ ಓಟದಲ್ಲಿ ಎಷ್ಟು ಸೂಕ್ಷ್ಮವಾದ ಕೀಳ್ಮೆ ಅಡಗಿದೆ ಎಂಬುದನ್ನು ಅರಿತರೆ ಅವುಗಳ ಅಂಶರಚನೆ ಕವಿತೆಗೆ ಸೌಂದರ್ಯವನ್ನೂ ಸಂತೋಷವನ್ನೂ ತರುತ್ತದೆ. ಒಟ್ಟಿನಲ್ಲಿ ನುಡಿಯುವ ನಾಲಿಗೆ, ತುಟಿ, ಉಸಿರ ನಡೆಯನ್ನು ಒಂದು ಕಡೆ ನಡಸಿದರೆ, ಕೇಳುವ 'ಕಿವಿ' ಇನ್ನೊಂದು ಕಡೆಯಿಂದ ಅದಕ್ಕೆ ಮಿತಿಯನ್ನೊ ಧಾತುವನ್ನೊ ಕುಣಿತವನ್ನೊ (skend) ಹಾಳತವನ್ನೊ ಸುಭಗತೆಯನ್ನೊ ಸೂಚಿಸುತ್ತದೆ. ಛಂದಸ್ಸು ಎನ್ನುವುದನ್ನು ಇಟ್ಟುಕೊಂಡರೆ, ಇಂಥ ಪ್ರಸಂಗಗಳನ್ನು ಗಮನಿಸಿದರೆ ಮೇಲು ಎನ್ನಿಸುತ್ತದೆ. 'ಶ್ರೀ' ಯವರು ತಮ್ಮ ಓದಿನಲ್ಲಿ ಇಷ್ಟನ್ನೂ ಸ್ಪಷ್ಟವಾಗಿ ಹೇಳದಿದ್ದರೂ ಪಾಠ ಪ್ರವಚನಗಳಲ್ಲಿ ಹೆಚ್ಚಾಗಿ ಅಲಂಕಾರ, ವ್ಯಾಕರಣ ಮುಂತಾದ ಭಾಗಗಳನ್ನು ಒತ್ತಿ ಹೇಳದಿದ್ದರೂ ಕವಿತೆಯಲ್ಲಿನ ತತ್ವದರ್ಶನ, ಕವಿನಿಲವು– attitude- ಕವಿಯ, ಕವಿತೆಯ ಒಟ್ಟು ದೃಷ್ಟಿ, ರೀತಿ, ಗಮನ ಯಾವ ಕಡೆ ಇದೆ, ಯಾವುದನ್ನು ಗಮನಿಸಬೇಕು, ಅದಕ್ಕೆ ಮಾತ್ರ ಬೆಲೆ ಎಂಬುದನ್ನು ತೋರಿಸುತ್ತಿದ್ದರು. ಅದಕ್ಕೆ ಅವರ ಸಮಯ ವಿನಿಯೋಗವಾಗುತ್ತಿತ್ತು.

5 ಎಚ್. ಡಿ. ವೇಲಂಣಕರರು ಅದನ್ನು ಗಾನ, Music ಎಂದೇ ಕರೆಯುತ್ತಾರೆ. ಛಂದಸ್ಸಿನ ಲಯ ಬೇರೆ; ಸಂಗೀತದಲ್ಲಿ ಲಯ ಬೇರೆ, ಅದು ತಾಳಲಯ. Rhythm ಎಂಬುದನ್ನು ಇನ್ನೂ ವಿಸ್ತಾರವಾಗಿ ಕಲೆಗಳೆಲ್ಲದರಲ್ಲಿಯೂ ಬಳಸುತ್ತಾರೆ.

6 'ಶ್ರೀ' ಯವರು ಕನ್ನಡ ಕವಿತೆಯಲ್ಲಿ ಮೊದಲಿನಿಂದಲೂ ಎಂಥೆಂಥ ವಿಷಯಗಳು ಕಾಣುತ್ತವೆ; ಅವನ್ನು ಸಹಜವಾಗಿ ಸುಂದರವಾಗಿ ಯಾವ ಯಾವ ಗ್ರಂಥಗಳು ಹೇಳುತ್ತವೆ– ಅವನ್ನೆಲ್ಲ ಸೇರಿಸಿ ಒಂದು ಕವನ ಸಂಕಲನವನ್ನು ಮಾಡಬೇಕು ಎಂಬುದಕ್ಕೆ ಒಂದು ಪಟ್ಟಿಯನ್ನು ಹಾಕಿಕೊಂಡಿದ್ದರು. ಅದರ ಸ್ಥೂಲ ಪರಿಚಯವನ್ನು 'ಸಾಹಿತ್ಯ:ಸಂಪ್ರದಾಯ ಮತ್ತು ಹೊಸಮಾರ್ಗ' ಎಂಬ ನನ್ನ ಭಾಷಣಗಳ ಪುಸ್ತಕದಲ್ಲಿ ಅಚ್ಚುಮಾಡಿದೆ.

7 ಷಟ್ಪದಿಯ ೩–೬ನೆಯ ಪಂಕ್ತಿಗಳಲ್ಲಿ ಕಡೆಗೆ ನಿಲ್ಲುವ ಅಂಶ ಇಂದಿಗೂ ಒಂದು ಗಣಕ್ಕೆ ಸಮಾನ ಎಂದು ಹೇಳಿ, ಸಂಗೀತದ ತಾಳದಂತೆ ತಾಳ ಬಡಿದು ನಿಲ್ಲಿಸಬಹುದು ಎಂಬ ತತ್ವವನ್ನು ಅವರು ಒಪ್ಪುತ್ತಿದ್ದರೊ ಇಲ್ಲವೊ. ಕವಿತೆಯ ಛಂದಸ್ಸಿನ ಓಟಕ್ಕೂ ತಾಳದ ನಿರ್ಘೃಣ ನಿಯತಿಗೂ ತುಂಬಾ ವ್ಯತ್ಯಾಸ– ಎಂಬುದನ್ನು ಸೂಕ್ಷ್ಮವಾದ ಎಲ್ಲ ಕವಿಗಳೂ ಗುರುತಿಸಬಲ್ಲವು.

ನಾವು ಕಾಲೇಜಿಗೆ ಹೋಗುವ ೧೯೧೭ಕ್ಕೆ ಮುಂಚೆಯೇ *A Hand- book of Rhetoric* ಎಂಬುದನ್ನು ಮದರಾಸ್ ವಿಶ್ವವಿದ್ಯಾನಿಲಯದ ಪಾಠಕ್ರಮಕ್ಕೆ ಬಳಸುವಂತೆ ಬರೆದು ಅಚ್ಚು ಮಾಡಿಸಿದ್ದರು. ಅದರ ಬೆಲೆಯನ್ನು ಇಂದು ಹೀಯಾಳಿಸಬಹುದು. ಆದರೆ, ಎಂಥ ಅಂಶಗಳು ಅಲಂಕಾರಕ್ಕೆ, ಪ್ರಯೋಗ, ಗದ್ಯಪದ್ಯ, ರಚನಾಸೌಭಾಗ್ಯದ ಗುಣಾವಗುಣ ಲಕ್ಷಣ ತಿಳಿಸುವುದಕ್ಕೆ ನೆರವಾಗುತ್ತವೆ, ಗಮನಕ್ಕೆ ಬರಬೇಕಾದ ಅಂಶಗಳು ಯಾವುವು ಎಂಬುದನ್ನು ಅರಿಯಬೇಕಾದರೆ ಅದನ್ನು ಈಗಲೂ ಓದಬೇಕು.[8]

* * *

'ಶ್ರೀ' ಯವರು ೧೯೦೯ರಲ್ಲಿ ಪ್ರೊಬೇಷನರಿ ಇಂಗ್ಲಿಷ್ ಅಧ್ಯಾಪಕರಾಗಿ, ಜನವರಿ ೧೯೧೦ ರಲ್ಲಿ ಅಧ್ಯಾಪಕರಾದರಂತೆ. ೧೯೧೪ ರಲ್ಲಿ ಅಸಿಸ್ಟೆಂಟ್ ಪ್ರೊಫೆಸರಾದರು. ೧೯೧೯ರಲ್ಲಿ– ನಾವು ಕಾಲೇಜಿಗೆ ಹೋದ ೨–೩ನೆಯ ವರ್ಷ– ಹಂಗಾಮಿ ಜೂನಿಯರ್(!) ಪ್ರೊಫೆಸರಾದರು. ನಾವು ಅವರನ್ನು ಪ್ರೊಫೆಸರೆಂದೇ ಎಂದುಕೊಂಡಿದ್ದೆವು. ನಾವು ಕಾಲೇಜ್ ಬಿಟ್ಟು ಎರಡುವರ್ಷವಾದ ಮೇಲೆ ೧೯೨೩ರಲ್ಲಿ ಗ್ರೇಡ್– ೨ ಇಂಗ್ಲಿಷ್ ಪ್ರೊಫೆಸರಾದರು. ಆಗ ಕಾಲೇಜ್ ಪ್ರೊಫೆಸರ್– ಯೂನಿವರ್ಸಿಟಿ ಪ್ರೊಫೆಸರ್ ಎಂಬ ಎರಡು ಗ್ರೇಡುಗಳಿದ್ದುವು. ನಮ್ಮವರೇ ಆಗಿದ್ದ ಹಿರಿಯಣ್ಣನವರು, ಶ್ರೀಕಂಠಯ್ಯನವರು ಅವರವರ ವಿದ್ಯಾವಿಭಾಗದಲ್ಲಿ ಆಗಿನ ಕಾಲಕ್ಕೆ ತಿಳಿದಿದ್ದ ಸುಮಾರು ಸಮಸ್ತವನ್ನೂ ಗ್ರಹಿಸಿ, ಕಡೆಯ ಮಾತನ್ನು ಹೇಳಬಲ್ಲಂತಹ ವಿದ್ವಾಂಸರು. ೧೯೨೬ರಿಂದ ೩೦ರವರೆಗೂ ಅವರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿ ಕೆಲಸ ಮಾಡಿದ ಮೇಲೆ ಅವರಿಗೆ ಪ್ರೊಫೆಸರ್ ಹುದ್ದೆ ಬಂದಿತು. ಅಲ್ಲಿ ಕೆಲಸ ಮಾಡಿ ಬರಬೇಕಾಯಿತು– ರಿಜಿಸ್ಟ್ರಾರ್ ಸಂಬಳಕ್ಕೆ ಏರಿ ಪ್ರೊಫೆಸರಾಗಲು. ಅಲ್ಲಿಂದ ಸೆಂಟ್ರಲ್ ಕಾಲೇಜಿಗೆ ಬೆಂಗಳೂರಿಗೆ ಬಂದರು. ಈ ಊರಲ್ಲಿ ಸಾಹಿತ್ಯಕ್ಕೆ ತೆರೆದ ಮನಸ್ಸಾಗಲಿ ಮೌಲ್ಯವಿವೇಚನೆಗಳಾಗಲಿ ಕಡಮೆಯೆಂದು ಅವರಿಗೂ ಕಾಣಿಸಿರಬೇಕು. ಇಂಗ್ಲಿಷ್ ಪ್ರೊಫೆಸರುಗಳಿಗೆ ಗೊತ್ತಿತ್ತು– ಶ್ರೀಕಂಠಯ್ಯನವರು ಲಂಡನಿಗೊ ಆಕ್ಸ್‌ಫರ್ಡ್‌ಗೂ ಹೋಗದಿದ್ದರೂ ಅಲ್ಲಿನ ಯಾವ ಡಾನ್ ವಿದ್ವಾಂಸರಿಗೂ ಕಡಮೆ ಯೋಗ್ಯತೆಯವರಲ್ಲ ಎಂದು. ನಾವು ಅಂಥವರನ್ನೂ ಕಂಡಿದ್ದೆವು; ಅವರ ಪಾಠ ಕೇಳಿದ್ದೆವು; ಎಲ್ಲಿಂದೆಲ್ಲಿಗೆ ಹೋಲಿಕೆ ಎನ್ನಿಸುತ್ತಿತ್ತು. ಅವರನ್ನು ಹೊಗಳಕೂಡದು ಎಂದಲ್ಲ; ಇವರನ್ನೇಕೆ ಕೀಳ್‌ಗೊಳಿಸಬೇಕು?– ಎಂಬ ನೋವು ಅವರ ವಿದ್ಯಾರ್ಥಿಗಳಾದ ನಮಗೆ.

ಅವರು ರಿಜಿಸ್ಟ್ರಾರ್ ಆದ ಕಾಲ ಒಂದು ಶುಭಸಂದರ್ಭದ್ದು: ಬ್ರಜೇಂದ್ರನಾಥಶೀಲರು ಆಗ ವೈಸ್ ಛಾನ್ಸೆಲರ್. ಉಳಿದ ವಿಷಯಗಳಲ್ಲಿ ಹೇಗೇ ಇರಲಿ,[9] ಆತನಿಗೆ ದೇಶಭಾಷೆಯಲ್ಲಿ ಪ್ರೀತಿಯಿತ್ತು. ಬಂಗಾಳ ಆವರೆಗಾಗಲೆ ಬಂಗಾಳಿ ಸಾಹಿತ್ಯವನ್ನು ಹೇಗೆ ಬಲಪಡಿಸಿತ್ತು, ಕೀರ್ತಿಸ್ಥಾನವನ್ನು ತಂದಿತ್ತು ಎಂಬುದನ್ನು ಬಲ್ಲವರು. ಆದ್ದರಿಂದ ಕನ್ನಡದ ಒಂದು ಆನರ್ಸ್ ಇಲಾಖೆ, ಸ್ನಾತಕೋತ್ತರ ಎಂ.ಎ. ವ್ಯಾಸಂಗ ಇವನ್ನು ೧೯೨೭ರಲ್ಲಿ ತೆರಸುವುದಕ್ಕೆ ಅವಕಾಶ ಮಾಡಿಕೊಟ್ಟರು. ಸೆನೇಟಲ್ಲಿಯೊ ಬೇರೊಂದು

ಕಡೆಯೊ– ಮುಖ್ಯವಾಗಿ 'ಶ್ರೀ'ಯವರು, ಅವರ ಜೊತೆಗೆ ಇನ್ನಾರಾದರೂ– ಕನ್ನಡಕ್ಕಾಗಿ ಬಾಯಿ ತೆರೆದರೆ, ನಮ್ಮವರೇ "The Kannada knights have stood up!" ಎಂದು ಹಲ್ಲು ಕಿಸಿಯುತ್ತಿದ್ದುದುಂಟು. ಆವರೆಗಾಗಲೆ ಎಂ.ಎ. ವ್ಯಾಸಂಗಾವಕಾಶ, ಇಲಾಖೆ ದೊರೆತಿದ್ದ ಸಂಸ್ಕೃತ, ಪರ್ಷಿಯನ್, ಭಾರತ ಚರಿತ್ರೆ– ಮೂರು ಇಲಾಖೆಗಳವರೂ ಕನ್ನಡಕ್ಕೆ ಆ ಅಗತ್ಯ ಏನಿದೆ? ಎಂ.ಎ.ಗೆ

8 ಒಂದು ಸಣ್ಣ ಸಂಗತಿ ನನ್ನ ನೆನಪಿಗೆ ಬರುತ್ತದೆ. ಎರಡನೆಯ ದಶಕ ಮುಗಿವ ಸುಮಾರಿನಲ್ಲಿ 'ಶ್ರೀ' ಯವರೊಡನೆ ನಾನು ಮಂಗಳೂರಿಗೆ ಹೋಗುವ ಪ್ರಸಂಗ ಒದಗಿತು. ಅಲ್ಲಿನ ಸೈಂಟ್ ಅಲೊಯ್ ಸಿಯಸ್ ಕಾಲೇಜ್ ಪ್ರಿನ್ಸಿಪಲ್ ಫಾದರ್ ಪ್ರಾಸೆರ್ಪಿಯೊ. ಅವರು ಅಲ್ಲಿ ಇಂಗ್ಲಿಷ್ ಪ್ರೊಫೆಸರ್. ಇವರು ಷೇಕ್ಸ್ಪಿಯರನ್ನು ಕುರಿತೊ ಏನೊ ಮಾತನಾಡಿದರು. ಪರಿಚಯ ಭಾಷಣದಲ್ಲಿ ಪ್ರಾಸೆರ್ಪಿಯೊ ಈ ಮಾತನ್ನು ಹೇಳಿದರು: "ಇದು ಮಂಗಳೂರಿಗೇ ಒಂದು ಪುಣ್ಯದ ದಿನ. ನಾನು ಇಟಲಿಯಿಂದ ಬಂದ ಪಾದ್ರಿ. ಹಲವು ದಿನಗಳಿಂದ ಇಲ್ಲಿ ಪಾಠ ಹೇಳುತ್ತಿದ್ದೇನೆ. ಮದರಾಸ್ ವಿಶ್ವವಿದ್ಯಾನಿಲಯದಲ್ಲಿ Rhetoric ಎಂಬ ವಿಷಯವನ್ನು ಪಠ್ಯಭಾಗವಾಗಿ ನೇಮಿಸಿದ್ದರು. ಅದರ ನೆಲಸೇನು ಎಂಬುದು ಮನಸ್ಸಿಗೆ ವಿಶದವಾಗಿ, ಖಚಿತವಾಗಿ ತಿಳಿಯದಿದ್ದ ಕಾಲದಲ್ಲಿ ಪ್ರೊ. ಬಿ. ಎಂ. ಶ್ರೀ. ಅವರ A Hand book of Rhetoric ನನಗೆ ಸಿಕ್ಕಿ, ತುಂಬಾ ಉಪಕಾರಮಾಡಿತು. ಅದುದರಿಂದ ಒಂದು ರೀತಿಯಲ್ಲಿ ನಾನೂ ಅವರ ಶಿಷ್ಯವರ್ಗಕ್ಕೆ ಸೇರಿದವನು," Rhetoric, Poetics ಎಂದು ಎಷ್ಟು ವ್ಯತ್ಯಾಸ ಮಾಡಿದರೂ ಅರಿಸ್ಟಾಟಲ್ ಬರೆದ Rhetoric ಅನ್ನು ಕುರಿತು ಐ.ಎ. ರಿಚರ್ಡ್ಸ್ ಅವರು ಬರೆದಿರುವ ಗ್ರಂಥವನ್ನು ನಮ್ಮ ವಿದ್ಯಾರ್ಥಿಗಳು ಓದಿ ಪ್ರಯೋಜನ ಪಡೆಯಬೇಕೆಂಬುದು ನನ್ನ ಅಭಿಲಾಷೆ.

9 ಶ್ರೀ ಹಿರಿಯಣ್ಣನವರು ಆತನ ಯಾವುವೊ ಮಾತುಗಳಿಗೆ ಬೇಸರಪಟ್ಟು ತಮ್ಮನ್ನು ರಿಟೈರ್ ಮಾಡಿಸಿಕೊಡರು. ಹೇಳಿಕೊಡುವಂಥದೇನಿದೆ?–

ಎಂಬಂತೆ ನುಡಿದು ಅಡ್ಡಬಂದಿದ್ದರು. ಈ ಬಗೆಯ ತೆಗಳಿಕೆ ಕೀಳೆಣಿಕೆ ಇಂಗ್ಲಿಷ್ ವ್ಯಾಸಂಗಕ್ಕೆ ಕೇಂಬ್ರಿಜ್ ಅಲ್ಲಿ 1907-8 ರ ವರೆಗೂ ಇತ್ತು ಎಂದು Quiller-couch ಹೇಳಿದ್ದಾರೆ(Art of writing). ಕನ್ನಡವನ್ನು ಕುರಿತು ಮಾತನಾಡುವುದೇ ಹೀನಾಯವೆಂಬಂತಿತ್ತು ಆಗಲೂ ಇಂಗ್ಲಿಷ್ ಉಪನ್ಯಾಸಕರು, ಪ್ರಾಧ್ಯಾಪಕರು ಕನ್ನಡದಲ್ಲಿ ಮಾತನಾಡಿದರೆ ಅದು ಮೇಲಿನ ಆ ಇಲಾಖೆಯ ಸೀಮೆ ಪ್ರೊಫೆಸರುಗಳಿಗೆ ಅತೃಪ್ತಿ ಉಂಟುಮಾಡುವ ಸನ್ನಿವೇಶ. ಇತ್ತ, ಕನ್ನಡದವರು ಇಂಗ್ಲಿಷಲ್ಲಿ ಪಾಶ್ಚಾತ್ಯ ಸಂಸ್ಕೃತಿ ಸಾಹಿತ್ಯಗಳನ್ನು ಕುರಿತು ಅವರಿಗಿಂತ ಮೇಲಾಗಿ ಉಪನ್ಯಾಸ ಮಾಡಬಲ್ಲವರಾಗಿದ್ದರು; ಕನ್ನಡ ಒಂದೇ ಅಲ್ಲ ಎಂಬ ನಂಬಿಕೆ ಬರುವಂತೆ ಉಪನ್ಯಾಸ ಮಾಡುತ್ತಿದ್ದರು. ಹಲವೇಳೆ ಕರ್ನಾಟಕ ಸಂಘದವರೂ ಇತರರೂ ಕನ್ನಡದಲ್ಲಿ ಮಾತನಾಡಲು ಕೇಳಿದರೆ ಶ್ರೀಕಂಠಯ್ಯನವರು ಇಂಗ್ಲಿಷಲ್ಲಿ ಬೇಕಾದರೆ ಮಾತನಾಡುತ್ತೇನೆ ಎಂದು ಹೇಳಿದುದು ಈಗಿನ್ನೂ ಆಕ್ಷೇಪಕವಾಗಿ, ವ್ಯಂಗ್ಯಪ್ರತೀತಿಯದಾಗಿ ನಿಂತಿದೆ. ಕನ್ನಡದಲ್ಲಿ ಮಾತನಾಡುವ ಅಭ್ಯಾಸ ನಮ್ಮ ಇತರ ಇಂಗ್ಲಿಷ್ ಅಧ್ಯಾಪಕರೇ ಇಟ್ಟುಕೊಳ್ಳಲಿಲ್ಲ; ಅಂಥವರು ಮೈಸೂರು ಗಡಿಯನ್ನು ದಾಟಿ ಕನ್ನಡಕ್ಕಾಗಿ ಹೋದವರೂ, ಅಲ್ಲ. ಕನ್ನಡ ಎಂಬ ವಿಷಯಕ್ಕೇ ಆ ಕಾಲದಲ್ಲಿ ಮಾನ್ಯತೆ ಇರಲಿಲ್ಲ.

ಅವರು ರಿಜಿಸ್ಟ್ರಾರ್ ಆಗಿದ್ದಾಗ ಮೊದಲಿನಂತೆಯೇ ಕನ್ನಡ ಇಂಗ್ಲಿಷ್ ಎರಡೂ ವಿಭಾಗಗಳ ಸಂಪರ್ಕವನ್ನು ಉಳ್ಳವರಾದುದರಿಂದ ವಿದ್ಯಾರ್ಥಿಗಳನ್ನು ಕರೆದು ಕೆಲವು 'Study Circles' –ಅಧ್ಯಯನ ಗೋಷ್ಠಿಗಳನ್ನು ಮೈಸೂರಲ್ಲಿ ರಚಿಸಿದರು. ಅಲ್ಲಿ ಸೇರಿದ ಕೆಲವರಿಗೆ ಕನ್ನಡ ಭಾಷಾಚರಿತ್ರೆ., ಕನ್ನಡ–ದ್ರಾವಿಡ ಛಂದಸ್ಸು ಮುಂತಾದುವನ್ನು ಕುರಿತು ಹಾರ್ದವಾಗಿ ಮನಸ್ಸು ತೆರೆಯುವಂತೆ ಖಾಸಗಿ ಉಪನ್ಯಾಸಗಳನ್ನು ಕೊಟ್ಟರು. ಮುಂದಿನ ಕಾಲಗಳಲ್ಲಿ ಪ್ರಸಿದ್ಧರಾದವರು, ಆ ಸ್ಫೂರ್ತಿಯಿಂದ ಬೆಳೆದವರು; ದಿಗ್ದರ್ಶನಪಡೆದವರು.

* * *

ಎರಡು ಒಬ್ಬೆಗಳಲ್ಲಿ ಸ್ವಲ್ಪ ಸ್ವಲ್ಪ 'ಇಂಗ್ಲಿಷ್ ಗೀತಗಳು' ಮುಂಚೆ ಪ್ರಕಟವಾಗಿದ್ದದ್ದು, ಡಿ.ವಿ.ಜಿ. ಅವರು ತಮ್ಮ ಅರ್ಥಸಾಧನೆ ಕರ್ನಾಟಕ ಜನಜೀವನ ಎಂಬ ಪತ್ರಿಕೆಯಲ್ಲಿ ಇನ್ನಷ್ಟನ್ನು ಸುಮಾರು ೧೯೨೪ರಲ್ಲಿ ಅಚ್ಚು ಮಾಡಿದರು. ಇದಾದ ಮೇಲೆ 'ಶ್ರೀ'ಯವರನ್ನು ಒಪ್ಪಿಸಿ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ– ಎಂದರೆ ಇವರ ಹಿಂದಿನ ವಿದ್ಯಾರ್ಥಿಗಳಾಗಿದ್ದ ಕೃಷ್ಣಶಾಸ್ತ್ರಿಗಳೂ ಟಿ.ಎಸ್.ವೆಂಕಣ್ಣಯ್ಯನವರೂ– 'ಇಂಗ್ಲಿಷ್ ಗೀತಗಳ'ನ್ನು ೧೯೨೬ರಲ್ಲಿ ಪ್ರಕಟಿಸಿದರು.[10] 'ಇಂಗ್ಲಿಷ್ ಗೀತಗಳ' ಪ್ರಭಾವ ಎಷ್ಟು ದೊಡ್ಡದಾಯಿತೆಂಬುದನ್ನು ಇತರರು ವರ್ಣಿಸಿದ್ದಾರೆ. ಆವರೆಗಾಗಲೇ ಕನ್ನಡದಲ್ಲಿ ನಮ್ಮ ಕಡೆ ಬರೆಯುತ್ತಿದ್ದ ೩–೪ ಜನಗಳ ಜೊತೆಗೆ ಇನ್ನೂ ಕಿರಿಯರಾದ ಶ್ರೀಮಾನ್ ಪುಟ್ಟಪ್ಪನವರು ಕವಿತೆಗಳನ್ನು ಬರೆಯತೊಡಗಿದ್ದರು. ಕಾರಣಾಂತರಗಳಿಂದ 'ಪ್ರಬುದ್ಧ ಕರ್ಣಾಟಕ ' ದಲ್ಲಿ ಅಚ್ಚು ಮಾಡಿಸದೆ, 'ಜಯಕರ್ನಾಟಕ' ದಲ್ಲಿ ಅವು ಅಚ್ಚಾದುವು. ಅಂತೂ 'ಇಂಗ್ಲಿಷ್ ಗೀತಗಳ' ಕಾರಣದಿಂದ ಒಂದು ಮಹಾಪರಿಣಾಮ ಉಂಟಾಯಿತು. ಗೀತಗಳ ಛಂದಸ್ಸನ್ನು ಕುರಿತೇ ಅವರು "ಮೂಲದ ಕವನಗಳ ನಡೆ, ಲಯಗತಿಯ ಹತ್ತಿರ ಹೊಂದುವಂತೆ ನಮ್ಮ ಜಾಯಮಾನಕ್ಕೆ ಒಗ್ಗಿದ ಮಾತ್ರಾಗಣಗಳು ಅಂಶಗಣಗಳು ಹೇಗೆ ಓಡುತ್ತವೆ, ನೋಡಿ; ಪ್ರಯತ್ನ ಮಾಡಿದೆ, ಎಚ್ಚರದಿಂದ ಪೂರ್ತಿ ತಿಳಿವಿನಿಂದ ಇದನ್ನು ಸಾಧಿಸಿ ಹೊಸ ಛಂದೋವಿಲಾಸವನ್ನು ಮೆರಸಬೇಕು"– ಎಂಬಂತೆ ಮಾತನಾಡಿದ್ದರು.[11] ಅವರ ಬಾಯಲ್ಲಿ ಆ ಕೆಲವು ಪದ್ಯಗಳು ಹೇಗೆ ನುಡಿಯುತ್ತಿದ್ದುವೆಂಬುದನ್ನು ಕೇಳಿದವರಿಗಲ್ಲದೆ ಆ ವಿಲಾಸಮನಗಾಣದು. ಆಗ ಧ್ವನಿಮುದ್ರಣದ ಬಳಕೆ ಸುಲಭವಾಗಿರಲಿಲ್ಲ.

10 ಕಾಪಿರೈಟ್ ನಿಯಮವನ್ನು ಉಲ್ಲಂಘಿಸಿ ಕೆಲವು ಚಿತ್ರಗಳನ್ನು, ವಿಶೇಷವಾಗಿ ಕೀಟ್ಸ್ ಸೆಂಟಿನರಿ ಗ್ರಂಥಕ್ಕೆ ಲಾಂಛನವಾಗಿ ಹಾಕಿದ್ದ ಅವನ ಚಿತ್ರವನ್ನು ಕೂಡ, ನಾನು ತೆಗೆದುಕೊಂಡು ಹೋಗಿ ಕೊಟ್ಟೆ. ಆಗ ಇನ್ನೂ ಮೈಸೂರಲ್ಲಿ 'ಬರ್ನ ಕನ್ ವೆನ್ ಷನ್' ವ್ಯಾಪ್ತಿ ಕಾಪಿರೈಟಿಗಿರಲಿಲ್ಲ. ಅದನ್ನು ನೆಪಮಾಡಿಕೊಂಡು ಅಂಥ ಚಿತ್ರಗಳು ಕೆಲವನ್ನು ಹಾಕಿದೆವು.

11 ತೀ. ನಂ. ಶ್ರೀ. ಇದನ್ನು ಹೇಳಿದ್ದಾರೆ.

* * *

ಯಾವುದರಲ್ಲಿಯೂ ಯಾರಿಗೂ ಕಡಮೆಯಾದಂತಿಲ್ಲದಿದ್ದ ಶ್ರೀಕಠಯ್ಯನವರು ಆಗ ಇನ್ನೂ ಅಸಿಸ್ಟೆಂಟ್ ಪ್ರೊಫೆಸರ್ ಮಾತ್ರವೇ ಆಗಿದ್ದರು. ಪ್ರೊಫೆಸರ್ ಆದರೇನು? ಅಸಿಸ್ಟೆಂಟ್ ಆದರೇನು?– ಅವರ ಪಾಠ ಹೇಳುವ ವೈಖರಿ ಅವರದೇ. ನಾನು ತಿಳಿದಮಟ್ಟಿಗೆ ಅವರು ಯಾವ ವಿಮರ್ಶಕನ ಹೆಸರನ್ನೂ ಗ್ರಂಥಕರ್ತನ, ಕೃತಿಯ ಅಥವಾ ಮೌಲ್ಯನಿರ್ದೇಶನಕ್ಕೆ, ಸ್ಥಾಪನೆಗೆ ಬಳಸಿದ ನೆನಪಿಲ್ಲ. ಆದರೆ ಎಲ್ಲವನ್ನೂ ಓದಿರುತ್ತಿದ್ದರು. ತಮ್ಮಲ್ಲಿಯೇ ಆ ಸಂಬಂಧದಲ್ಲಿ ಮೂಲಪುಸ್ತಕಗಳು, ಜೀವನಚರಿತ್ರೆ ಮತ್ತು ವಿಮರ್ಶನ ಗ್ರಂಥಗಳು ಇದ್ದರೂ ಮಹಾರಾಜಾ ಕಾಲೇಜಲ್ಲಿಯೂ ವಿಶ್ವವಿದ್ಯಾನಿಲಯದ ಭಂಡಾರದಲ್ಲಿಯೂ ಯಾವ ಪುಸ್ತಕಗಳು ಬಂದರೂ ಅವನ್ನು ಮೊದಲು ಓದಿ, ಬೇಗ ಮುಗಿಸಿ, ಹಿಂದಕ್ಕೆ ಕೊಡುತ್ತಿದ್ದರು.

ಅವರು ನಮಗೆ ಪಾಠ ಹೇಳಿದ ಮೊದಲ ಪುಸ್ತಕ ಜಾರ್ಜ್ ಎಲಿಯಟರ Silas Marner ಎಂದು ನನ್ನ 'ಕಾಲೇಜ್ ದಿನಗಳಲ್ಲಿ' ಹೇಳಿದ್ದೇನೆ. ೨–೩ ತಿಂಗಳು ಆಕೆ ಇದ್ದ ಕಾಲ, ಸಾಮಾಜಿಕ ಸನ್ನಿವೇಶಗಳು, ಆಕೆಯ ವ್ಯಕ್ತಿವಿಶೇಷ, ಮೇರಿ ಆನ್ ಎವನ್ಸ್ ಎಂಬ ಹೆಸರಿನ ಆಕೆ 'ಜಾರ್ಜ್ ಎಲಿಯಟ್' ಎಂಬ ಗಂಡು ಹೆಸರನ್ನು ಯಾವ ಸಂದರ್ಭದಲ್ಲಿ, ಏಕೆ ಇಟ್ಟುಕೊಂಡಳು– ಎಂಬುದನ್ನು ಹೇಳಿ, ಆಕೆಯ ಒಂದು ಬಗೆಯ ಅಜ್ಞೇಯವಾದಕ್ಕೆ (Agnosticism) ಆಗ ಉಂಟಾಗಿದ್ದ ವಿಜ್ಞಾನದ ಪ್ರಭಾವ ಎಷ್ಟು ದೊಡ್ಡದಾಗಿತ್ತು ಎಂಬುದನ್ನು ತಿಳಿಸಿದರು, ಆಕೆಯ ತಂದೆಯ ಸುಮಾರು ಪ್ರತಿರೂಪದಂತಿರುವುದು 'ಆಡಂ ಬೀಡ್' ಎಂಬುದನ್ನು ತಿಳಿಸಿದರು, ಆಕೆ ತನ್ನ ಪುಸ್ತಕಗಳನ್ನು ಯಾವ ಕ್ರಮದಲ್ಲಿ ಬರೆದಳು ಎಂಬುದನ್ನೂ ಜಾರ್ಜ್ ಹೆನ್ರಿ ಲೂಯಿ ಅನ್ನು ಹೇಗೆ ಸಮಾಜ ಮತ್ತು ರಾಜ್ಯದ ಕಾನೂನನ್ನು ಲೆಕ್ಕಿಸದೆ ಮದುವೆ ಮಾಡಿಕೊಂಡು ಜೀವನ ನಡಸಿದಳು ಎಂಬುದನ್ನೂ ತಿಳಿಸಿದರು. ಒಂದು ಸಂಗತಿಯನ್ನು ಹೇಳಬೇಕು. ವಿದ್ಯಾರ್ಥಿಗೆ ಅವರು ಕೊಟ್ಟ ನಿರ್ದೇಶನ: "ಯಾವ ಸಂಗತಿಯನ್ನು ಕುರಿತಾದರೂ 'ಎನ್ ಸೈಕ್ಲೊಪೆಡಿಯ ಬ್ರಿಟಾನಿಕ' ನೋಡಿ; 'ಕೇಂಬ್ರಿಜ್ ಹಿಸ್ಟರಿ ಆಫ್ ಲಿಟರೇಚರ್' ಅನ್ನೂ D.N.B. (ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ) ನೋಡಿ; ಅವರನ್ನು ಕುರಿತೇ ಬರೆದಿರುವ ಪ್ರಖ್ಯಾತ ಜೀವನ ಚರಿತ್ರೆಗಳ ಜೊತೆಗೆ E.M.L Series (ಇಂಗ್ಲಿಷ್ ಮೆನ್ ಆಫ್ ಲೆಟರ್ಸ್) ಗ್ರಂಥವನ್ನು ಓದಿ. ಅತಿ ವಿವರಗಳಿಗೆ, ಸಣ್ಣ ಸಂಗತಿಗಳಿಗೆ ಗಮನ ಕೊಡಬೇಕಾದ್ದಿಲ್ಲ; ಮುಖ್ಯವಾಗಿ, ಸಾರವತ್ತಾಗಿ ಅವರ ಜೀವನಸ್ವರೂಪ ಗೊತ್ತಾಗುವಂತೆ ಆ ಅ ಲೇಖನಗಳಲ್ಲಿ ಬಹುಶಃ ಒಳಗೊಂಡಂತಿರಬಲ್ಲ ವಿಶೇಷ ತಿಳಿಯುವಂತೆ ಸಂಗತಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ" ಎಂಬುದು. "Details- ವಿವರಾಂಶಗಳು– ಹಲವೇಳೆ ಮೂಲಸ್ವರೂಪವನ್ನು ನುಂಗಿಬಿಡಬಲ್ಲವು; ಎಚ್ಚರಿಕೆಯಿಂದ ಓದಿ; ನನಗೆ ಅದು ಪ್ರಿಯ"– ಎಂದು ಹೇಳಿದ್ದರು. ಆಮೇಲೆ ಕಾದಂಬರಿಯ ಸ್ವರೂಪ, ಅದರಲ್ಲಿ ನಾವೆಲ್, ರೊಮಾನ್ಸ್ ಇವುಗಳ ತಾರತಮ್ಯ; ಸಣ್ಣಕತೆ, ಲಂಬಕತೆ, ಕಾದಂಬರಿಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿದರು. ಇದೆಲ್ಲ ನಮಗೆ ಹೊಸದಾಗಿ ಮನಸ್ಸಿಗೆ ಸುಳಿದು ಬಂದ ಸಂಗತಿಗಳು. ಇಂಗ್ಲಿಷಲ್ಲೇ ಪಾಠ ಕಲಿತಿದ್ದ ನಮಗೆ ವಿಷಯಗ್ರಹಣ ಕಷ್ಟವಾಗುತ್ತಿರಲಿಲ್ಲ. ಸುಮಾರು ಮೂರು ತಿಂಗಳ ಕಾಲ ಈ ಕಾರ್ಯ ನಡೆದು ಒಂದು ಲೇಖನವನ್ನು ಬರೆಯಿರಿ ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ಜಾರ್ಜ್ ಎಲಿಯಟ್ ಮತ್ತು ಆಕೆಯ ಜೀವನ, ಆಕೆಯ ಮೂರ್ತಿತ್ವದ ಪರಿಚಯ ಎಂಬುದು ವಿಷಯ. ಹೊಸದಾಗಿ ಕಾಲೇಜಿಗೆ ಹೋಗಿದ್ದು, ಅಷ್ಟು ದೊಡ್ಡ ವಿದ್ವಾಂಸರು ಹೇಳಿದ ಮೇಲೆ ಬರೆಯಲೇಬೇಕೆಂದು ಸುಮಾರು ೧೦೦ಕ್ಕೆ ೬೦ ಮಂದಿ ಬರೆದೆವು. ಅವು ಬಂದಾಗ "ಇಷ್ಟು ಸಂಖ್ಯೆಯ ಲೇಖನಗಳು ಬರುತ್ತವೆಂದು ನಾನು ಎಣಿಸಿರಲಿಲ್ಲ. ಸಂತೋಷ" ಎಂದರು.

೮–೧೦ ದಿನಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಲೇಖನಗಳನ್ನೂ ಪರಿಶೀಲಿಸಿ ತಂದು ತಪ್ಪುತೋರಿಸಿ ಹುಡುಗರ ಹೆಸರನ್ನು ನುಡಿಯದೆ ಲೇಖನಗಳನ್ನು ಹಿಂದಿರುಗಿಸಿದರು. ಹತ್ತಕ್ಕೆ ಹತ್ತು ಕೊಟ್ಟದ್ದು ಇಬ್ಬರಿಗೆ; ಒಂಬತ್ತು ೩–೪ ಜನಕ್ಕೆ; ಉಳಿದುವು ಕಡಮೆ ಕಡಮೆ. ಸೊನ್ನೆ ಹಾಕಿದವರ ಸಂಖ್ಯೆಯೂ ಇತ್ತು. ಸೊನ್ನೆ ಹಾಕಿದ್ದವರ ಪರವಾಗಿ ಒಂದೆರಡು ವಿಶ್ವಾಸದ ಮಾತುಗಳನ್ನು ಹೇಳಿ ದಾಟಿಕೊಂಡರು. ನಾನು ಎಂದಿಗೂ ಎರಡನೆಯ ದರ್ಜೆಯವನೇ[12]: ನನಗೆ ಒಂಬತ್ತು ಬಂದಿತ್ತು. ಕಾರಣ: ಇನ್ನು ಎರಡು ಸಂಗತಿಗಳನ್ನು ಉಳಿದವುಗಳ ಪ್ರಮಾಣಕ್ಕೆ ತಕ್ಕಂತೆ ತಿಳಿಸಿಲ್ಲವೆಂದು. ಈ ಸಂಗತಿ ನನಗೆ ಎಚ್ಚರಿಕೆ ಮತ್ತು ಹೆಚ್ಚು ವಿಚಕ್ಷಣೆಯಿಂದ ವ್ಯಾಸಂಗ ಮಾಡಬೇಕೆಂಬ ಅಭಿಲಾಷೆಯನ್ನು ಉಂಟುಮಾಡಿತು. ಅವರು ತಪ್ಪುಸರಿಗಳನ್ನು ತೋರಿಸುವ ರೀತಿಗೂ ಇತರರು ತೋರಿಸುವ ರೀತಿಗೂ ವ್ಯತ್ಯಾಸವಿತ್ತು.

'ಸೈಲಸ್ ಮಾರ್ನರ್' ಪುಸ್ತಕ ಗಾತ್ರದಲ್ಲಿ ಚಿಕ್ಕದು. ಆತ ನೆಯ್ಗೆಯವನು. ಗ್ರಂಥವನ್ನು ಮೂರು ಭಾಗ ಮಾಡಿ ಓದಬೇಕು. ಅವನಿಗೆ ದೈವಶ್ರದ್ಧೆ, ಧರ್ಮಶ್ರದ್ಧೆ ಹೇಗೆ ಸಡಿಲವಾಗಿ ಹೋಯಿತು; ಪುನಃ ಅದು ಹೇಗೆ ಬಂದಿತು? ಬರುವುದಕ್ಕೆ ಕಾರಣ ಎಪ್ಪಿ ಎಂಬ ಹೆಸರಿನ ಒಂದು ಸಣ್ಣ ಮಗು ತನ್ನ ಅಂಗಳಕ್ಕೆ ಅನಿರೀಕ್ಷಿತವಾಗಿ ಬಂದು ಸೇರಿಕೊಂಡಾಗ ಬಂದ ಪ್ರಸಂಗ; ಆ ಮಗು ಹುಟ್ಟಿ ಬೆಳೆದ, ಅದರ ತಾಯಿತಂದೆಯರ ಕಥಾಭಾಗ ಆಮೇಲೆ– ಹೀಗೆ ವಿಂಗಡಿಸಿಕೊಂಡು, ಹತ್ತು ನಿಮಿಷಗಳಲ್ಲಿ ಆ ವಿಭಾಗಗಳನ್ನು ವಿವರಿಸಿ, ಪಾಠವನ್ನು ಆರಂಭಮಾಡಿ, ಪ್ರತಿಯೊಂದು ಪುಟವನ್ನೂ ಹೆಕ್ಕಿ ಓದಿದರು. ಪ್ರತಿದಿನದ ಪಾಠವೂ ಒಂದು ಗೊತ್ತಾದ ಘಟ್ಟಕ್ಕೆ ಬಂದು ನಿಲ್ಲುತ್ತಿತ್ತು. " ಆಕೆ ಇದಕ್ಕಿಂತ ಉತ್ತಮವಾದ ೩–೪ ಕಾದಂಬರಿಗಳನ್ನು ಬರೆದಿದ್ದಾರೆ; ಶಕ್ಯವಾದರೆ ಓದಿ. ಕೊನೆಗೆ

Mill on the Floss, Middle March, Romola ಆದರೂ ನೀವು ಕಾಲೇಜ್ ಬಿಡುವ ಮುಂಚೆ ಓದಿ. ದೊಡ್ಡ ಕಾದಂಬರಿಕಾರ್ತಿಯ ಮನಸ್ಸು ಹೇಗೆ ಕಾರ್ಯಮಾಡುತ್ತದೆ, ಎಂಥ ವಿಷಯಗಳನ್ನು ಆಯುತ್ತದೆ; ಹೇಗೆ ವಿಶ್ಲೇಷಿಸಿ, ಪರಿಣಾಮಕ್ಕೆ ನಡಸುತ್ತದೆ ಎಂಬುದನ್ನು ಅರಿಯಬೇಕು"– ಎಂದರು.

12 The misery of having just missed the first-ಎಂದು ಸೈಂಟ್ಸ್‌ಬರಿ ಹೇಳಿದ್ದಾರೆ.

ಎರಡನೆಯ ವರ್ಷ ಅವರು ನಮಗೆ ಹೇಳಿದ ಪಾಠ 'Gareth and Lynette' ಎಂಬ ಟೆನಿಸನ್ ಕವಿಯ ಕವಿತೆ. ಅದು 'Idylls of the King ' ಎಂಬ ಕಿಂಗ್ ಆರ್ಥರ್ ಕಾಲದ ವೀರರ ಕಥಾಗುಚ್ಛಕ್ಕೆ ಸಂಬಂಧಿಸಿದ್ದು. ಅಲ್ಲಿನ ಕ್ರಮವೂ ಹಿಂದಿನಂತೆಯೇ. ಆ ಕಥಾಗುಚ್ಛ ಟೆನಿಸನ್ ಕವಿಯ ಕೃತಿಗಳಲ್ಲಿ ಯಾವ ಸ್ಥಾನವನ್ನು ಪಡೆಯುತ್ತದೆ; ಅವನು ಬರೆದ ಇತರ ಕೃತಿಗಳು; ಇಂಗ್ಲಂಡಿನ ಜೀವನದಲ್ಲಿ ಆತನು ಶ್ರೀಮಂತ ಪದವಿಗೆ ಏರಿ ರಾಜಕವಿಯಾಗಿದ್ದು; ಅವನ ಪ್ರಭಾವ ಬಹುಮಟ್ಟಿಗೆ ಇಂಗ್ಲಿಷರಿಗೂ, ಬ್ರೌನಿಂಗ್ ಕವಿಯ ರೀತಿಗೂ ವ್ಯತಿರಿಕ್ತವಾದದ್ದು; ಅವನ ಕವಿತೆಗಳ ಲಯವಿನ್ಯಾಸ, ಸೌಶಬ್ದ್ಯ ವಿಶೇಷವಾದವು– ಎಂಬುದನ್ನೂ, ಅವನ ಮನಸ್ಸು ಬ್ರಿಟಿಷ್ ಚಕ್ರಾಧಿಪತ್ಯದ ಪ್ರೀತ್ಯಭಿಮಾನಗಳನ್ನು ಹೊಮ್ಮಿಸುವಂಥದಾದರೂ ಅದರಿಂದ ಭಾರತೀಯರಾದ ನಾವು ಬೇಸರಪಟ್ಟುಕೊಳ್ಳಬಾರದು; ರಡ್‌ಯಾರ್ಡ್ ಕಿಪ್ಲಿಂಗ್ ಮುಂತಾದವರ ಬ್ರಿಟಿಷ್ ಅಹಂತೆಗೂ ಈತನದಕ್ಕೂ ಯಾವ ವ್ಯತ್ಯಾಸವಿದೆ– ಎಂಬುದನ್ನೂ ಹೇಳಿ, ಸಾಮಾನ್ಯವಾಗಿ ಒಬ್ಬ ಕವಿಯ ವಿಷಯವಾಗಿ ಯಾವ ಯಾವ ಗುಣಲಕ್ಷಣ ಸ್ವರೂಪವನ್ನು ತಿಳಿದುಕೊಂಡ ಹೊರತೂ ಅವನ ಕವಿತೆಯ ಅರ್ಥವಂತಿಕೆ ಪೂರ್ತಿಯಾಗುವುದಿಲ್ಲ ಎಂಬುದನ್ನು ತಿಳಿಸಿ, 'ಆರ್ಥರಿಯನ್ ಲೆಜೆಂಡ್' ಹೇಗೆ ಸ್ಥಾಪಿತವಾಗಿ, ಹೇಗೆ ಕೆಲವರ ದೌರ್ಬಲ್ಯಗಳಿಂದ ಅಲ್ಲಿ ಸಡಿಲತೆ ಉಂಟಾಗಿ, ಅದು ಮುರಿದು ಹೋಗಬೇಕಾಯಿತು ಎಂಬುದನ್ನು ವಿಶದಪಡಿಸಿದರು. ಆತನ ಒಂದೊಂದು ವಿಶೇಷ ಲಕ್ಷಣಕ್ಕೂ ಸಂಬಂಧಪಡುವಂತೆ ಕೆಲವು ಕವಿತೆಗಳ ಹೆಸರನ್ನು ಹೇಳಿದರು. "ಪಾಠದ ಕೊನೆಯಲ್ಲಿ ಅವಕಾಶವಿದ್ದರೆ ಇತರ ಒಂದೆರಡು ಕವಿತೆಗಳನ್ನು ಓದಿ ತಿಳಿಸುತ್ತೇನೆ, ಆದರೆ ನೀವು ಓದಿ"– ಎಂದರು. ಆ ಕವಿತೆನ್ನು ಅವರು ಓದುವ ರೀತಿಯಲ್ಲಿಯೇ ಪೀಠಿಕಾರೂಪವಾದ ಅವರ ವಿವರಗಳು ನಮಗೆ ಹೆಚ್ಚು ಮನದಟ್ಟಾಗಿದ್ದುದರಿಂದ ವ್ಯಾಖ್ಯಾನ ಬೇಕೆನ್ನಿಸುತ್ತಿರಲಿಲ್ಲ; ಅಲ್ಲಿನ ಆವರಣ, ಕವಿತೆಯ ಓಟ, ಅದು ಹೇಗೆ ಬೆಳೆದು ಮುಗಿಯುತ್ತದೆ ಎಂಬುದೆಲ್ಲ ಸುಲಭವಾಗಿ ಅರ್ಥವಾಗುತ್ತಿತ್ತು. ವರ್ಷದ ಕೊನೆಯಲ್ಲಿ 'Sir Galahad' ಕಥೆಯನ್ನೂ'Ulysses' ಕತೆಯನ್ನೂ ಹೇಳಿದರು. Ode on the Death of the Duke of Wellington' ಓದಿದಾಗ ಡ್ರೈಡನ್ನಿನ 'Alexander's Feast ಮತ್ತು Wordsworth ನ 'Ode to Immortality' ಓದಿ ಗುಣಕ್ಕೆ, ಬರವಣಿಗೆಗೆ, ಅರ್ಥವಿಶೇಷಕ್ಕೆ ಒಂದನ್ನು ಇನ್ನೊಂದರೊಡನೆ ಹೋಲಿಸಿ ತೂಗಿನೋಡಿ ಎಂದರು. ಎಷ್ಟು ಜನಕ್ಕೆ ಬೇಕಾಗಿತ್ತೊ ಇದು! ಆದರೆ ಅವರೆದುರಿಗೆ ಯಾರೂ ಏನೂ ಹೇಳುವ ಹಾಗಿರಲಿಲ್ಲ. ಪಾಠದ ಗುಂಗನ್ನು, ಸ್ವಾರಸ್ಯವನ್ನು ಕೆಡಿಸುವ ಮನಸ್ಸೂ ಇರಲಿಲ್ಲ. ಅವರನ್ನು ಪ್ರಶ್ನೆ ಕೇಳುವ ಹಾಗೂ ಇರಲಿಲ್ಲ. ಆ ಹೊತ್ತಿಗಾಗಲೆ ಯಾರೊ ಹುಡುಗರು ರಿಜಿಸ್ಟ್ರಾರಿಗೆ ಕಾಗದ ಬರೆದು, ಇಟ್ಟಿರುವ ಪಾಠವನ್ನು ಬಿಟ್ಟು ಏನೇನೊ ಹೇಳುತ್ತಾರೆ ಎಂದು ಆಕ್ಷೇಪಣೆ ಎತ್ತಿದ್ದರಂತೆ, ಆ ಕಾಗದವನ್ನು ನಮ್ಮ ಮುಂದೆ ಓದಿ, "ಕಾಲೇಜಲ್ಲಿ ನಾವು ಹುಡುಗರನ್ನು ಪಾಸ್ ಮಾಡಿಸುವ ಯಂತ್ರಗಳಲ್ಲ; ನಾವು Educators, not Coaches" ಎಂದರು. ಆ ದೃಷ್ಟಿ, ಮನಸ್ಸು, ಸಾಹಿತ್ಯದ ಉದಾರ ಸಂಸ್ಕಾರ ಎಷ್ಟು ಜನಕ್ಕೆ ಇರುತ್ತದೆಯೊ– ಇಂದಂತೂ ಹೇಳಲಾರೆ. ಪಾಠಗಳನ್ನೇ ಹೇಳಬೇಕಾಗಿಲ್ಲ ಎನ್ನುತ್ತಿರುವ ಈ ಕಾಲದಲ್ಲಿ ಈ ಮಾತು ಎಷ್ಟು ಜನಕ್ಕೆ ಪಥ್ಯವಾದೀತೊ– ಅದನ್ನೂ ಹೇಳಲಾರೆ.[13]

ಮೂರನೆಯ ವರ್ಷ ಅವರು ಎಫ್. ಟಿ. ಪಾಲ್ ಗ್ರೇವರ Golden Treasury ಯಲ್ಲಿ 'Additional Poems' ಎಂಬ – ಪಾಲ್ ಗ್ರೇವ್ ಅಲ್ಲ, World's Classics ಸಂಪುಟದಲ್ಲಿ ಮತ್ತಾರೊ ಸಂಕಲಿಸಿದ್ದ– ಕವಿತೆಗಳ ಪಾಠ ಹೇಳಿದರು. ಅದರ ವಿವರವನ್ನೂ ನನ್ನ 'ಕಾಲೇಜ್ ದಿನಗಳ'ಲ್ಲಿ ಹೇಳಿದ್ದೇನೆ. ನೂರು ಪದ್ಯಗಳಿರುವ ಸುಮಾರು ಆ ಕವಿತೆಗಳಲ್ಲಿ ೪೦–೫೦ ಕವಿತೆಗಳ ಆಯ್ಕೆಯಾಗಿರುವಾಗ ಒಂದೊಂದೂ ಒಂದೊಂದು ಬಗೆಯ ಗುಣಪ್ರಕಾಶಕ. ಅದನ್ನು ಹೇಗೆ ಪಾಠಹೇಳುವುದು ಎಂಬುದು ನಿಜವಾಗಿ ಒಂದು ಸಮಸ್ಯೆಯಾಗುತ್ತದೆ. ಅವರು ಕ್ರಮವಾಗಿ ಅಲ್ಲಿದ್ದ ಹಾಗೆ ಪದ್ಯಗಳನ್ನು ಹೇಳಿ ಅರ್ಥವ್ಯಾಖ್ಯಾನ ಮಾಡಲಿಲ್ಲ. ಪದ್ಯಗಳನ್ನೆಲ್ಲ ನಾಲ್ಕಾರು ಗುಂಪುಗಳಾಗಿ ವಿಂಗಡಿಸಿ, ವಿಂಗಡಣೆಯ ತತ್ವಗಳನ್ನು ತಿಳಿಸಿದರು. "ಕಾವ್ಯದಲ್ಲಿ ವಿಶೇಷವಾಗಿ ಪ್ರೇಮ, ವೀರ, ಮತ ಮತ್ತು ಅಧ್ಯಾತ್ಮ, ನಿಸರ್ಗದ ಮತ್ತು ಸ್ವದೇಶದ ಪ್ರೀತಿ– ಇವು ಕವಿಹೃದಯದಲ್ಲಿ ಉತ್ಪನ್ನವಾಗಿ ಧ್ಯೇಯಯಸೂಚಕವಾಗಿ ತತ್ವಸೂಚಕವಾಗಿ ಇರುವ ಪದ್ಯಗಳು ಅವು; ಪ್ರಾಚೀನ ಕಥಾಸಂದರ್ಭಗಳನ್ನೊ ರೀತಿಗಳನ್ನೊ ಕವಿ ಆರಿಸಿಕೊಂಡು ತನ್ನ ಕಾಲಕ್ಕೆ ಹೊಂದಿ ಅರ್ಥವಾಗುವಂತೆ ಹೇಗೆ ಆಯ್ದುಕೊಳ್ಳುತ್ತಾನೆ, ಹೊಸ ಕಾಲದ ಬೆಳಕು ಅದರ ಮೇಲೆ ಹೇಗೆ ಬೀಳುತ್ತದೆ– ಎಂಬವು ತಿಳಿವಂತೆ ನಾನು ಇದನ್ನು ವಿಂಗಡಿಸುತ್ತೇನೆ; ಆಯಾ ಭಾಗದಲ್ಲಿ ನನ್ನ ಮನಸ್ಸಿಗೆ ಯಾವುದು ಕಡಮೆಯ ವಿಶೇಷದ್ದು, ಯಾವುದು ಮೇಲ್ತರದ್ದು, ಯಾವುದು ಅರ್ಥವಂತಿಕೆಯಲ್ಲಿ ಬೆಳೆದದ್ದು, ಯಾವುದು ಮುಡಿನುಡಿತ ಅಥವಾ ಪರಮಗುಣವುಳ್ಳದ್ದು ಎಂಬುದು ಸ್ಪಷ್ಟಪಡುವಂತೆ ಆರಿಸುತ್ತೇನೆ; ಆ ಕಡೆ ಗಮನ ಕೊಡಿ" ಎಂದರು. ಸುಮಾರು 'Romantic Triumph' ಎಂಬ ಕಾಲದ ಉತ್ತರಕಾಲದಲ್ಲಿ ಹೇಗೆ ಒಂದು ಕಡೆ ಫ್ರೆಂಚ್ ಕ್ರಾಂತಿ, ಇನ್ನೊಂದು ಕಡೆ ಡಾರ್ವಿನ್, ಹರ್ಬರ್ಟ್ ಸ್ಪೆನ್ಸರ್ ಮುಂತಾದವರ ಜೀವವಿಜ್ಞಾನ ಪ್ರಚಾರದಿಂದ ಟೆನಿಸನ್ ಅಂಥವರ ಮನಸ್ಸೂ ಆರ್ನಲ್ಡ್ ಅಂಥವರ ಮನಸ್ಸೂ ಮಾರ್ಪಾಡುಗೊಂಡಿತು; ಅಂತಃ ನೊಂದಿತು ಎಂಬುದನ್ನೂ, ಬ್ರೌನಿಂಗ್ ಕವಿಯ ಮೇಲೆ ಇಂಥ ಯಾವ ಪ್ರಭಾವವೂ ಹೇಗೆ ಕಾರ್ಯಕಾರಿಯಾಗಲಿಲ್ಲ ಎಂಬುದನ್ನೂ, ಮತದ ವಿಷಯದಲ್ಲಿ ಪೂರ್ತಿ ಕುರುಡುನಂಬಿಕೆ, ಭಕ್ತಿಗಳಿಂದ ಹಿಡಿದು ಕಾರ್ಡಿನಲ್ ನ್ಯೂಮನ್ ಬರೆದ 'Lead, Kindly Light'[14] ವರೆಗೆ ಬೆಳೆದು,

ಯಾವುದನ್ನು 'ಕೈಗಾರಿಕೆಯ ಕ್ರಾಂತಿ' ಎಂದು ಕರೆಯುತ್ತೇವೊ ಅದರ ಪ್ರಭಾವದಿಂದ ಸಾಮಾಜಿಕವಾಗಿ ಆರ್ಥಿಕವಾಗಿ ಅಧ್ಯಾತ್ಮ ವಿಷಯದಲ್ಲಿ ಎಂಥ ವಿಷಯಗಳು ಪ್ರಬಲಿಸಿದವು ಎಂಬುದನ್ನು ನೀವು ಕವಿತೆಯಲ್ಲಿ ಓದದಿರುವ, "ಇಲ್ಲಿನ ಹಲವಲ್ಲಿ Ballads, Lyrics ಗುಣ ಹೇಗೆ ಪ್ರಚುರವಾಗುತ್ತದೆ; ಮಾತಿನ ಸೊಗಸು, ಅಡಕ, ಛಂದಸ್ಸಿನ ಕೌಶಲ, ಪದ್ಯಬಂಧ ಹೇಗೆ ಓದು\ಡುತ್ತವೆ ಎಂಬುದನ್ನು ನೋಡಿ; ಕ್ರಮವಾದ ಸಮಪಾದಗಳುಳ್ಳ ಪದ್ಯಬಂಧಕ್ಕೂ ಅಸಮರಚನೆಯ ಸಂಯುಕ್ತ ಪದ್ಯ ರಚನೆಗೂ ಹೇಗೆ ವ್ಯತ್ಯಾಸ ಕಾಣಿಸುತ್ತದೆ ಎಂಬುದನ್ನು ನೋಡಿ"– ಎಂದು ಹೇಳುವುದರ ಜೊತೆಗೆ ಅಂಥವುಗಳನ್ನು ಓದುವಾಗ

'Cusha! Cusha! Cusha!' calling, (J. Ingelow) ಎಂದೊ,

The cruel crawling foam,
The cruel hungry foam

ಎಂಬಲ್ಲಿಯೊ, ಹೇಗೆ ಒಂದು ಸಾಲಿನ ಒಂದು ಅಂಶ– ಅವರಲ್ಲಿ ಸ್ವರಾಘಾತ Accent ಮುಖ್ಯ, ನಮ್ಮಲ್ಲಿ ಗುರು ಲಘು– ಅಥವಾ ಗಣ, ಮಾತು ವ್ಯತ್ಯಾಸಮಾಡಿ ಕೆಲವು Ballads ಸಾಲು ನಡೆಯುತ್ತವೆ ನೋಡಿ"– ಎಂದರು. ನಿಡಿಸ್ವರಗಳ ಪ್ರಭಾವ(– –) ಹೆಚ್ಚಾಗಿರುವ

The long light shakes across the lakes,
And the wild cataract leaps in glory.

ಅನ್ನೂ 'ಲೋಟಸ್ ಈಟರ್ಸ್' ಅನ್ನೂ ಬೇರೆಯಾಗಿ ಓದಿ, ಅಲ್ಲಿ "ಇಂದು ಯಾವ ಮಾದಕ ಮಾಂದ್ಯ ತರುತ್ತದೆ; ಈ ಮಂದ ಅಥವಾ ಮಂದ್ರ ನಡೆಗೆ ಪ್ರತಿಯಾಗಿ ಸ್ವಿನ್ ಬರ್ನನ ಕವಿತೆಯ ಕುದುರೆ ಓಟ 'ಅನಪೇಸ್ಟ್' (ಸಗಣ) ನಡಸುತ್ತದೆ ಎಂಬುದನ್ನು ಹೋಲಿಸಿ"– ಅದು ನಮ್ಮ ಪದ್ಯದಲ್ಲಿರಲಿಲ್ಲ– ಎಂದರು. ಎಷ್ಟೆಷ್ಟು ವಿಧವಾದ ವಿಷಯಗಳನ್ನು ಈ ಕವಿಗಳು ಆಯುತ್ತಾರೆ; ಪ್ರತಿಯೊಂದರಲ್ಲಿಯೂ ಕವಿಯ ಹೃದಯ, ಶೀಲ, ರೀತಿ ಯಾವ ಸಂಕೇತಗಳಿಗೂ ಒಳಪಡದೆ ತನ್ನದೇ ಬಗೆಯಲ್ಲಿ ನಡೆಯುತ್ತದೆ ಎಂದು ಪೀಠಿಕೆಯಾಗಿ ಹೇಳಿದ್ದರು, ಇದಕ್ಕೆ ಮುಂಚೆಯೇ Ballads and Lyrics ಎಂಬುದರ ಸ್ವರೂಪವನ್ನೂ ಸರ್ವ ದೇಶಗಳ ಕಾಲಗಳ ಪ್ರಕಾರವನ್ನೂ ವರ್ಣಿಸಿದ್ದರು. ಒಮ್ಮೆಯೊ ಎರಡು ಸಲವೊ ತಪ್ಪಿ ಸಂಕೋಚದಿಂದ ಹೇಳುವಂತೆ–

ಕಾಸು ಕೊಟ್ಟವರಿಗೆ ಕೈಲಾಸ ತೋರಿಸ್ತಾಳೆ
ಈಚಲ ಮರದವ್ವ–
ಮಲ್ಲಿಗೆ ಕುಯಿಸಿಕೊಂಡಿ, ಸಂಪಿಗೆ ಕುಯಿಸಿಕೊಂಡಿ
ಸಣ ಮೇಳ ಹಿಡಿಸಿಕೊಂಡಿ–

ಇತ್ಯಾದಿಯಾಗಿ ನಮ್ಮಲ್ಲಿಯೂ ಹೇಗೆ ಜಾನಪದದಲ್ಲಿ ಇನ್ನೂ ಅದು ಕೇಳುತ್ತದೆ; ಅಂಥುದರ ಜೀವಲಕ್ಷಣ ಕಾಣಬೇಕು ಎಂದು ವಿವರಿಸಿದ್ದರು. 'ಛಂದ್' ಎಂಬುದು– 'Skend'- ಕುಣಿತ(Dance)ಕ್ಕೆ ಸಂಬಂಧಿಸಿದ ಹೆಜ್ಜೆಪೆಟ್ಟು/ತುಳಿತ ಎಂದಿದ್ದರು. ಈ ಸಮಸ್ತ ಸಮಯದಲ್ಲಿಯೂ ಅವರ ಮನಸ್ಸಿನಲ್ಲಿ ಕನ್ನಡಿಗರಾದ ನಮಗೆ ಈ ತತ್ವದರ್ಶನ ಆಗಲಿ, ಪ್ರಕಾರಗಳ ಪರಿಚಯವಾಗಲಿ; ರಚನೆಯ ಸೊಗಸು, ಸೌಭಾಗ್ಯ ಹೃದ್ಗತವಾಗಲಿ ಎಂಬುಸಿತ್ತು– ಎಂಬಂತೆ ಪಾಠ ಹೇಳಿದರು.

13 ಈಗ ಮುಂದೆಹೋಗಿ Job- oriented ಎಂಬುದರ ಕಡೆಗೆ ಓಲಿದೆ. ಇದು ಲಾರ್ಡ್‌ಸ್ನೊ, ಡಾ. ಲೆವಿಸ್ ನಡುವೆ ನಡೆದ Two Cultures ವಾದದ ಬುನಾದಿ.

14 ಕನ್ನಡದಲ್ಲಿ ಅದನ್ನು ಆಮೇಲೆ 'ಕರುಣಾಳು ಬಾ ಬೆಳಕೆ' ಎಂದು ಅವರೇ ಭಾಷಾಂತರ ಮಾಡಿದರು.

ಮತ್ತು ಕಾರ್ಲೈಲ್ ರಸ್ಕಿನ್ ಮುಂತಾದವರ ಗದ್ಯದ ಬರವಣಿಗೆಯನ್ನು ಓದಿ ಅರಿಯಬೇಕು– ಎಂದು ತಿಳಿಸಿದರು,

ಬ್ರೌನಿಂಗ್ ಅನ್ನು "ಇವನು ಕವಿಯೆ?!"– Browning, a Poet!- ಎಂದು ನಮ್ಮ ಒಬ್ಬ ಇಂಗ್ಲಿಷ್ ಪ್ರೊಫೆಸರ್ ನನ್ನನ್ನು ಕೇಳಿದ್ದರು. ಅವರಿಗೆ ಕೀಟ್ಸ್, ಟೆನಿಸನ್, ಥ್ಯಾಕರೆ ಇಂಗ್ಲಿಷ್; ಷೆಲ್ಲಿ, ಬ್ರೌನಿಂಗ್, ಡಿಕೆನ್ಸ್ ಅಲ್ಲಿ ಗೌರವವಿರಲಿಲ್ಲ. ಇದು ಇಂಗ್ಲಿಷರಲ್ಲಿ ಕೆಲವರಿಗೆ ಪಕ್ಷಪಾತ. ಕಾರ್ಲೈಲನ್ನು ಯಾರಾದರೂ ಎಂದಾದರೂ ಅಂಥವರು ಮುಟ್ಟುತ್ತಾರೊ ಇಲ್ಲವೊ ಕಾಣೆ. 'ಶ್ರೀ' ಯವರಿಗೆ ಅಂಥ ಪಕ್ಷಪಾತ ಇರಲಿಲ್ಲ. ಬ್ರೌನಿಂಗ್ ಕವಿಯ 'Porphyria's Lover' ನಲ್ಲಿ ಒಬ್ಬ ಹುಚ್ಚನ ಪ್ರೇಮ– ಸ್ವಾರ್ಥ ತನ್ನ ಪ್ರೀತಿಯ ವಸ್ತುವನ್ನು ಹೇಗೆ ಅವಳ ತಲೆಕೂದಲನ್ನೇ ಬಿಗಿಸಿ ಪ್ರಾಣ ತೆಗೆದಿತ್ತು ಎಂಬುದನ್ನು ಓದಿ ಕಾಣಿಸುವಾಗಲೊ, "Love in a Life', 'Life in a Love' ಕವಿತೆಗಳನ್ನು ಓದುವಾಗಲೊ, "Fear death?" ಎಂದು ಆರಂಭವಾಗುವ 'Prospice' ಎಂಬ ಸಣ್ಣ ಕವಿತೆಯನ್ನು ಓದುವಾಗಲೊ 'A Grammarian's Funeral' ಮತ್ತು 'Rabbi Ben Ezra' ಓದುವಾಗಲೊ ಆತನ ಮನಸ್ಸಿನ ಉನ್ನತಿಯನ್ನು ಕಾಣಿಸುವಂತೆ ಅವರು ಪಾಠ ಹೇಳಿದರು. ಅವರೇ ನಮಗೆ Cory ಯವರ 'Mimnermus in Church' ಅಲ್ಲಿನ ಕ್ಷಣಿಕವಾದುದರ ಪ್ರೀತಿಯ ವಿಶೇಷವನ್ನು, ಮೃದುಭಾವವನ್ನು ತಿಳಿಸಿದವರು;

But oh, the very reason why
I clasp them, is because they die.

ಎಂಬುದು ನಮ್ಮ ದೃಷ್ಟಿಗೆ ಪ್ರತಿಯಾದಂಥ ವಿಶಿಷ್ಟ ಲಕ್ಷಣ.

ಅದೇ ಫಿಟ್‌ಜೆರಾಲ್ಡ್ ಕವಿ ಭಾಷಾಂತರಮಾಡಿದ ಉಮರ್ ಖಯ್ಯಾಮಿನ ಪದ್ಯಗಳನ್ನು ಪಾಠ ಹೇಳುವಾಗಲಂತೂ ಅಲ್ಲಿ ದೈವ, ವಿಧಿ, ಕೇಡು ಇವನ್ನು ನಿರ್ಲಕ್ಷಿಸುವಂತೆ ಇರುವ, ನಡೆಯುವ; ಈ ಜೀವನವನ್ನು ಸುಖವಾಗಿ ಕಳೆದು ಬಿಡೋಣ, ನಾಳೆ ನಿನ್ನೆಯ ಏಳು ಸಾವಿರ ವರ್ಷಗಳ ಜೊತೆ ಸೇರಿ ಜೀವನವನ್ನು ಸುಖವಾಗಿ ಕಳೆದುಹೋಗುತ್ತದೆ–ಎಂಬುದನ್ನು ಹೇಳುವಾಗ, ಅವರ ಮನಸ್ಸು ಹೇಗೆ ತೂಗುತ್ತಿದ್ದಿತು ಎಂಬುದನ್ನು ತಿಳಿಸುವಾಗ, ಅವರು ಅದನ್ನು ಪ್ರಕಾಶಿಸಿದ ರೀತಿ ತುಂಬಾ ಹೃದ್ಯವಾಗಿತ್ತು. ಅದಕ್ಕೆ ಆಧ್ಯಾತ್ಮಿಕ ಸಂಕೇತ ಬೇರೆ ಇದೆ; Wine/ Saki ಅಲ್ಲಿ ಸಂಕೇತಗಳು ಇವೆಯಂತೆ ಎಂದರು. ಈತನ ಈ ಭೋಗವಾದಕ್ಕೆ ಹಿಂದೆ ಇದ್ದ ಗಂಭೀರ ಶ್ರದ್ಧೆಯ ನೆಲಸನ್ನು ತಿಳಿಸಿದ್ದರು. ಹಾಗೆಯೇ ರುಬಾಯಿ ಛಂದಸ್ಸಿನಲ್ಲಿ ನಾಲ್ಕು ಪಾದಗಳಲ್ಲಿ ಮೂರರ ಪ್ರಾಸ ಒಂದು, ಒಂದು ಪ್ರಾಸವಿಲ್ಲದ್ದು ಎಂಬುದನ್ನು ತೋರಿಸಿದರು. ಬ್ರೌನಿಂಗ್, ಉಮರ್ ಖಯ್ಯಾಂ ಎರಡೂ ಆದಮೇಲೆ ಅವರಿಬ್ಬರ ಕವಿತೆಯ ದರ್ಶನವನ್ನು ಹೋಲಿಸಿ ಎಂದು ಲೇಖನ ಬರೆಯಲು ಹೇಳಿದರು. ನಾನು ಒಂದು ಪರೀಕ್ಷೆಗೆ ಬರೆದಿದ್ದರಲ್ಲಿ ಉಮರ್ ಖಯ್ಯಾಂ ಮೊದಲು ತೆಗೆದುಕೊಂಡು ಉದ್ಗಾರ ತೆಗೆದಿದ್ದೆನೆಂದು ಕಾಣುತ್ತದೆ: ಬ್ರೌನಿಂಗ್ ಅನ್ನು ವಿಸ್ತರಿಸಲಾಗಿರಲಿಲ್ಲ. ನನ್ನ ಉತ್ತರ ಪತ್ರಿಕೆಯನ್ನು ಹಿಂದಿರುಗಿಸುವಾಗ "Not bad: first part overdeveloped" ಎಂದು ಬರೆದಿದ್ದರು. ಅದು ಅವರ ಟೀಕೆಯ ರೀತಿ. ಈಗ ಸುಮಾರಿನದೇ ಅಲ್ಲವೆ ಮೊದಲ ವರ್ಷದ ಟೀಕೆ? ಈ ತಲೆಗೆ ಎಂದೂ ಸಮತೋಲನವಿಲ್ಲವೇನೋ! ಇನ್ನು ಬಂದೀತೆ?

'ಶ್ರೀ'ಯವರಿಗೆ ಬ್ರೌನಿಂಗ್ ಬಹು ಪ್ರಿಯನಾದ ಕವಿ. ಸಣ್ಣಗುರಿಯನ್ನೊ ಧ್ಯೇಯವನ್ನೊ ಇಟ್ಟು ಅದನ್ನು ಸಾಧಿಸಿ ಕೃತಾರ್ಥನಾಗುವುದು ಎನ್ನುವುದಕ್ಕಿಂತ ಬಹುದೊಡ್ಡ ಧ್ಯೇಯವನ್ನಿಟ್ಟುಕೊಂಡು ಅಲ್ಲಿ ಸೋಲುವುದು ಎಂಬುದು ಹೆಚ್ಚು ಪ್ರಿಯ:

He would not discount life, as fools do here,
Paid by instalment.
He ventured neck or nothig- heaven's success
Found, or earth's failure:

'ಶ್ರೀ' ಯವರು ಆಳವಾಗಿ ಬ್ರೌನಿಂಗ್ ಅಭ್ಯಾಸ ಮಾಡಿ ಅವನ ಕವಿತೆಯನ್ನು ಬೋಧಿಸುವುದಕ್ಕೆ ಪ್ರೀತಿಯುಳ್ಳವರಾಗಿದ್ದರೆಂದೆ. ಎಂ.ಎ. ಪರೀಕ್ಷೆಗೊ ಏನೊ ಬರೆದ ಅವರ ಒಂದು ಪ್ರೌಢ ಪ್ರಬಂಧ, ಬ್ರೌನಿಂಗಿನ 'ಪಿಪ್ಪಾ ಪಾಸಸ್' ಎಂಬ ಹೆಸರಿನ ಕವಿತಾನಾಟಕದ ವಿಷಯ. ಪಿಪ್ಪಾ ರೇಶಿಮೆ ಕಾರ್ಖಾನೆಯ ಕೂಲಿಕಾರಳು, ಕುರುಡು ಹುಡುಗಿ. ಆದರೆ ದೇವರಲ್ಲಿ ತುಂಬಾ ನಿಚ್ಚಳ ಭಕ್ತಿಯುಳ್ಳವಳು. ಅವಳ ಹಾಡು ಸರ್ವರಿಗೂ ಪ್ರಿಯವಾಗಿ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ಥಾನಪಡೆದಿದೆ. ವರ್ಷಕ್ಕೆಲ್ಲ ಅವಳಿಗೆ ರಜ ಇದ್ದುದು ಜನವರಿ ಮೊದಲ ದಿನ. ಅಂಥ ಒಂದು ದಿನ ಇರುಳು ಕಳೆದು ಬೆಳಗಾಗುವ ಮುಂಚೆ ಮನೆಯಿಂದ ಹೊರಗೆ ಬಂದು ಆ ಹಗಲನ್ನೆಲ್ಲ ಸಂತೋಷವಾಗಿ ತಿರುಗಾಡಿ ಕಳೆಯಬೇಕೆಂದು ಹೊರಟಿದ್ದಾಳೆ. ಆ ಕೃತಿಯ ಆರಂಭವನ್ನು ಓದಿ–

Day!
Faster and more fast,
O'er night's brim, day boils at last;
Boils, pure gold, o'er the cloud- cup's brim
Where spurting and suppressed it lay….

ಈ ಒಂದೇ ಪದದಿಂದ ಆರಂಭವಾಗುವ ಸೂರ್ಯೋದಯದ ಸೌಂದರ್ಯ ಯಾರಿಗೂ ಮೈ ಜುಮ್ಮೆನ್ನಿಸುತ್ತದೆ. ಅಂಥ ಸೂರ್ಯೋದಯ ವರ್ಣನೆಯನ್ನು ನಾನು ಬೇರೆಕಡೆ ನೋಡಿರಲಿಲ್ಲ.

For not a froth- flake touched the rim
Of yonder gap in the solid gray
Of the eastern cloud, an hour away;
But forth one wavelet, then another, curled.
Till the whole sunrise not to be suppressed,
Rose, reddened, and its seething breast
Flickered in bounds, grew gold, then over flowed the world.

Oh, Day, if I squander a wavelet of thee,
A mite of my twelve- hours' treasure,
The least of thy gazes or glances,
-My Day, if I squander such labour or leisure,
Then shame fall on Asolo, mischief on me!

ಎಂದುಕೊಂಡು ಆ ಹುಡುಗಿ ಈ ಸೂರ್ಯೋದಯವನ್ನು ಒಲಿಯುತ್ತಾಳೆ. God's in his heaven- All's right with the world! ಎಂದು ಹಾಡುತ್ತ, ಊರಿನ ಬೇರೆ ಬೇರೆ ಕಡೆಗಳಲ್ಲಿ ತಿರುಗುತ್ತಿರುವಾಗ ಶುದ್ಧಾತ್ಮದ ಈ ಕುರುಡು ಹುಡುಗಿಯ ನಂಬಿಕೆ ೪–೫ ಪ್ರಸಂಗಗಳಲ್ಲಿ ಎಂಥ ಪರಿಣಾಮಗಳನ್ನುಂಟು ಮಾಡುತ್ತವೆ. ಅವಳ ಹಾಡಿನ ಬೇರೆ ಬೇರೆ ಭಾಗಗಳು ಎಂಬುದನ್ನು ತೋರಿಸುವಂತೆ ಕಥಾದೃಶ್ಯಚಿತ್ರಗಳು ಪ್ರಕರಣಗಳು ಬೆಳೆಯುವುದು ಆ ನಾಟಕದ ವಸ್ತು. ಎಂದಿಗೂ ತೆರೆದಂಥ ನಾಟಕತಂತ್ರ ಇದು. ಇದನ್ನು ಯಾವುದೊ ಒಂದು ತಂತ್ರಭಾಗವಾಗಿ ಬಳಸಿಕೊಳ್ಳಬಹುದು.15

ಅವರು– –

Escape me?

Never-
Beloved!
While I am I, and you are you,
So long as the world contains us both'
Me the loving and you the loath,
- -

15 ಮಹಾರಾಜಾ ಕಾಲೆಜ್ ಪುಸ್ತಕ ಭಂಡಾರದಲ್ಲಿ ಬಿ. ಎಂ. ಶ್ರೀ. ಅವರ ಆ ಪ್ರಬಂಧದ ಅಚ್ಚಾದ ಪ್ರತಿ ಒಂದಿತ್ತು; ಈಗ ಎಲ್ಲಿಯೂ ಸಿಕ್ಕದಾಗಿದೆ.

While the one eludes, must the other pursue.

ಎಂಬುದನ್ನೊ, ಹುಡುಗರಾಗಿರುವಾಗ ಹೆಚ್ಚು ಪ್ರೀತಿಗೆ ಬರುವ 'How they brought the good news from Ghent to Aix' ಅನ್ನೋ, ಹಲವು ಕಲೆಗಾರರ ಕಥೆಗಳನ್ನು ದೊಡ್ಡ ಕಾವ್ಯ ಕೃತಿಗಳಾಗಿ (Abt Vogler, Fra Lippo Lippi) ನಿರ್ಮಾಣ ಮಾಡಿದ್ದನ್ನೊ, 'Asolando', 'The Last Ride Together' ಅನ್ನೋ– ಯಾವುದನ್ನು ತೆಗೆದುಕೊಂಡರೂ ಬ್ರೌನಿಂಗ್ ಒಬ್ಬನೇ ಹಾಗೆ ಬರೆಯಬಲ್ಲವನು ಎನ್ನಿಸುತ್ತಿದ್ದರು. ಆ ರೀತಿಯ ಪಾಠ ಮನಸ್ಸಿಗೆ ಸಂತೋಷ, ಆಸಕ್ತಿ, ಗೌರವ ತರುತ್ತದೆ. 'Incident of the French Camp' ಕವಿತೆಯಲ್ಲಿ ನಪೋಲಿಯನ್ ಒಂದು ಕಡೆ ಚಿಂತಾಮಗ್ನನಾಗಿ ಕುಳಿತಿದ್ದಾನೆ.

With neck out- thrust, you fancy how,
Legs wide, arms locked behind,
As if to balance the prone brow
Oppressive with its mind.

ಒಂದು ಯುದ್ಧದ ಪರಿಣಾಮವನ್ನು ಅರಿಯುವುದಕ್ಕಾಗಿ ಚಿಂತೆಯಲ್ಲಿದ್ದಾನೆ. ಒಬ್ಬ ಯುವಕ ವೀರ ಧಾವಿಸಿ ಬಂದು ತಮಗೆ ಗೆಲವು ಬಂದುದನ್ನು ಹೇಳುತ್ತಾನೆ. ನಪೋಲಿಯನಿಗೆ ಸಂತೋಷವೇನೊ ಆಯಿತು. ಉತ್ತರ ಕ್ಷಣದಲ್ಲಿಯೇ ಆ ಹುಡುಗನ ಸ್ಥಿತಿಯನ್ನು ಕಂಡು ತಾಯಿಹದ್ದು ಮರಿಹಕ್ಕಿಯ ಗಾಯಗೊಂಡ ಸ್ಥಿತಿಯನ್ನು ನೋಡಿ ಕನಿಕರಪಡುವಂತೆ–

"You're wounded!"

ಎಂದು ಸಾಂತ್ವನದ ಮಾತುಗಳನ್ನು ಆಡತೊಡಗಿದಾಗ–

" Nay," ….

"'I' m killed, Sire!" ಎಂದ ಆ ಹುಡುಗ, ಮರುಕ್ಷಣದಲ್ಲಿ

"….And his chief beside,
Smiling the boy fell dead,"

ಇಂಥ ನೂರಾರು! ಅವರು "On the earth the broken arcs; in the heaven, a perfect round" ಎಂದು ಬರುವ ಸನ್ನಿವೇಶವನ್ನು (Abt Vogler) ಅಥವಾ 't' is we musicians know" ಎಂಬ ಸನ್ನಿವೇಶವನ್ನು ಎಷ್ಟು ವಿಸ್ತಾರವಾಗಿ ವರ್ಣಿಸಿದರು ಎಂಬುದು ನನಗೆ ನೆನಪಿನಲ್ಲಿದೆ. ಹಾಗೆಯೇ, "The Good is the enemy of the Better" ಎಂದು ಯಾವುದೊ ಒಂದು ಸಂದರ್ಭದಲ್ಲಿ ಬ್ರೌನಿಂಗ್ ಪಾಠ ಮಾಡುತ್ತಿರುವಾಗಲೇ 'ಶ್ರೀ' ಯವರು ನುಡಿದದ್ದು. ನಾನು ಹೈಸ್ಕೂಲಲ್ಲಿ ಓದಿ ನನ್ನ ತಲೆಗೆ ಮೀರಿದ್ದ– Mortd' Arthur ಅಲ್ಲಿಯ "Lest one good custom should corrupt the world" ಎಂಬುದರ ಅರ್ಥ ಆಗ ದ್ಯೋತನಗೊಂಡಿತು. ಇಂಥವು ಎಷ್ಟೊ ಅವರ ಪಾಠಗಳಲ್ಲಿ. ಆ ಪಾಠಗಳನ್ನು ಕೇಳುವ, ಅಂಥ ನಿರ್ಮಾಣಕೃತ್ ವಿಮರ್ಶನ ಬುದ್ಧಿಯ ತುಂಬು ತಿಳಿವಿನ ಪಾಠ ಶಕ್ಯವಾಗಬಹುದಾದರೆ, ಶಾಂತವಾದ ಸುನಿಶ್ಚಿತವಾದ ಸಾಹಿತ್ಯೋತ್ಸಾಹವನ್ನು ಕಂಡವರಿಗೆ ಆ ವಾಣಿ ಈಗಿನ ಕಾಲಕ್ಕೆ ಉಳಿಯಲಿಲ್ಲವಲ್ಲ, ಅದನ್ನು ಲಿಪಿಲೇಖಿಸಲು ಆ ಕಾಲದಲ್ಲಿ ಅವಕಾಶವಿರಲಿಲ್ಲವಲ್ಲ ಎನಿಸುತ್ತದೆ. . . ಅವರ ಪರಿಚಯ ಮಾಡಿಕೊಡುವಾಗ ಅವು ಪಾಠದ ಮೂಲಕ ನನಗೆ ಆ ಅರಿವಾದ್ದು.

* * * *

ಮ್ಯಾಥ್ಯು ಆರ್ನಲ್ಡ್ ಅವರ ಕವಿತೆಗಳನ್ನು ಕುರಿತು ಪಾಠ ಮಾಡುವಾಗ 'ಶ್ರೀ' ಯವರ ಮನಸ್ಸಿನ ಯಾವುದೊ ಒಂದು ಮೂಲೆಯಲ್ಲಿ ಅಡಗಿದ್ದ ಮನೋಧರ್ಮ ವ್ಯಕ್ತವಾಗುವಂತಿತ್ತು. ಅವನನ್ನು ಕವಿ ಎಂದು ಎಣಿಸುವವರೇ ಈಗ ಇಲ್ಲ! ಅವನ Poetry is the criticism of life ಇತ್ಯಾದಿ ವಾಕ್ಯದ ಅರ್ಧ ಭಾಗವನ್ನು ಮಾತ್ರ ಎಣಿಕೆಗೆ ತಂದುಕೊಂಡು, ಆ ವಾಕ್ಯದ ಉಳಿದ ಭಾಗವನ್ನು Subject to the Laws of Poetic Truth and Poetic Beauty ಮನಸ್ಸಿಗೇ ತಂದುಕೊಳ್ಳದೆ ಅವನನ್ನು ಹೀಯಾಳಿಸಿದರು. ಆದರೆ ಆತನ ವಿಮರ್ಶನಶಕ್ತಿ ಉತ್ತಮವಾದವುಗಳಲ್ಲಿ ಒಂದು. ಕೋಲ್‌ರಿಜ್ ಜೊತೆಗೆ ಆರ್ನಲ್ಡ್, ಮಿಲ್ ಮುಂತಾದವರು ಬರೆದ ವಿಮರ್ಶನ ವರ್ಡ್ಸ್‌ವರ್ತಿಗೆ ಒಂದು ಗೌರವಸ್ಥಾನವನ್ನು ಸ್ಥಾಪಿಸಿತು.[16] ಆ ದಶಕದ ಕಡೆಯ ಅರ್ಧ ಕಾಲದಲ್ಲಿ ಅವನ ಕವಿತೆಯ ಗುಣ ಎಷ್ಟೇ ಕೀಳಾಗಲಿ. 'Thyrsis' ಮತ್ತು 'Scholar Gypsy' ಎರಡನ್ನೂ ಸಂಕಲನದಲ್ಲಿ ಸೇರಿಸಿದೆ; 'Dover Beach' ಅನ್ನೂ ಇನ್ನೊಂದನ್ನೂ– ಯಾವುದೊ ಹೇಳಿದರು– ಸೇರಿಸಿದ್ದರೆ ಚೆನ್ನಾಗಿತ್ತು ಎಂದರು. ಆದರೆ ಅವರು 'Morality' ಎಂಬ ಒಂದು ಪದ್ಯವನ್ನೂ ಈ ಎರಡು ಪದ್ಯಗಳನ್ನೂ ಹೇಳುವಾಗ ಆಳವಾಗಿ ಅವರ ಮನಸ್ಸಿನಲ್ಲಿಯೂ ತಳಮಳವುಂಟುಮಾಡುತ್ತಿದ್ದ ಒಂದು Faith- ದೈವದ ವ್ಯಕ್ತಿತ್ವದಲ್ಲಿ ನಂಬಿಕೆ– ಮಾಯವಾದ ಕಾರಣದಿಂದ ಏನು ನೋವುಂಟಾಗುತ್ತದೆ, ಬುದ್ಧಿ ಎಷ್ಟು ಅತಂತ್ರವಾಗುತ್ತದೆ ಎಂಬುದರ ಸುಳಿವು ಕಾಣುತ್ತಿತ್ತು. ಅವರದು ಒಂದು ಬಗೆಯ ಉದಾರ Humanism, Stoicism; ಅದಕ್ಕೂ ಮೀರಿದ– ನಾವು

ಧರ್ಮಶ್ರದ್ಧೆ ಎನ್ನಬಹುದಾದ, ಗಯಟೆ ಅವರು ಹೇಳಿದ ಮಾತಿಗನುಗುಣವಾಗಿ The best that is thought and said and done ಎಂಬಂತಹ ರೀತಿಗೆ ಸೋಲುವಂಥದು. ಅವನದು 'High Seriousness' ಮತ್ತು 'Sweetness and Light'. ಎರಡು ಪದ್ಯಗಳನ್ನು– 'The Forsaken Merman' ಮತ್ತು 'Philomela'- ಪಾಠ ಮಾಡಿದುದು ತುಂಬಾ ವಿಶೇಷವಾಗಿತ್ತು. ಒಬ್ಬ ಮತ್ಸ್ಯ ಪುರುಷನನ್ನು ಒಲಿದು ಮದುವೆಯಾಗಿ ಅವನಿಗೆ ಮಕ್ಕಳನ್ನು ಹೆತ್ತಿದ್ದ ಹೆಣ್ಣು ನೀರಿನ ಒಳಗಿಂದ ಹೊರಗೆ ಬಂದು ಚರ್ಚಿನಲ್ಲಿ ಪ್ರಾರ್ಥನೆಗೆ ಹೋದವಳು ಹಿಂದಕ್ಕೆ ಬರಲಿಲ್ಲ. ಅವಳಿಗೆ ಕ್ರಿಸ್ತವಿಶ್ವಾಸ ಅತಿಶಯವಾಗಿ ಮಕ್ಕಳನ್ನೂ ಗಂಡನನ್ನೂ ತೊರೆದಾಗ ಈ ಗಂಡನ, ಮಕ್ಕಳ ಗೋಳು ಯಾವ ತರಹದ್ದು ಎಂಬ ವಿಷಯ ಮೊದಲ ಪದ್ಯದಲ್ಲಿದೆ. ಅದನ್ನು ಪಾಠ ಹೇಳಿದ ಮೇಲೆ "Wherein consists the pathos in the Forsaken Merman?"ಎಂಬುದನ್ನು ಕುರಿತು ಬರೆಯಿರಿ ಎಂದು ಪ್ರಬಂಧ ರಚನೆ ಮಾಡಿಸಿದರು. ಲೇಖನಗಳನ್ನು ಹಿಂದಿರುಗಿಸುವಾಗ ಒಂದೊಂದು ಪುಸ್ತಕದ ಮೇಲೂ ಅವರು ಬರೆದಿದ್ದ ವ್ಯಾಖ್ಯಾನ ಒಂದು ಗಂಟೆಯ ಹೊತ್ತು ಬಹು ರುಚಿಯಾಗಿತ್ತು. "ಹುಡುಗರಲ್ಲಿ ಒಂದು ಮಹಾಭ್ಯಾಸವಿದೆ; ಪ್ರಶ್ನೆಗೆ ಉತ್ತರ ಏನೊ ಬರೆಯುವುದು; ಕಡೆಯಲ್ಲಿ ಪ್ರಶ್ನೆಯಲ್ಲಿರುವ ಮಾತುಗಳನ್ನೆ ಪುನರಾವರ್ತನೆ ಮಾಡಿಬಿಡುವುದು; ಅಥವಾ ಸರಿಯಾದ ಉತ್ತರ ಬರುವವರೆಗೂ ಬೇಕಾದಷ್ಟು ಬರೆಯುವುದು; ಉತ್ತರವಾದ್ದನ್ನು ಬಿಡುವುದು: ಇದು ಲಾಗಾಯ್ತಿನಿಂದ ಬಂದುವು!"– ಎಂದರು. ಇದನ್ನು ಹೇಳಿ, "ಇದು ನೋಡಿ ಹೇಗಿದೆ: it is simply 'ಪೆಥೆಟಿಕ್!"– ಎಂದಿದ್ದ ಒಬ್ಬರ ವಾಕ್ಯವನ್ನು ಹೇಳಿ, ಅವರದೇ ಸ್ವಭಾವವಾದ ಅರ್ಧ ಕಣ್ಣು ಮುಚ್ಚಿಕೊಂಡು ಮುಗುಳ್ನಗೆ ನಕ್ಕರು. ಅದನ್ನು ಮರೆಯುವ ಹಾಗಿಲ್ಲ. ಈ ಉತ್ತರವೂ "Simply 'ಪೆಥೆಟಿಕ್ಕೆ' " ಎಂಬಂತೆ!

16 ವಿಮರ್ಶೆಗೆ ಆರ್ನಲ್ಡ್ ಬರವಣಿಗೆ ಎಷ್ಟು ದೊಡ್ಡ ಪ್ರಮಾಣವಾಯಿತು ಎಂಬುದನ್ನು ನಾವು ಅರಿಯಬೇಕು. ಸೆಂಟ್ ಬೂವನ್ನು ಓದುದವುದಕ್ಕಾದರೂ ಫ್ರೆಂಚನ್ನು ಕಲಿಯಿರಿ ಎಂದವನು ಆತ. ಬೈಬಲ್ ಮೇಲೆ *On Translating Homer*, *Literature and Religion, Culture and Anarchy, Numbers*– ಎಷ್ಟು?

'Philomela' ಪಾಠ ಹೇಳುವಾಗ ಗ್ರೀಕ್ ಕಥೆಯನ್ನು ಹೇಳಿದರು. ತ್ರೇಸಿನ ದೊರೆಯೊಬ್ಬನು ತನ್ನ ಹೆಂಡತಿಗೆ ತಿಳಿಯದಂತೆ ನಾದುನಿಯನ್ನು ಮೋಹಿಸಿ, ಬೇಟೆಗೆ ಕರೆದುಕೊಂಡು ಹೋಗಿ ಆಕೆಯನ್ನು ಕೆಡಿಸಿ, ಒಂದು ನೆಲಮನೆಗೆ ಒಯ್ದು ಅಲ್ಲಿ ಅವಳನ್ನು ಸೆರೆಯಿಟ್ಟು, ತನ್ನಕ್ಕನಿಗೆ ದೂರು ಹೇಳಿಯಾಳೆಂದು ನಾಲಿಗೆ ಕಡಿಸಿ, ಹೆಂಡತಿಗೆ ಸುಳ್ಳುಪೊಳ್ಳು ಹೇಳಿ ದಾಟಿಕೊಂಡಿದ್ದನು. ಪರಿಚಯವಿದ್ದ ಒಬ್ಬಳು ಸೇವಕಿಯ ಮೂಲಕ ಆ ಹುಡುಗಿ ಒಂದು ಕಸೂತಿ ಹಾಕಿ ತನ್ನ ಕಥೆ ಅಲ್ಲಿ ಚಿತ್ರಿತವಾಗುವಂತೆ ಮಾಡಿ ಅಕ್ಕನಿಗೆ ಕಳಿಸಿದಳು. ಅಕ್ಕನಿಗೆ ಕ್ರೋಧವುಂಟಾಗಿ ತಾನು ಆ ಗಂಡನಿಗೆ ಹೆತ್ತಿದ್ದ ಮಗುವನ್ನು ಕತ್ತರಿಸಿ, ಅಡುಗೆ ಮಾಡಿ ಅವನಿಗೆ ಬಡಿಸುತ್ತಾಳೆ. ತಾಯಿಯ ಹೆಸರು ಪ್ರಾಕ್ನೆ; ಮಗನ ಹೆಸರು ಇಟಿಲಸ್. ದೇವತೆಗಳು ಈ ದುರ್ದೆಸೆಯನ್ನು ನೋಡಲಾರದೆ ಬೇರೆ ಅನಾಹುತಗಳು ಸಂಭವಿಸಲಾಗದಂತೆ ಗಂಡ, ಹೆಂಡತಿ, ನಾದುನಿ, ಮಗ ಇವರನ್ನು ಹಕ್ಕಿಗಳಾಗಿ ರೂಪಾಂತರಗೊಳಿಸುತ್ತಾರೆ. ನಾದುನಿ ನೈಟಿಂಗೇಲ್ ಆಗುತ್ತಾಳೆ; ಒಡೆಯ ರಣಹದ್ದು. ಅದರ ಹಾಡೇ "The Sad song of the Nightingale" ಎಂದು ಪಾಶ್ಚಾತ್ಯ ಸಾಹಿತ್ಯದಲ್ಲಿ ಪ್ರಖ್ಯಾತವಾದುದು. ಆ ಪದ್ಯವನ್ನು ಓದಬೇಕು. ಅದರ ಅಡಕ, ಅದು ಆರಂಭವಾಗಿ ಬೆಳೆಯುವ ರೀತಿ, ಪರಿಸಮಾಪ್ತವಾಗುವ

Eternal passion!
Eternal pain!

ಎಂಬ ಭಾಗವನ್ನು ಅವರು ಓದಿದ ರೀತಿ ಇಂದಿಗೂ ಹೊಸತಾಗಿದೆ. ತನ್ನ ಕಾಲದ ಶ್ರದ್ಧೆಗೆ ಕವಿದ ಸ್ಥಿತಿಯನ್ನು ಕುರಿತು ನುಡಿದರೂ ಆಗಿನಂತೆ ನಾವೂ

And each half lives a hundred different lives;
Light half- believers of our casual creeds,

ಎಂಬ ಭಾಗ ಹೃದಯಭೇದಕವಾಗಿ ಕಾಡಿಸುತ್ತಿದೆ. Creed ಯಾವುದಾದರೂ ಈ ದಿನದ ಮೇಧಾವಿಗಳಿಗೆ ಇದೆಯೊ ಎನ್ನಿಸುತ್ತದೆ. ಇದನ್ನೇ ಇದೇ ಪುಸ್ತಕದಲ್ಲಿದ್ದ ಸ್ವಿನ್‌ಬರ್ನ್ ಕವಿಯ 'ಇಟಿಲಸ್' ಪದ್ಯ ಓದಿದಾಗ ನೆನಪಿಗೆ ತಂದುಕೊಟ್ಟು, 'ಈ ನೋವಿನ ಭಾಗ ಹೇಗೆ ಅಲ್ಲಿನ ಛಂದೋರಚನೆಯಲ್ಲಿ ಕವಿತಾ ವಿನ್ಯಾಸದಲ್ಲಿ ರೂಪಗೊಳ್ಳುತ್ತದೆ, ನೋಡಿ; ಆದರೆ ಇಲ್ಲಿ ಹೇಗೆ ಅಡಕಕ್ಕಿಂತ ಹೆಚ್ಚಾಗಿ ಮಾತು ಹೆಚ್ಚು; ಭಾವಭಾಗ, ಅತಿರೇಕ' ಇತ್ಯಾದಿ ಹೇಳಿದರು. ಅಲ್ಲಿನ–

Swallow, my sister, O, sister swallow,
How can thine heart be full of the spring?
. . . .
Shall not the grief of the old time follow?

ಎಂಬುದನ್ನು ಬಗೆಬಗೆಯಾಗಿ ಮಾರ್ಪಡಿಸಿ

Can I remenber if thou forget?
O sister, sister, thy first- begotten!
. . . .

Thou last forgotten, O, Summer swallow,
But the world shall end when I forget.

ಎಂಬ ಸಾಲಿಗೆ ಬರುವಾಗ ಅವರ ಮುಖವನ್ನು ನೋಡಬೇಕಿತ್ತು, ಆ ಧ್ವನಿಯನ್ನು ಕೇಳಬೇಕಿತ್ತು! ಇದನ್ನು ಬೆಳಸುತ್ತ ಹೋಗುವುದಕ್ಕೆ ನನಗೆ ಇಚ್ಛೆಯಿಲ್ಲ. ಅವರ ಪಾಠಕ್ರಮ ಸಾಹಿತ್ಯದ ಜೀವಜೀವಾಳ; ವಿಮರ್ಶೆಯ ಸಾರತತ್ವ; ಎಂಥವರಿಗೂ ಹೃದಯವನ್ನು ಕರಗಿಸುವ ಸತ್ವವುಳ್ಳದ್ದು ಎಂದಷ್ಟೇ ಹೇಳಬಯಸುತ್ತೇನೆ ಇಲ್ಲಿ.

"Fear death?" ಎಂದು ತೊಡಗುವ ಬ್ರೌನಿಂಗ್ ಕವಿಯ 'Prospice'– ಕವಿತೆಯನ್ನು ಓದಿದ್ದರ ಬಗೆಗೆ ಹಿಂದೆ ತಿಳಿಸಿದ್ದೇನೆ. ಅದೇ ರೀತಿ ಹೆನ್ಲೆಯ.

In the fell clutch of circumstance
I have not winced nor cried aloud.
Under the bludgeonings of chance
My head is bloody, but unbowed.

Beyond this place of wrath and tears
Looms but the Horror of the shade,
And yet the menace of the years
Finds, and shall find, me unafraid.

ಎಂಬುದನ್ನು ಓದಿ ನುಡಿದದ್ದು ಕವಿತೆ ಯಾವ ಸ್ಥೈರ್ಯವನ್ನು ತಂದುಕೊಡಬಲ್ಲದು ಎಂಬುದರ ಪ್ರತೀಕವಾಯಿತು. ಪ್ರತ್ಯೇಕವಾಗಿ ನಾನು ಅವರ ಕಾರ್ಲೈಲರ 'ಸಾರ್ಟರ್ ರಿಸಾರ್ಟಸ್', ಬ್ರೌನಿಂಗಿನ ಇತರ ಕವಿತೆಗಳ ಪಾಠ ಕೇಳಿಲ್ಲ. ಅವರ ಅಪ್ಪಣೆ ಕೇಳಿಕೊಂಡು ಎಂ.ಎ. ಕ್ಲಾಸಲ್ಲಿ ಕೋಲ್‌ರಿಜನ *Biographia Literaria* ಕ್ಲಾಸಿಗೆ ಹೋದದ್ದುಂಟು. ಅದರ ರೀತಿ ಬೇರೆ! ಅಂಥ ಸಾಹಿತ್ಯದ ಗುರುಗಳು ನಂದಾದೀವಿಗೆಗಳು. . . ಆದುದರಿಂದ ನಾವು ಅವರಿಗೆ ನಿಜವಾದ ಗುರುಸ್ಥಾನವನ್ನು ಕೊಟ್ಟೆವು. ನಾನು ಸಾಹಿತ್ಯದಲ್ಲಿ ಯಾವ ಪದವಿಯನ್ನೂ ಪಡೆದವನಲ್ಲ. ನಾನು ಓದಿದ್ದು ತತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ. ಆದರೆ ನನಗೆ ಅನ್ನಿಸಿದೆ: ಯಾವುದಾದರೂ ಒಂದು ಸಮಾಜವಿಜ್ಞಾನಭಾಗವನ್ನೊ ಶಾಸ್ತ್ರಭಾಗವನ್ನೊ ವಿಜ್ಞಾನ ಭಾಗವನ್ನೊ ಬಿ. ಎ., ತರಗತಿಗಳಲ್ಲಿ ಓದದೆ ಕನ್ನಡದಲ್ಲಿ ಎಂ.ಎ. ಮುಂತಾದ ಪರೀಕ್ಷೆಗಳಲ್ಲೆಲ್ಲ ಕೇವಲವಾಗಿ ವ್ಯಾಸಂಗ ಅದರ ಆನರ್ಸ್ ತರಗತಿಗಳಿಂದ ತನಿಯಾಗಿ ಲೋಕಜ್ಞಾನಕ್ಕೆ ಅಸಿದ್ಧವಾಗಿ ಕಲಿಸುವುದು ಸೂಕ್ತವಲ್ಲ ಎಂದು. 'ಶ್ರೀ'ಯವರು ಎಷ್ಟೋ ವೇಳೆ ಹೇಳುತ್ತಿದ್ದ ಪರಸ್ಪರ ವೈದೃಶ್ಯ ವಿರುವ ಎರಡು ಸಾಹಿತ್ಯಸಂಸ್ಕಾರವನ್ನೂ ವಿಭಾಗವನ್ನೂ ಓದಿದಲ್ಲದೆ ಒಂದರ ಎಷ್ಟು ಆಳವಾದ ಪ್ರಜ್ಞೆಯೂ ಅರೆತಿಳಿವಾಗುತ್ತದೆ ಎಂಬ ಮಾತೂ ಅದೇ ನೆಲಸಿನದು; ಹೃದಯದ್ದು.

* * *

'ಶ್ರೀ'ಯವರ ಗ್ರಂಥಗಳು ಸಂಖ್ಯೆಯಲ್ಲಿ ಕಡಮೆ. ಅವನ್ನು ಕುರಿತು ಈಗಾಗಲೇ ಬೇಕಾದಷ್ಟು ಪ್ರಬಂಧಗಳು ಬಂದಿವೆ. ಭಿನ್ನಾಭಿಪ್ರಾಯಗಳಿರುವಲ್ಲಿಯೂ ಅವುಗಳ ಗುಣಾವಗುಣಗಳು ಎಲ್ಲರಿಗೂ ಎಂದಿಗೂ ಕಾಣತಕ್ಕವೇ. ಅವರು ಪ್ರಚುರಪಡಿಸಿದ 'ಇಂಗ್ಲಿಷ್ ಗೀತ'ಗಳನ್ನು ಕುರಿತು ಕೂಡ ವಿಚಿತ್ರವಾದ ವ್ಯಾಖ್ಯಾನಗಳು ಬಂದಿವೆ. ಅವನ್ನು ಕುರಿತು ಹೇಳುವ ಮುಂಚೆ ಒಂದೆರಡು ಮಾತನ್ನು ಹೇಳುತ್ತೇನೆ: ಬರಹಗಾರನು ಎಂಥವನೇ ಆಗಲಿ, ಜನರೆದುರಿಗೆ ನಟರಂಗದ ವೇದಿಕೆಯ ಮೇಲಿನ ನರ್ತಕ. ನೋಡುವವರೆಲ್ಲರೂ ಅದನ್ನು ಕುರಿತು ಟೀಕೆ ಮಾಡಬಹುದು. "He is a public challenger of Men" ಎಂದರು Dr. Johnson. ನಾನು ಆಡುವುದನ್ನು ಕೇಳಿ; ಬರೆದಿರುವುದನ್ನು ಓದಿ ಎಂದು ಕರೆದು ಆಹ್ವಾನ ಕೊಡುವವನು ಅವನು. ಇಂಥವನು ಸಾರ್ವಜನಿಕ ವಿಮರ್ಶೆಗೆ ಈಡಾಗಲೇ ಬೇಕು. ಯಾರು ಏನು ಹೇಳುತ್ತಾರೊ ಅದೆಲ್ಲ ಒಂದು ಬಗೆಯ ಟೀಕೆ; ವಿಮರ್ಶನವೇ. ಅವರವರ ರುಚಿ, ಬೆಲೆಯೆಣಿಕೆ, ಸಂಸ್ಕಾರ, ಭಾವಸಾಮಂಜಸ್ಯಗಳಿಗೆ ಅದು ಹೊಂದಿಕೊಳ್ಳುತ್ತದೆ. ಅತಿಪಕ್ವತೆ, ಅಪಕ್ವತೆಗಳ ಮಟ್ಟ ಇರುತ್ತದೆ; ಕಟಕಿ, ಮಡ್ಡಿತನ, ಕೊಂಕು, ಯಾವುದೋ ಉರಿ, ವಿದ್ರೋಹ ಇರಬಲ್ಲವು. ಯಾರು ಹೇಳುವುದೂ ಅಂಥುದರ ಒಂದಂಶ. ಎಂಥವನು ಹೇಳುವುದರಲ್ಲಿಯೂ ನೂರಕ್ಕೆ ನೂರರಂತೆ ಸರಿಯಾದ ವಿಮರ್ಶನವಾಗಬಲ್ಲ ಗುಣವಿರುತ್ತದೆ ಎಂದಾಗಲಿ, ಅದೇ ಕಡೆಯ ತೀರ್ಮಾನ ಎಂಬುದಾಗಲಿ ಇಲ್ಲ. ರಾಮಾಯಣ, ಶಾಕುಂತಲ, ಷೇಕ್‌ಸ್ಪಿಯರ್ ನಾಟಕಗಳನ್ನು, ಹೋಮರನ್ನು ಕುರಿತೇ ಅಸಂಖ್ಯ ಕೃತಿಗಳಿವೆ. ಎಷ್ಟು ಮಟ್ಟಿಗೆ ಕೃತಿನಿಷ್ಠವಾಗಿರುತ್ತದೆ, ಭಾವಬಂಧುರತೆ ಇರುತ್ತದೆ, ಸೌಹಾರ್ದ, ಯುಕ್ತಿ (Reason) ಇರುತ್ತದೆ– ಎಂಬುದು ಸಂತತವೂ ವಿಚಾರ್ಯವಾಗಬೇಕಾದ್ದು. ಒಬ್ಬೊಬ್ಬರ ಮನಸ್ಸಿನಲ್ಲಿಯೂ ಪಕ್ಷಪಾತ, ಸ್ವಾಭಿಪ್ರಾಯ ಪ್ರಾಧಾನ್ಯ ಹೇಗಿರುತ್ತದೆಯೊ ಹಾಗೆ ಅವರವರ ವಿಮರ್ಶನ ಒರಟುಘೋಷಣವಾಗಿ ಬೆಳೆಯುತ್ತದೆ.

ಗುಂಡಪ್ಪನವರು ತಮ್ಮ ಪತ್ರಿಕೆಯಲ್ಲಿ– 'ಕರ್ನಾಟಕ ಜನಜೀವನ'– ಸುಮಾರು ೧೯೨೪ರಲ್ಲಿ ಅಚ್ಚುಮಾಡಿದ, 'ಶ್ರೀ'ಯವರ ಇಂಗ್ಲಿಷ್ ಗೀತಗಳ ಪದ್ಯಗಳಿಗೆ ಹಿಂದಿನವನ್ನು ನಾನು ಓದಿರಲಿಲ್ಲ; ಕರ್ನಾಟಕ ಸಂಘ ಅವನ್ನು ಪುಸ್ತಕವಾಗಿ ಪ್ರಕಟಿಸಿದಾಗ ಆ ಕವಿತೆಗಳ ಸಂಪೂರ್ಣ (–ಎನ್ನಬಹುದೆ?) ಒಟ್ಟು ಪರಿಚಯವಾಯಿತು. 'ಶ್ರೀ'ಯವರು ಇಂಗ್ಲಿಷ್, ಕನ್ನಡ, ಸಂಸ್ಕೃತ, ತಮಿಳು ನಾಲ್ಕರ ಛಂದಸ್ಸನ್ನೂ ಬಲ್ಲವರು. ಇಂಗ್ಲಿಷಿನ ಸ್ವರಘಾತದ–accentuated- ಛಂದಸ್ಸು ನಮ್ಮದಲ್ಲ. ಸಂಸ್ಕೃತ ವೃತ್ತಗಳನ್ನು ಬಿಟ್ಟರೆ ಬಹುಮಟ್ಟಿಗೆ ಕನ್ನಡದ್ದು ಮಾತ್ರಾಗಣ ಅಂಶಗಣಗಳ ರಚನೆ, ಓಟ–ಪಾಟ; ೩, ೪, ೫, (೩+೪) ಅಥವಾ ಒಟ್ಟಿಗೆ ೭, ೮ (೩+೫) ಸಂಯುಕ್ತ

ಗಣಗಳ ರೂಢಿಯದು.[17] ಅಕ್ಕರ ಸಾಂಗತ್ಯ ತ್ರಿಪದಿಗಳನ್ನು ಹೇಗೆ ವಿಸ್ತರಿಸಿಕೊಳ್ಳುತ್ತಾರೆ ಎಂಬುದನ್ನೂ ಬಲ್ಲವರು. ಹಿಂದಿನ ಕನ್ನಡ ಕೃತಿಗಳಲ್ಲಿ ಬಳಸುತ್ತಿದ್ದ ವೃತ್ತಕಂದಗಳ ಪ್ರಯೋಗ ಹೊಸಕನ್ನಡಕ್ಕೆ ಅಷ್ಟಾಗಿ

- -

(17 ಈಚೆಗೆ ೫ ಮಾತ್ರೆಗಳನ್ನು ೩+೨, ೨+೩ ಆಗಿ ಕುವೆಂಪು ಒಡೆದುಕೊಂಡಿದ್ದಾರೆ. ವಿನಾಯಕರು ೪+೫ ಏಕಾಗಬಾರದೆಂಬಂತೆ ಷಟ್ಪದಿಯಂಥ ಛಂದದಲ್ಲಿ ಅಂತ್ಯಪ್ರಾಸಗಳು ಒದಗುವಂತೆಯೂ ಬರೆದಿದ್ದಾರೆಂಬ ಮಸುಕು ನೆನಪು ನನಗೆ.)

ಒಗ್ಗುವುದಿಲ್ಲವೆಂದೂ ನಡುಗನ್ನಡದ ಎಲ್ಲ ಮಾರ್ಗಗಳೂ ಎಲ್ಲ ಕವಿ ಕಾರ್ಯಕ್ಕೂ ಹೊಂದುವುದಿಲ್ಲವೆಂದೂ ಅವರು ಅರಿತಿದ್ದರು. ಮುಂದೆ 'ಪಾರಸಿಕರಲ್ಲಿ' ಸ್ವಲ್ಪಮಟ್ಟಿಗೆ ಮಿಶ್ರಬಳಕೆಯ ಸ್ವಾತಂತ್ರ್ಯವನ್ನು ವಹಿಸಿದರೂ ಅಚ್ಚಕನ್ನಡವೆನ್ನಬಹುದಾದ ಛಂದಸ್ಸು, ಮಾತುಗಳನ್ನೇ ಬಳಸಿಕೊಂಡು ಆದಿಪ್ರಾಸವನ್ನು ಬಿಟ್ಟು ಅಂತ್ಯ ಪ್ರಾಸವನ್ನು ಅಗತ್ಯ ಬಿದ್ದಲ್ಲಿ ಒಂದು ನಾದಕ್ರಿಯೆಗೊ ಅರ್ಥಸಾಧನೆಗೊ ಮಾತ್ರ ಬಳಸಿಕೊಂಡರು. ಅವರೇ ಈ ಗೀತಗಳಿಗೆ ಬರೆದ 'ಅರಿಕೆ'ಯಲ್ಲಿ "ಕನ್ನಡದ ಜಾಯಮಾನವನ್ನು ಮೀರದೆ ಎಷ್ಟುಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲಬಹುದೊ ಅಷ್ಟುಮಟ್ಟಿಗೆ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಪಟ್ಟಿರುತ್ತೇನೆ" ಎಂದಿದ್ದಾರೆ. ಹಾಗೆಯೇ, "ಸಂಪ್ರದಾಯ ಮಾರ್ಗವನ್ನೇ ಛಲಹಿಡಿಯದೆ, ವಿಶ್ವ ಕವಿತಾ ವಿಷಯಗಳಾದ ಯುದ್ಧ, ಪ್ರೇಮ, ಮರಣ, ದೈವಭಕ್ತಿ, ದೇಶಭಕ್ತಿ, ಪ್ರಕೃತಿ ಸೌಂದರ್ಯ, ಮಾನವಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜ ಭಾಷೆಯಲ್ಲಿ ಸೌಂದರ್ಯರಚನೆಯನ್ನು ಮಾಡಿರುವರೊ ಅದನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ. . ." ಬರೆಯಬೇಕೆಂದು ಇವನ್ನು ಬರೆದಿದ್ದೇನೆ ಎಂದಿದ್ದಾರೆ. ಬಹುಮಟ್ಟಿಗೆ ಕವನಗಳ ವಿಷಯ ೧೯೧೯–೨೦ರಲ್ಲಿ ನಮಗೆ ಪಾಠ ಹೇಳಿದುದೇ. ಪಾಲ್‌ಗ್ರೇವ್ ಪಾಠದ ಮುಖ್ಯವಿಭಾಗ, ಉಪವಿಭಾಗಗಳಿಗೆ ಬಂದಿತ್ತು. ಅವುಗಳ ಪ್ರಕಾಶನ, ಪ್ರಯೋಗ ಎಂಬಂತೆ ಈ ಕವಿತೆಗಳಿದ್ದುವು. ಸುಮಾರು ೬೦ ಕವಿತೆಗಳನ್ನು ಕುರಿತೂ ನುಡಿಯುವ ಅಗತ್ಯ ಇಲ್ಲಿಲ್ಲ; ಅದನ್ನಾಗಲೇ ತೀ.ನಂ.ಶ್ರೀ ಮುಂತಾದವರು ಮಾಡಿದ್ದಾರೆ.

ಯಾವುದನ್ನು Lyric ಎನ್ನುತ್ತಾರೊ ಅದು Lyre ಎಂಬ ಒಂದು ಬಗೆಯ ತಂತ್ರೀವಾದ್ಯಕ್ಕೆ, ಅದರ ಶ್ರುತಿಗೆ ಹಾಡುವುದೆಂದಿತ್ತು ಮೊದಲು. ಒಂದು ಬಗೆಯ ಗೀತ ಅದು ಎಂಬ ಅರ್ಥವುಳ್ಳದ್ದು. ಹಾಡಲು ಅನುವಾಗದ ಎಷ್ಟೊ Lyric ಗಳಿದ್ದರೂ Sonnet ಅನ್ನು– ಚತುರ್ದಶಪದಿ, ಚೌದಶಪದಿ,– ಹಾಡಲು ಶಕ್ಯವಿಲ್ಲ. ಎಜ್ರಾಪೌಂಡ್ ಅದನ್ನು "Historically the Sonnet,- the little one had become a danger to composition. . . . It marks an ending or atleast a decline of metrical invention. It marks the beginning of the divorce of words and music. Sonnets with good musical settings are rare . . . ."ಎಂದೂ–

"The prestige of the Sonnet in English is a relic of singular ignorance. The Sonnet was not a great poetic invention. The Sonnet occured automatically when some chap got stuck in the effort to make a Canzone. His 'genius' consisted in the recognition of the fact that he had come to the end of his subject matter. . . . .[18]-ಎಂದೂ ಲೇವಡಿ ಮಾಡಿದ್ದಾನೆ. ಅದಕ್ಕೆ ಇಂಗ್ಲಿಷಲ್ಲಿಯೇ ಒಂದು ಚರಿತ್ರೆಯಿದೆ. ಅತ್ಯುತ್ತಮ ಸಾನೆಟ್ ಬರೆದವರ ಸಂಖ್ಯೆ ಅಲ್ಲಿಯೂ ಕಡಮೆಯೇ. ಈಗಿನವರು ಅಲ್ಲಿಯೂ ಅನೇಕ ಧಾರಾಳಗಳನ್ನು ಬಳಸುತ್ತಾರೆ. ಅರ್ಥವಿನ್ಯಾಸದಲ್ಲಿ ಎರಡು ಭಾಗಗಳಿರುತ್ತಿದ್ದುದು ರೂಢಿ. ಅದನ್ನು ಸಾಧಿಸುವಾಗ ಒಂದು ತಿರುವು ಬರುತ್ತದೆ. ಇನ್ನು ಕೆಲವಲ್ಲಿ ಒಂದು ತೋಕೆ, ಬಾಲ–(Coda) ಎಂಬ ಭಾಗ ಇರುವುದುಂಟು. ಆದರೆ ಎಲ್ಲಿ ಪದ್ಯದಲ್ಲಿ ಲಯ ಸೌಲಭ್ಯ, ಹೊದಾಣಿಕೆ, ಪಲ್ಲವಿಯಂತಿರುವ ಒಂದೊ ಎರಡೊ ಸಾಲುಗಳ ರಚನೆ ಇರುತ್ತದೆಯೊ ಅಲ್ಲಿ ಅವನ್ನು ಅರ್ಧ ಹಾಡುಗಳಾಗಿ ಬಳಸಿಕೊಳ್ಳಬಹುದು. ಅವನ್ನು ವಿಧವಿಧವಾದ ಭಾವವ್ಯತ್ಯಾಸಕ್ಕೆ ಹೊಂದುವಂತೆ ಹೇಳಿಕೊಳ್ಳಬೇಕಾಗುತ್ತದೆ. (ಉದಾ: ಬ್ಲೆನ್ ಹಿಮ್ ಕದನ; ಮಾದ– ಮಾದಿ), ಮತ್ತು ಒಂದು ಭಾವಸ್ಥಿತಿಯಿಂದ ಮತ್ತೊಂದು ಭಾವಸ್ಥಿತಿಗೆ ತಿರುಗುವ ಸಂದರ್ಭಗಳಿವೆ. ಎಲ್ಲ ಕವಿತೆಯಲ್ಲಿಯೂ ಈ ಹಾಡಿನ ವಿಲಾಸವನ್ನು–ಗಮಕವನ್ನು ಬೆಳಸಿದಂತೆ recitative ಎಂದು ಅವನ್ನು ಕರೆಯುವ ರೀತಿಯಲ್ಲಿ ಹೇಳಿಕೊಳ್ಳಬಹುದು.

– –

18 ಎಜ್ರಾಪೌಂಡ್ ಅನ್ನೇ ಕವಿಯೆಂದು, ವಿಮರ್ಶಕನೆಂದು ಒಪ್ಪದವರು ಇದನ್ನು ಒಪ್ಪುತ್ತಾರೆಯೊ ಇಲ್ಲವೊ ಕಾಣೆನಾದರೂ ಇಂಗ್ಲಿಷಲ್ಲಿ ಬಹುದೊಡ್ಡ ಕವಿಗಳಾಗಿದ್ದ ಎಲಿಯಟ್, ಯೇಟ್ಸ್, ಮುಂತಾದವರು ಆತನ ತಿಳಿವಳಿಕೆಗೆ ಮಾನ್ಯತೆ ಕೊಟ್ಟಿದ್ದರು.

ಮಾದಿ ಕತ್ತನೊಲೆದುದೇನು!
ಅತ್ತ, ಇತ್ತ, ಸಿಡಿದುದೇನು!

ಎಂದ ಸ್ಥಿತಿಗೂ ಅವಳು ಮಾದನಿಗೆ ಸೋತಾಗ ಉಂಟಾದ

ಸುಯ್ದು, ಸುಯ್ದು ತಣ್ಣಗಹುದು,
ಕಣ್ಣೊ, ಒಂದ ನುಡಿಯುತಿಹುದು!

ಎಂಬ ರೀತಿಗೂ ವ್ಯತಿರೇಕ ತೋರುವಂತೆ ಹೇಳಬೇಕು.

ಬೇಸಗೆಯಲಿ ಸಂಜೆಯಾಯಿತು; ಕೆಲಸವ
ಮುತ್ತಜ್ಜ ತೀರಿಸಿಕೊಂಡ.

ಎಂದು ಆರಂಭವಾಗುವ ಗದ್ಯದಂತಿರುವ ಒಂದು ರೀತಿಯನ್ನು ಓದುವ ಧಾಟಿ ಅಂಶಗಣದ ಲಯದಲ್ಲಿ ಆರಂಭ ಮಾಡಿ ಎಲ್ಲ ಯುದ್ಧದಲ್ಲಿಯೂ ಹೀಗೇ ಕೊಲೆ ತಾನೆ! ಆದರೆ ಇಂತಹುದು ಎಷ್ಟೊ ಆಗಲೇಬೇಕಲ್ಲ–

ಯಾರನೆ ಕೇಳವರೆಲ್ಲರು
ಲೋಕಪ್ರಸಿದ್ಧಿಯ ಜಯವೆಂಬರೆಂದ

ಎಂಬಲ್ಲಿಯಾಗಲಿ, 'ಚೋಳಕನ್ನೆಯರ'ಲ್ಲಿ

ತಾಳು ಕಂಬನಿಯ, ತುಂಬು ಕಂಬನಿಯ,
ಚೋಳ ಕನ್ನೆಯರ ಭಂಗಕೆ

ಎಂಬುದರ ಪುನರಾವೃತ್ತಿ ಬೇರೆ ಬೇರೆ ಸಂದರ್ಭಗಳಲ್ಲಿ ಬರುವುದನ್ನಾಗಲಿ ಅವರು ನುಡಿಯುತ್ತಿದ್ದಂತೆ ನುಡಿಯಬೇಕು. 'ಮುದಿಯ ರಾಮಗೌಡ'ನ ಕತೆ ಪ್ರೇಮದ ಒಂದು ವಿಷಮ ಸನ್ನಿವೇಶವನ್ನು ಹೊಮ್ಮಿಸುವಾಗಿನ ನೋವು ನುಡಿದು ಕೇಳಬೇಕಾದ್ದು.[19] 'ದುಃಖಸೇತು'ವಿನ ಭಾಷಾಂತರವಾದರೊ–

Alas! for the rarity
Of Christian charity
Under the Sun!-

ಎಂಬಾಗ– –

ಆಹ, ಎಲ್ಲಡಗಿತೋ,
ಆರ್ಯಧರ್ಮದ ಕರುಣ,
ಆರ್ಯಜನಗಳ ಮರುಕ,
ಉರಿಯುವನೆ ಬಲ್ಲ!

ಎಂಬಲ್ಲಿ Christianity ಕನ್ನಡಕ್ಕೆ ಬರುವಾಗ 'ಆರ್ಯಧರ್ಮ'ವಾದರೂ ಪದ್ಯದ ಧಾಟಿ ಕರುಳನ್ನು ನುಲಿಯುತ್ತದೆ; ಎದೆಯನ್ನು ಇರಿಯುತ್ತದೆ.

ಮೆಲ್ಲಗಿವಳನು ಮುಟ್ಟು,
ಮರುಗಿ ಹಿಡಿದೆತ್ತು,
. . . .
ದುಡುಕಿ, ಕಟ್ಟನು ಮೀರಿ,
ಕೆಟ್ಟವಳು ಇವಳು,

ತಾನು ಮಾಡಿದ ಕರ್ಮ
ತನ್ನ ಬೆನ್ನಲಿ ಬಂದು
ಸುಟ್ಟವಳು ಇವಳು;
ಎನುತ ದೋಷವ ಬೆದಕಿ
ಗದರದಿರು ನೀನು.
ಅವಳ ಪಾಪಗಳೇನೊ,
ಹೊಲ್ಲ ನಡೆಯೇನೊ,

ಅದರೆಣಿಕೆಗಿದೆ ಹೊತ್ತು?
ನಾವೆ ಜರೆವವರು?

ಜವರಾಯ ನುಂಗಿದೀ
ಹೆಣ್ಣು ಮಗುವಿನಲಿ
ಹೊರೆದ ಕಲ್ಮಷ ತೊಳೆದು,
ಈಗ ತಾನುಳಿದಿಹುದು,
ಚೆಲುವಾದ, ನಿರ್ಮಲದ
ಹೆಣ್ಣುತನವೊಂದು!

ಎನ್ನುವವರೆಗೂ ಬರುವ ದುರ್ಭರವಾದ ಪ್ರಸಂಗ ಬಹುಮಟ್ಟಿಗೆ ನಮ್ಮಲ್ಲಿ ಕಾಣದ ಕರುಣೆಯ ಸಂದರ್ಭ.

– –

19 ಕಾರಂತರ 'ಸೋಮಿಯ ಸೌಭಾಗ್ಯ' ಅದರ ಹತ್ತಿರದ್ದು.

ಒಂದು ಮಾತನ್ನು ಹೇಳಬೇಕು: ತುಂಬಿದ ಹೃದಯವನ್ನು ಕಾಣಿಸುವ ಗೀತಗಳಲ್ಲಿಯಾದರೂ– ಬಹುಶಃ ಎಲ್ಲ ಕವಿತೆಗಳ ನಿರ್ಮಾಣದಲ್ಲಿಯೂ– ಕವಿ ತಾನು ಬಳಸುವ ಮಾತುಗಳನ್ನೂ ಪದರಚನೆಯನ್ನೂ ಛಂದೋರಚನೆ ಅವನ ಕಿವಿಯಲ್ಲಿಯೇ ಸ್ಫುಟವಾಗುವಂತೆ ನುಡಿದುಕೊಳ್ಳುತ್ತಾನೆ. ಹೀಗೆ ನುಡಿದುಕೊಳ್ಳದೆ ಯಾವ ಕವಿತೆಯನ್ನೂ ಓದಬಾರದು. ಕಣ್ಣೋದು, ಮೂಕವಾಗಿ ತನ್ನೊಳಗೇ ಓದಿಕೊಳ್ಳುವ ಓದು ಕಾವ್ಯಕೃತಿಗೆ ಅಪಚಾರ; ಕೊಲೆ.

In days of Old, when Knights were bold
And paper was not invented
They wiped their ass upon the grass
And rode away contented

ಇಂಥದನ್ನು ಮೂಕವಾಗಿ ಓದಿ ಸ್ವಾಸ್ಥ್ಯದಲ್ಲಿರುವುದು ಶಕ್ಯವೇ? Paper ಅನ್ನು Paiper ಎಂಬಂತೆ ಉಚ್ಚಾರ ಮಾಡುತ್ತಾರೆ ಅಲ್ಲಿನ ಸಾಮಾನ್ಯರು!

ವಸಂತ ಬಂದ ಋತುಗಳ ರಾಜ ತಾ ಬಂದ

ಎಂದು ಭಾಷಾಂತರವಾಗುವ ನ್ಯಾಷ್ ಕವಿಯ Spring' ಪದ್ಯದಲ್ಲಿನ–

ಕೂವೂ,ಜಗ್ ಜಗ್, ಪುವ್ವೀ, ಟೂವಿಟ್ಟವೂ!

ಮುಂತಾದ ಮಾತುಗಳು ಸಿಳ್ಳೆ ಹಾಕಿದಂತೆ ಕಿವಿಗೆ ಕೇಳುತ್ತವೆ. ಅವನ್ನು ಹಾಗೆ ಹೇಳಿಕೊಂಡೇ ನುಡಿಯ ಬೇಕೇನೊ. .

'ಶ್ರೀ'ಯವರನ್ನು 'ಆಳೌ, ಬ್ರಿಟಾನಿಯಾ' 'ಇಂಗ್ಲೆಡ್ ನಾವಿಕರು' ಇತ್ಯಾದಿ ಪದ್ಯಗಳಿಗೂ ಇನ್ನೂ ಕೆಲವು ಸಂಗತಿಗಳಿಗೂ ಸಂಬಂಧಿಸಿದಂತೆ ಭಾರತೀಯರಿಗೆ ಸಲ್ಲದ ಒಂದು ಅಭಿಮತ ಇತ್ತೆಂದು ಆಕ್ಷೇಪಿಸುತ್ತಾರೆ. ಇವರು ಸರ್ಕಾರದ ನೌಕರರು. ಬ್ರಿಟಿಷ್ ಇಂಡಿಯದಲ್ಲಿ ನೇರವಾಗಿ ಬ್ರಟಿಷರಿಗೆ ಜನ ಒಳಪಟ್ಟಿದ್ದರೂ ನಾವು ಬ್ರಿಟಿಷರ ಅಧೀನದಲ್ಲಿದ್ದ ಒಂದು ದೇಶಿ ಸಂಸ್ಥಾನದಲ್ಲಿ ಇದ್ದವರು! ಇಬ್ಬಗೆಯ ದಾಸ್ಯ. ತಕ್ಷಣಕ್ಕೆ ಮೇಲಿದ್ದವರು ಇಂಗ್ಲಿಷ್ ಅಧಿಕಾರಿಗಳು. ದೇಶಪ್ರೇಮವನ್ನು ತೋರಿಸತಕ್ಕ ಪದ್ಯಗಳು ಬಂದಾಗ ರೆಸಿಡೆಂಟ್ ಕಾಬ್ ಅಂಥವರ ಕಡೆಯಿಂದಲೂ Private Secretary ಕ್ಯಾಂಬೆಲ್ ಮುಂತಾದವರ ಮೂಲಕವಾಗಿಯೂ ನಮ್ಮ ಸರ್ಕಾರಕ್ಕೆ ಎಚ್ಚರಿಕೆಯ ಲೇಖನಗಳು ಬರುತ್ತಿದ್ದುದುಂಟು. ಇವರಿಗೆ ಇಂಗ್ಲಿಷ್ ಪ್ರೀತಿ ಎಷ್ಟೇ ಇರಲಿ, ಅವರು ತಮ್ಮ ದೇಶಪ್ರೀತಿಯನ್ನು ಹೇಗೆ ತೋರಿಸುತ್ತಾರೆ ಎಂಬುದರ ಮಾದರಿಗಾದರೂ ಇರಲಿ ಎಂಬಂತೆ ಕೆಲವನ್ನು ಆರಿಸಿದರು.[20] 'ಶ್ರೀ'ಯವರನ್ನು ಸಮರ್ಥಿಸಲು ಈ ಮಾತನ್ನು ನಾನು ಆಡುತ್ತಿಲ್ಲ; ಅವರು ತೀರಿಕೊಳ್ಳುವಾಗ ದೇಶ ಸ್ವತಂತ್ರವಾಗುವ ಸ್ಥಿತಿಗೆ ಬರುತ್ತಿತ್ತು. ಸರ್ಕಾರದ ಕೆಲಸದಲ್ಲಿದ್ದವರು ಒಂದು ರಾಜಕೀಯ ಸಭೆಗೆ ಹೋಗಕೂಡದಾಗಿದ್ದ ಕಾಲ ಅದು. ಅವರಷ್ಟು ಅಸ್ವತಂತ್ರು– Unenfranchised ಎನ್ನಿ ಬೇಕಾದರೆ– ರಾಜ್ಯದಲ್ಲಿ ಬೇರೆ ಯಾರೂ ಇರಲಿಲ್ಲ. ಇದನ್ನು ವಿವರಣೆಯಾಗಿ ಮಾತ್ರ ಹೇಳುತ್ತಿದ್ದೇನೆ. ಸ್ವಾತಂತ್ರ್ಯ ಬಂದ ಮೇಲೆ ಹುಟ್ಟಿದವರು ಈಗಾಗಲೆ ಮುವ್ವತ್ತು ವರ್ಷ ವಯಸ್ಸಿನವರು (Corpses at Thirty ಎಂದು ಒಮ್ಮೆ ಅವರು ಅಂದುದುಂಟು). ದೇವರ ದಯದಿಂದ ಆ ಸ್ಥಿತಿಯಿಂದ ಪಾರಾಗಿದ್ದೇವೆ. ಜೊತೆಗೆ, ನಮ್ಮ ಕಾಲದಲ್ಲಿ ಭಾರತದ ಪ್ರೀತಿ ಎಂಬುದು ಕೂಡ ಇಂಗ್ಲಿಷ್ ಮೂಲಕವಾಗಿಯೇ ಬಂದಿತು. ನಮ್ಮ ಪುರಾಣೇತಿಹಾಸ ಕಾವ್ಯಗಳು, ತತ್ವದರ್ಶನ, ಚರಿತ್ರೆ– ಎಲ್ಲ ಅಲ್ಲಿಂದ ಬಂದುವೇ: ಮ್ಯಾಕ್ಸ್ ಮ್ಯುಲ್ಲರ್ ಅಂಥವರು

– –

20 ಬಂಕಿಮಚಂದ್ರರ 'ಆನಂದಮಠ'ದಲ್ಲಿ ಮುಸ್ಲಿಮರಿಗಿಂತ ಹೆಚ್ಚಾಗಿ ಇಂಗ್ಲಿಷರಿಗೆ ಪ್ರೀತಿವಿಶ್ವಾಸವಿರುವಂತೆ ಪ್ರಸಂಗ ಬರುತ್ತದೆ. 'ದೇವಿ ಚೌಧುರಾಣಿ'ಯಲ್ಲಿಯೂ ಮಾತು ತುಂಬ ಎಚ್ಚರದ್ದು, ಎಳೆದ ತಂತಿಯ ಮೇಲೆ ನಡೆದಂತೆ ನಡೆವ ಕಾಲ ಅದು. ನಮ್ಮ ಸ್ವದೇಶಪ್ರೀತಿಯೆಲ್ಲ ಮುಗ್ಗಿ ಆಳರಸರ ವಿರುದ್ಧದಂತೆ ಬೆಳೆದೇ Pakistan ಆದದ್ದು.

ಭಾರತವನ್ನು ಎತ್ತಿ ನುಡಿದದ್ದರಿಂದ; ಟಾಡ್ ಅಂಥವರು ರಾಜಾಸ್ತಾನದ ಕತೆಗಳನ್ನು ಉಜ್ವಲವಾಗಿ ಬರೆದದ್ದರಿಂದ; ಕಡೆಗೆ ಸೀವೆಲ್ ಅವರು *A Forgotten Empire* ಎಂಬ ಹೆಸರಲ್ಲಿ ಬರೆದರೂ ಮರೆಯತಕ್ಕದ್ದಲ್ಲ ಎಂಬ ಅರ್ಥದಲ್ಲಿಯೇ ಬಹುಮಟ್ಟಿಗೆ ಅದನ್ನು ರಚಿಸಿದ್ದು, ಇಂಡಿಯವನ್ನು ಕುರಿತು ಒಂದಕ್ಷರ ಓದದೆಯೇ ನಮ್ಮ ಕಾಲದಲ್ಲಿ ಬಿ. ಎ., ಎಂ.ಎ., ಪಾಸು ಮಾಡಬಹುದಿತ್ತು ಎಂದು ಇನ್ನೊಂದು ಸಂದರ್ಭದಲ್ಲಿ ಹೇಳಿದ್ದೇನೆ. ಈಚಿನ ಕಾಲದ ದೃಷ್ಟಿಯಿಂದ ಆ ಕಾಲದ ಮಾರ್ಗವನ್ನು ಹೀನಗೋಳಿಸಬಾರದು. ದೇಶಪ್ರೀತಿಯನ್ನು ಕುರಿತ ಕವಿತೆಯೇ ಕವಿತೆಯಲ್ಲ ಎಂಬ ಮಹಾನುಭಾವತೆ ಇಂದಿನ ಅನೇಕರಿಗಿದೆ. ಗಯತೆ(ಗ್ಯುತ್ ಅನ್ನುತ್ತಾರಂತೆ)ಯವರನ್ನು ಫ್ರಾನ್ಸ್ ಮೇಲೆ ವಿರೋಧಗೀತೆ ಏಕೆ ಬರೆಯುವುದಿಲ್ಲ ಎಂದು ಕೇಳಿದಾಗ "ನನ್ನ ಸಂಸ್ಕಾರವೆಲ್ಲ ಫ್ರೆಂಚ್ ಸಾಹಿತ್ಯದ ಮೂಲಕ ಬಂದಿದೆ; ಅದನ್ನು ದ್ವೇಷಿಸುವ ಏನನ್ನು ಬರೆಯಬಲ್ಲೆ? ಯುವಕನಾಗಿದ್ದಿದ್ದರೆ ಸೈನಿಕನಾಗಿ ಯುದ್ಧ ಮಾಡುತ್ತಿದ್ದೆ" ಎಂದರಂತೆ. ಹೆಗೆಲ್ *Philosophy of History* ಗ್ರಂಥವನ್ನೊ ಬೇರೆ ಯಾವುದನ್ನೊ ಬರೆಯುತ್ತಿದ್ದಾಗ ನಪೋಲಿಯನ್ ಸೈನ್ಯ ದಾಳಿ ಇತ್ತ ಬರುತ್ತಿದೆ, ಬೇರೆ ಕಡೆಗೆ ಸರಿಯಿರಿ– ಎಂದಾಗ, ನಪೋಲಿಯನ್ ಗ್ರಾಮ್ಯನಲ್ಲ– ನನ್ನ ಕಾರ್ಯಕ್ಕೆ ಅಡ್ಡಿಬರುವವನಲ್ಲ ಎಂದು ಹೇಳಿ ಇದ್ದ ಕಡೆಯೇ ಇದ್ದನಂತೆ! ಇವೆಲ್ಲ ಕತೆಗಳಲ್ಲ. ಅಲ್ಲದೆಯೊ: 'ಶ್ರೀ' ಯವರಿಗೆ ಮನಸ್ಸಿನಲ್ಲಿ ಒಂದು ಭಾವ ಎಲ್ಲಕ್ಕಿಂತ ದೊಡ್ಡದಾಗಿತ್ತು; ಚಾರಿತ್ರಿಕವಾದ ಯಾವುದೊ ಕಾರಣದಿಂದ ಇಂಗ್ಲಿಷರಿಗೂ ಇಂಡಿಯಕ್ಕೂ ಒಂದು ಸಂಬಂಧ ಉಂಟಾಗಿದೆ; ಅಲ್ಲಿನ ಸಾಹಿತ್ಯ, ತತ್ವ, ಚರಿತ್ರೆ, ರಾಜಕೀಯಗಳಿಂದ ಇಲ್ಲಿನ ಮಾರ್ಗವನ್ನೂ, ತೌಲನಿಕ ದೃಷ್ಟಿಯನ್ನೂ ಬೆಳೆಸಿಕೊಳ್ಳಬೇಕು. ಅದಿಲ್ಲವಾದರೆ ಎಷ್ಟು ಪ್ರಗಲ್ಭವಾದ ಪಾಂಡಿತ್ಯ– ಪಾಶ್ಚಿಮಾತ್ಯ ಆಗಲಿ, ಪೌರ್ವಾತ್ಯ ಆಗಲಿ– ನಾವು ಯಾರೂ ಒಂದು ಹೆಜ್ಜೆ ಮುಂದೆ

ಇಡಲಾಗುವುದಿಲ್ಲ ಎಂದಿದ್ದರು. ಇದು ಸರ್ವಥಾ ನಿಜ. ವಿಮರ್ಶೆ ನಡೆಯಲಿ; ಸತ್ಯಾನ್ವೇಷಣೆಗೆ ತೊಡಗಿರುವವರಿಗೆ ಈ ಪೂರ್ವ ಪಶ್ಚಿಮ ಎರಡು ದೃಷ್ಟಿಗಳೂ ಅರ್ಥವಾಗಿ, ಒಂದನ್ನೊಂದಕ್ಕೆ ಹೋಲಿಸಿ ತಾಳಿಕೆ, ಅಸಾಮಂಜಸ್ಯ ನೋಡಿ, ದೃಷ್ಟಿರೀತಿಗಳು ಬೆಳೆಯದಿದ್ದರೆ ನಮ್ಮ ದೃಷ್ಟಿ ಅರ್ಧಮರ್ಧವಾಗುತ್ತದೆ. . .Love ಎಂಬುದಕ್ಕೆ ಪ್ರತೀಕವಾದ ಏಪ್ರೈಲನ್ನು Intellect ಎಂಬುದಕ್ಕೆ ಪ್ರತೀಕವಾದ ಪ್ಯಾರಸೆಲ್ಸಸನ್ನು ಪಾತ್ರವನ್ನಾಗಿ ಮಾಡಿ, ಅವನು ತೋಳಲ್ಲಿ ಸಾಯುವ ಸಮಯದಲ್ಲಿ ಸೇರಿಸಿ, ಇವೆರಡರ ಸಂಯೋಗವಾಗದಿದ್ದರೆ ಯಾವ ತತ್ವಾನುಭೂತಿಯೂ ಶಕ್ಯವಿಲ್ಲ–

Are we not halves
Of one dissevered world?

ಇತ್ಯಾದಿಯಾಗಿ ಬ್ರೌನಿಂಗ್ ಕವಿ 'ಪ್ಯಾರಸೆಲ್ಸಸ್' ಕಾವ್ಯನಾಟಕದಲ್ಲಿ ತಿಳಿಸುವುದೂ ಹೀಗೆ ಸಾಂಕೇತಿಕ. ಅಲ್ಲದೆಯೋ ವಿದೇಶಗಳೆಲ್ಲದರ ಮಹಾಕಾವ್ಯಗಳ ಪ್ರಮಾಣ ಗ್ರಂಥಗಳಿಲ್ಲದಿದ್ದರೆ ನಮಗೆ ಸಂಯುಕ್ತ ದೃಷ್ಟಿಯ, ಸಾಕಲ್ಯದ ಪ್ರಮಾಣ ಸಿಕ್ಕದಾಗುತ್ತದೆ. ಇಂಥ ಕಾರಣಗಳಿಂದಲೇ 'ಇಂಗ್ಲಿಷ್ ಗೀತಗಳ'ನ್ನು 'ಶ್ರೀ'ಯವರು "To my students" "who believe in the blending of the souls of India and England these verses affectionately are inscribed"- ಅರ್ಪಿಸಿದ್ದೇನೆ ಎಂದದ್ದು. ಹೀಗೆ ಆಯ್ದುಕೊಂಡು ವ್ಯಾಖ್ಯಾನ ಮಾಡುತ್ತ ಹೋದರೆ ಅದೇ ಒಂದು ದೊಡ್ಡ ಪ್ರಸಂಗವಾಗುತ್ತದೆಯಾಗಿ, ಆ ಕೆಲಸಕ್ಕೆ ಈಗ ಕೈ ಹಾಕುವುದಿಲ್ಲ. ಮೊದಲ ಕವಿತೆ 'ಕಾಣಿಕೆ'ಯಲ್ಲಿ–

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು;
. .. .
ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು, ಕಣ್ಣು,
. . . .
ಇವಳ ಸೊಬಗನವಳು ತೊಟ್ಟು,
ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ.

ಎಂಬಲ್ಲಿ ಬರುವ ಪ್ರೀತಿಗಾಗಿ ಅವರನ್ನು ಲೇವಡಿ ಮಾಡಿದವರುಂಟು. 'ಸೊಬಗನುಟ್ಟು' ಎಂದಿದೆಯೇ ಹೊರತು 'ಉಡೆಯನುಟ್ಟು' ಎಂದಿಲ್ಲ; 'ತೊಟ್ಟು', ತೊಡಿಗೆ ಇಟ್ಟು' ಎಂಬವು ಇಲ್ಲಿಯ ಮಾತುಗಳು; ಉಡುಪಿಗೆ ಸಂಬಂಧಪಟ್ಟ ಮಾತುಗಳಲ್ಲ; ಒಡವೆ–ತೊಟ್ಟದ್ದು: ಇಂಗ್ಲಿಷ್ ಫ್ರಾಕ್, ಗೌನ್ ಹಾಕಿ ಭಾರತದ ಇವು ಮಹಿಳೆಯರನ್ನು ದೊರೆಸಾನಿ ಮಾಡಬೇಕೆನ್ನಲಿಲ್ಲ. ಹಲ್ಲು ಕಿರಿಯಬೇಕೆಂದವರಿಗೆ ಯಾವುದೂ ಅವಕಾಶ ಕಲ್ಪಿಸುತ್ತದೆ. ಕ್ಷೀರಸಾಗರಶಾಯಿಯಾದ ವಿಷ್ಣುವಿನ ದುಃಸ್ಥಿತಿಯನ್ನೂ ಅಣಕಿಸಿದರೆ ನಗೆಪಾಟಲಾಗುತ್ತದೆಯಲ್ಲವೆ? ತುಂಬುರನ ಕುದುರೆಮೂತಿ ಸಂಗೀತ ಏನು ಇಂಪಿನದೊ! ಭಕ್ತರಿಗೆ ಗಣನೆಯಿಲ್ಲ. ಕಪಿಯನ್ನು ಸುಂದರ ಎಂದು ಕರೆದ ದೇಶ ಇದು! ನೀಲಕಂಠ ಚಂಪೂವನ್ನು ಓದಿದವರಿಗೆ, ನಮ್ಮ ಭಾಷಣಗಳನ್ನು ಓದಿದವರಿಗೆ ವಿಶ್ವಗುಣಾದರ್ಶದ ಪರಿಚಯವುಳ್ಳವರಿಗೆ, ಬೇರೆ ಬಗೆ ಗೊತ್ತಾಗುತ್ತವೆ.

* * *

ಮುಂದೆ ಅವರು 'ಕನ್ನಡದ ಬಾವುಟ' ಎಂಬ ಹೆಸರಿಟ್ಟು ಪರಿಷತ್ತಿನಿಂದ ಒಂದು ಕವಿತಾಸಂಕಲನ ಮಾಡಿದರು. 'ಬಾವುಟ' ಎಂಬ ಮಾತನ್ನು ಉಪಯೋಗಿಸಿದುದಕ್ಕೇ ನಾಲ್ಕು ಜನ ಪುತ್ತೂರಲ್ಲಿಯೂ ಮಂಜೇಶ್ವರದಲ್ಲಿಯೂ ನನ್ನ ಮೇಲೆ ತಿರುಗಿ ಬಿದ್ದು ದಾಳಿ ಮಾಡುವಂತೆ ಮಾತನಾಡಿದರು. ಬಾವುಟಕ್ಕೆ ಬದಲು ಬೇರೆ ಧ್ವಜ, ಪತಾಕೆ, ಕುಡಿ ಇತ್ಯಾದಿಯಾದರೂ ಮಾತುಗಳಿವೆ ಎಂದು 'ಶ್ರೀ'ಯವರಿಗೆ ಗೊತ್ತಿರಲಿಲ್ಲವೆ? ಱ ಅಕ್ಷರದ ೞ ಮಾತ್ರೆಯ, ಎಲ್ಲರಿಗೂ ಬಳಕೆಯಲ್ಲಿರುವ– ಆದಿ ದೀರ್ಘ ಎಳೆದು ಹೇಳಬೇಕು; ಆ ಸ್ವರಗಳಿಗೆ ಬೆಲೆ ಇದೆ– ಆ ಮಾತನ್ನು ಬಳಸಿದುದಕ್ಕೆ ಕಾರಣ ಕನ್ನಡದ ಧ್ವಜದ ಅಡಿಯಲ್ಲಿ ಎಂಥೆಂಥ ಮನಸ್ಸಿನ, ಧ್ಯೇಯ ಅಭಿಮಾನ ಮಾರ್ಗಗಳ ಕೃತಿ ಬಂದಿವೆ ಎಂಬುದನ್ನು ತೋರಿಸಲು. ಇಲ್ಲಿ ಎಲ್ಲ ಪ್ರಖ್ಯಾತ ಕವಿಗಳ ಕವಿತೆಯಿದೆಯೆಂದಾಗಲಿ, ಅವರವೂ ಶ್ರೇಷ್ಠವಾದುವನ್ನು ಮಾತ್ರ ಸೇರಿಸಿದೆಯೆಂದಾಗಲಿ ಅವರು ಹೇಳಿಲಿಲ್ಲ. ಎಂಥೆಂಥ ಬಗೆಯ ಶ್ರದ್ಧೆ, ನಡೆ, ಆಶೋತ್ತರ ಇಲ್ಲಿ ಕಾಣಿಕೆ ಸಲ್ಲಿಸಿವೆ ಎಂಬುದನ್ನು ಅಲ್ಲಿ ಕಾಣಿಸಿದರು. ಆ ಸಂದರ್ಭದಲ್ಲಿ ಅವರೊಡನೆ ನಾನು– ಕೆ. ವಿ. ರಾಘವಾಚಾರ್ಯರು– ಇದ್ದೆನಾದ್ದರಿಂದ ಇದನ್ನು ಹೇಳಿತ್ತಿದ್ದೇನೆ. ಹೊಸಕನ್ನಡವನ್ನು ಆರಿಸುವಾಗ ಆಗ್ಗೆ ಈ ದೃಷ್ಟಿಯನ್ನು ಸೂಚಿಸುವ ಪದ್ಯಗಳನ್ನು ಅವರು ಆಯ್ದರು. ನಾನೇ ಮಾಡಿ ಕೊಟ್ಟಿದ್ದ ಕವಿತೆಗಳಲ್ಲಿ ಕೆಲವನ್ನು ತೆಗೆದುಹಾಕಿ ಬೇರೆ ಕೆಲವನ್ನು ಸೇರಿಸಿದರು.

ಅವರದೇ ಆದ ಕವಿತೆಗಳು 'ಹೊಂಗನಸುಗಳು' ಎಂಬಲ್ಲಿ ಬೇರೆಯಾಗಿ ಅಚ್ಚಾಗಿವೆ. ಅದು ನಾಲ್ಕನೆಯ ಕೃಷ್ಣರಾಜ ಒಡೆಯರ ಕಾಲ. ಅವರು ಭರತಖಂಡದಲ್ಲೆಲ್ಲ ಶೀಲಕ್ಕೂ ಶುಚಿಗೂ ಉದಾರತೆಗೂ ವಿದ್ಯಾಸಂಸ್ಕಾರಗಳ ಪ್ರೀತಿಗೂ ಪ್ರಸಿದ್ಧರಾದವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಒಂದು ಸ್ಥಾನ, ಏಳಿಗೆ ದೊರೆಯಬೇಕೆಂದು ಮೊದಲ ಚಾನ್ಸೆಲರ್ ಭಾಷಣದಲ್ಲಿ ಹೇಳಿದವರು. ದೇಶೀಯ ಸಂಸ್ಥಾನಗಳನ್ನು ಕುರಿತು ಕಾಂಗ್ರೆಸ್ ಕೂಡ ಮನಸ್ಸಿಗೆ ಹಚ್ಚಿಕೊಳ್ಳದಿದ್ದ ಕಾಲ ಅದು. . . ಬರೆದು ಭಕ್ತಿ ತೋರಿದುದು ಅನ್ಯಾಯವಾಗಬಾರದೇನೊ. ಆದರೆ

ಚಿನ್ನದ ನಾಡದು,
ಮೈಸೂರು.

ಗಂಧದ ಗುಡಿಯದು
ಮೈಸೂರು.
ವೀಣೆಯ ಬೆಡಗದು
ಮೈಸೂರು.

ಇತ್ಯಾದಿಯಾಗಿ ಬರೆದ ಮಾತು ಎಷ್ಟು ಪ್ರೀತಿಯನ್ನೂ ಸ್ಫೂರ್ತಿಯನ್ನೂ ತಂದಿತೆಂಬುದನ್ನು ಜನಬಲ್ಲರು. Ode ಎಂಬುದಕ್ಕೆ ‘ಪ್ರಗಾಥ’, ಎಂಬ ಹೆಸರಿಟ್ಟರು. ’ಉದ್ಗೀತೆ’ ಇಡಬಹುದಿತ್ತು; ಆದರೆ ವೈದಿಕ ಛಂದಸ್ಸಿನಲ್ಲಿ ಅದರ ರೀತಿ ಬೇರೆ. ಇಲ್ಲಿ ಪಿಂಡಾರ್ ಮತ್ತೂ ಗ್ರೀಕ್ ನಾಟಕಕಾರರ ಸಮಯದಿಂದ ಹಿಡಿದು ಇವೊತ್ತಿನವರೆಗೂ ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಬೆಳೆದ Ode ನ ಒಂದು ಪ್ರಕಾರವನ್ನು ಉದಾಹರಿಸಲು ಅದನ್ನು ಬರೆದರು. ’ಕನ್ನಡ ತಾಯ್ ನೋಟ’ವನ್ನು ಕುರಿತು ಒಂದು ಮಾತು ಹೇಳುತ್ತೇನೆ. ಅವರ ಜೊತೆಯಲ್ಲಿ ಆಗ ನಾನು ೮–೧೦ ದಿನಗಳಿಂದ ಇದ್ದೆ. ಮೈಸೂರಿಂದ ಹೊರಟವರು ಕೊಡಗು, ಮಂಗಳೂರು, ಉಡುಪಿ, ಕಾರವಾರ, ಗೋಕರ್ಣ ಇವುಗಳನ್ನೆಲ್ಲ ಸುತ್ತಿಕೊಂಡು ಗದಗಿಗೆ ಬಂದು, ಗೆಳೆಯರಾದ ಮೋಹನರಾವ್ ಕರಿಕಟ್ಟಿ ಅವರ ಮನೆಯಲ್ಲಿದ್ದು,– ಅವರು ಆಗ ಅಲ್ಲಿನ ಸಹಕಾರ ಸಂಘಗಳ ಪ್ರದೇಶಾಧಿಕಾರಿಗಳಾಗಿದ್ದರು– ಅಲ್ಲಿಂದ ಹುಯಿಲಗೋಳ ನಾರಾಯಣರಾಯರು ಗೊತ್ತುಮಾಡಿ ತಂದಿದ್ದ ಒಂದು ಬಸ್ಸಲ್ಲಿ ಹಂಪೆಗೆ ಹೋದೆವು. ಅದು ವಿಜಯನಗರ ಸಾಮ್ರಾಜ್ಯದ ಷಟ್ ಶತಮಾನೋತ್ಸವ ನಡೆದ ಸಂದರ್ಭ. ಮೊದಲ ದಿನ ಅವ್ಯವಸ್ಥೆ; ಅಲ್ಲಿನ ಊಟ ಉಪಚಾರ ಹೃದಯವಿದ್ರಾವಕವಾಗಿತ್ತು. ನಮ್ಮ ಜನ ಮುಂಚಿತವಾಗಿ ಎಷ್ಟು ಜನ ಬರುತ್ತಾರೆಂದು ತಿಳಿಸುವುದಿಲ್ಲ; ವ್ಯವಸ್ಥಾಪಕರು ಸಾವಿರವೊ ಸಾವಿರದ ಐನೂರು ಮಂದಿಯೊ ಬಂದಾರೆಂದು ಸಿದ್ಧತೆ ಮಾಡಿಕೊಂಡಿದ್ದರು. ಸ್ಥಳದ ನಾಯಕರಿಗೂ ವ್ಯವಸ್ಥಾಪಕರಿಗೂ ಆದರದ ಸಂಬಂಧ ಕಾರಣಾಂತರದಿಂದ ಇರಲಿಲ್ಲ. ಇದ್ದಕ್ಕಿದ್ದಂತೆ ೪೦೦೦–೫೦೦೦ ಮಂದಿ ಬಂದಾಗ ವ್ಯವಸ್ಥೆ ಸ್ವಲ್ಪ ತೊಡಕಿನದಾಯಿತು. ನಮಗಾಗಿ ಒಂದು ಸಾಲುಮಂಟಪದಲ್ಲಿ ಎರಡು ತುಕಡಿಗಳನ್ನು ಬಿಟ್ಟುಕೊಟ್ಟಿದ್ದರು. ಸಮ್ಮೇಳನದ ಬೆಳಿಗ್ಗೆ ಕಂಚಿಯ ಮಠಾಧೀಶರಿಂದ ಆರಂಭ ಭಾಷಣವಾಯಿತು. ಶ್ರೀ ಡಿ. ಪಿ ಕರಮರ್‌ಕರ್ ಸ್ವಯಂಸೇವಕ ಮಂಡಲಿಯ ಚಾಲಕರು. ಇದ್ದಕ್ಕಿದ್ದ ಹಾಗೆ ಅಲ್ಲಿ ಈ ಉತ್ಸವಕ್ಕೆ ಬೇರೆ ಮತದವರೊ ಆಂಧ್ರರೊ ಉಪಟಳ ಉಂಟುಮಾಡಿಯಾರು ಕನ್ನಡಿಗರು, ಹೋರಾಡಬೇಕಾಗಿ ಬಂದರೆ ವೀರರಂತೆ ನಿಲ್ಲಬೆಕು ಎಂಬ ಉದ್ರೇಕದ ಭಾಷಣಗಳಾಗಿದ್ದುವು. ಯಾವುದೊ ಕಂಕಾಳದ ಒಂದು ಭಾಗವನ್ನು ಎತ್ತಿಕೊಂಡು ಕನ್ನಡದ ಅಜ್ಞಾತ ವೀರನ ಕಂಕಾಳದ ಭಾಗ ಎಂದು ಮೆರವಣಿಗೆಯಾಯಿತು! ತುಂಗಭದ್ರೆಯಲ್ಲಿ ಅದನ್ನು ಸೇರಿಸಿದರು; ಅಲ್ಲಿ ಆಗ ನೆರೆಯಿತ್ತು. ಮೆರವಣಿಗೆ ಹಿಂದಿರುಗುವ ಹೊತ್ತಿಗೆ ಸುಮಾರು ಹನ್ನೆರಡು ಗಂಟೆ. ಹಿಂದಕ್ಕೆ ಬರುವ ಮುಂಚೆ ಅಲ್ಲೆಲ್ಲ ಸಿಕ್ಕಿಕೊಂಡಿದ್ದೆವು. ಇಲ್ಲಿ ಒಂದೆರಡು ಹಾಳೆ ಬಿಳಿಕಾಗದ ಎಲ್ಲಿಯಾದರೂ ಸಿಕ್ಕುತ್ತದೆಯೆ ನೋಡಿ ಎಂದರು ’ಶ್ರೀ’ ಯವರು. ನಾನು ಉತ್ಸವ ಸಮಿತಿ ಕಚೇರಿಯ ಗೆಳೆಯರಲ್ಲಿಗೆ ಹೋಗಿ ಎರಡು ಪೂರ್ತಿ Foolscap ಹಾಳೆಗಳನ್ನು ಬೇಡಿ ತಂದೆ. ಊಟಕ್ಕೆ ಎಲೆ ಹಾಕಿ ಬಡಿಸುವುದಕ್ಕೆ ಸುಮಾರು ಅರ್ಧ ಗಂಟೆ ಅವಕಾಶ ಇತ್ತು ಎನ್ನಿಸಿತು. ಸುರುಳಿಸುತ್ತಿ ಕಂಬಕ್ಕೊರಗಿ ಎತ್ತರಕ್ಕೆ ನಿಲ್ಲಿಸಿದ್ದ ಒಂದು ಹಾಸಿಗೆಗೆ ಒರಗಿ ’ಶ್ರೀ’ ಯವರು ಆ ಕವಿತೆಯ ಅರ್ಧಭಾಗಕ್ಕಿಂತ ಹೆಚ್ಚಾಗಿ ಉದ್ದಕ್ಕೆ ಬರೆದರು. ಒಂದಕ್ಷರ ಹೊಡೆದಿರಲಿಲ್ಲ. ಅವರ ಮನಸ್ಸಿನಲ್ಲಿ ಈ ಪಂಕ್ತಿಗಳೆಲ್ಲ ಯಾವಾಗ ರೂಪಗೊಂಡಿದ್ದವೊ ಹೇಳಲಾರೆ. ಆ ದಿನ ಶಕ್ಯವಾದರೆ ತಮ್ಮ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ ಆ ಒಟ್ಟು ಪದ್ಯವನ್ನು ಓದಬೇಕೆಂಬುದು ಅವರ ಮನಸ್ಸು, ೧೯೩೬ರಲ್ಲಿ ಕನ್ನಡತಾಯಿ ಆಗ ಹಾಗೆ ಕಂಡದ್ದರಿಂದ. ಆ ಭಾಗ ಈಗ ಕಾಲಹತವಾಗಿದೆ. ಅದು ಪೂರ್ತಿಯಾಗದ್ದರಿಂದ ಅದನ್ನು ಓದದೆ ತಾಯಿ ರಥವನ್ನೇರಿದಳು ಎಂಬ ಭಾಗದವರೆಗೆ ಮಾತ್ರ ಓದಿ ಭಾಷಣ ಮುಗಿಸಿದರು. ಆ ಪಕ್ಕದ ನಡೆಯನ್ನು ನೋಡಬೇಕು.

ಅವರು ಬರೆಯಲೇಬೇಕೆಂಬುದನ್ನು ಒಟ್ಟಿಗೆ ಮನಸ್ಸಿನಲ್ಲಿ ಹಾಗೆ ಮೊದಲು ರಚಿಸಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಅನೇಕ ವೇಳೆ ’ಆಂಟೊನಿ ಮತ್ತು ಕ್ಲಿಯೊಪೇಟ್ರ’, ’ಕೊರಿಯೊಲೇನಸ್’, ’ಜೂಲಿಯಸ್ ಸೀಸರ್’, ’ಮಿಡ್ ಸಮ್ಮರ್ ನೈಟ್ಸ್ ಡ್ರೀಮ್’, ’ಹ್ಯಾಮ್ಲೆಟ್’ ಮುಂತಾದವುಗಳಿಂದ ನಿಡಿಯಾದ ಭಾಗಗಳನ್ನು ಹೀಗೆ ಹೇಳಬಹುದಲ್ಲವೆ ಎಂದು, ೫೦–೧೦೦ ಸಾಲುಗಳನ್ನು ನಮಗೆ ಎಷ್ಟೋ ಸಲ ಹೇಳಿದ್ದಾರೆ.[21]

ದಾರಿಯಲ್ಲಿ ಪ್ರಯಾಣ ಮಾಡುವಾಗ. ಹಾಗೆಯೇ ’ಗದಾಯುದ್ಧ ನಾಟಕ’ವನ್ನು ಬರೆದುಕೊಡುವಾಗ ಅವರು ಕೃಷ್ಣಶಾಸ್ತ್ರಿಗಳಿಗೆ ಕೊಟ್ಟದ್ದು ೨–೩ ಪುಟಗಳ ಗುರುತು ನಿರ್ದೇಶನ ಭಾಗ: ಇಂಥ ಆಶ್ವಾಸ, ಇಂಥ ಪದ್ಯ; ಇನ್ನೊಂದು ಆಶ್ವಾಸ, ಇಂಥ ಪದ್ಯ; ಆಮೇಲೆ ಹೀಗೆ ಹಾಕಿ; ನಡುವೆ ಯಾವುದಾದರೂ ಗದ್ಯದ ಕೊಂಡಿಯನ್ನು ಸೇರಿಸಬೇಕಾದರೆ ಅಷ್ಟನ್ನು ಮಾತ್ರ ಬರೆದುಕೊಟ್ಟರು. ಅದನ್ನು ಕೃಷ್ಣಶಾಸ್ತ್ರಿಗಳು ಗ್ರಂಥದಿಂದ ಬರೆದುಕೊಂಡು, ಅಚ್ಚಿಗೆ ಕೊಟ್ಟರು. ಕಡೆಯಲ್ಲಿ ’ಹರಿ ಹರಿ–" ಇತ್ಯಾದಿ ಹೇಳಿ, "ದೈವದ ಮುಂದೆ ನಾಮಲ್ತು" ಎಂಬ ಮಾತನ್ನು ದುರ್ಯೋಧನನ ಬಾಯಿಂದ ಆಡಿಸುತ್ತಾರೆ. ಆ ಮಾತನ್ನು ಅವರು ಆತನಿಗೆ ಬಂದ ತಿಳಿವಿನ ಸಂಕೇತವಾಗಿ ಹಾಕಿರಬೇಕು. ಇಲ್ಲವಾದರೆ" ಹರಿ ಹರಿ" ಹಾಕುತ್ತಿರಲಿಲ್ಲ. ರುದ್ರನಾಟಕದಲ್ಲಿ ಒಂದು ಬಗೆಯ ಧೌತನ, ಧರ್ಮಕ್ಕೆ ಸಂಬಂಧಪಟ್ಟ ತಿಳಿವಳಿಕೆ, ಶುಚಿಕರಣ Catharsis ಈಗ, Purging ಬೇಡ. ಮನುಷ್ಯನ ಶಕ್ತಿ ಎಷ್ಟೆಂದು ಅವನೆಣಿಸಿದರೂ ದೈವ ಸೊಕ್ಕನ್ನು ಮುರಿಯುತ್ತದೆ ಎಂಬ ಭಾಗ ಅತಿಶಯದ್ದಾಗುತ್ತದೆ. ಆ ಭಾವವನ್ನು ’ಅಶ್ವತ್ಥಾಮನ್’ ಅಲ್ಲಿಯೂ ’ಪಾರಸಿಕ’ರಲ್ಲಿಯೂ ಹೆಚ್ಚು ವಿಶದಪಡಿಸಿದ್ದಾರೆ. ’ಅಶ್ವತ್ಥಾಮನ್’ ಅನ್ನು ಕುರಿತು ನಾನು ಬೇರೆಯಾಗಿ ಒಂದು ವಿವೇಚನೆಯನ್ನು ಮಾಡಿರುವುದರಿಂದ ಅದರ ಗೊಡವೆಗೆ ಇಲ್ಲಿ ಹೋಗುವುದಿಲ್ಲ. ’ಪಾರಸಿಕರಿ’ಗೆ ಎಷ್ಟು ಗೌರವ ಬರಬಹುದಿತ್ತೊ ಅದು ಬರಲಿಲ್ಲ. ಸಲಾಮಿಸ್ ಅಲ್ಲಿ ಸೋತ ಪರ್ಷಿಯದವರ ಕಡೆಯಿಂದ ಬೆಳೆದ ಕಥಾಭಾಗ ಅದು. ಆ ಸೋಲಿನ ಗೋಳು, ನಿರಾಸೆ, ನಷ್ಟದ ಪ್ರಕಾಂಡತೆ, ದರಿಯೌಷನ ಕಾಲದಲ್ಲಿ ಹೇಗಿದ್ದ ರಾಜ್ಯ ತನ್ನ ಶಕ್ತಿಗೆ ಸೊಕ್ಕಿದ ಮಗ ಕ್ಷಯಾರ್ಷ(Xerxes)ನ ಕಾಲದಲ್ಲಿ ಹೇಗೆ ಪೂರ್ತಿ ಮುರಿದು ಬಿದ್ದಿತು.

ಏಕೆ?– ಎಂಬುದನ್ನು ತಂದೆ ದರಿಯೌಷನ (Darius)ಭೂತದ ಮೂಲಕವಾಗಿಯೇ ಹೇಳಿಸಿ, ನಾಟಕವನ್ನು ನಡಸುತ್ತಾರೆ. ಈಸ್ಕಿಲಸಿಗೆ ಮುಂಚೆ 'ಪಾರ್ಸ್' ನಾಟಕವನ್ನು ಬರೆದವರಿದ್ದರು. ಆದರೂ ಅವನ ನಾಟಕಕ್ಕೆ ಗುಣಬಲದಿಂದ, ರಚನೆಯಿಂದ ಕೀರ್ತಿಸ್ಥಾನ ಬಂದಿತು. ಪಾರಸಿಕರನ್ನು ಗೆದ್ದ ಸೊಕ್ಕು ಸಲಾಮಿಸಲ್ಲಿ ಗ್ರೀಕರಿಗೆ ತಕ್ಕದ್ದೇ ಆದರೂ, ಹಿಗ್ಗಬೇಡಿ, ಸೊಕ್ಕಬೇಡಿ ಎಂದು ತನ್ನವರಿಗೂ ತಿಳಿಯಲಿ– ಎಂಬ ಉದ್ದೇಶದಿಂದ ಬರೆದ ನಾಟಕ ಅದು. ನಾಟಕಕಾರನು ಸಲಾಮಿಸ್ ಯುದ್ಧದಲ್ಲಿ ಭಾಗವಹಿಸಿದ್ದವನು. ಅಲ್ಲಿನ ಕವಿತೆಯಲ್ಲಿನ ಧಾರಾಳ, ಸರಳತೆ ಅರಿಯಬೇಕಾದ್ದು. 'ಅಶ್ವತ್ಥಾಮನ್' ಅಲ್ಲಿ ಇರುವ ಘಟನೆಗಳ ಸಂಪತ್ತಿ, ಕಥೆಯ ಓಟ, ತುಂಬು ಇಲ್ಲಿ ಇಲ್ಲದಿರುವುದೂ ಗೋಳೇ, ಸೋಲೇ. ಆ, ಓ, ಅಯೊ ಮುಂತಾದವುಗಳ ಪುನರುಕ್ತಿಯೂ ಅದನ್ನು ಅಣಕಿಸುವಂತೆ ಮಾಡಿತು. ಶ್ರೀ ವಿ. ಕೆ. ಶ್ರೀನಿವಾಸನ್ ಒಂದು ಅಣಕುನಾಟಕವನ್ನು ಬರೆದು, ಕ್ರಿಕೆಟಲ್ಲಿ ಸೋತು ಬಂದ ಮಹಾರಾಜಾ ಕಾಲೆಜಿನ ಒಂದು ಅತಂಡವನ್ನು ವಿಷಯವನ್ನಾಗಿ ಮಾಡಿಕೊಂಡು ಪರಿಹಾಸ್ಯ ರೂಪಕ ಆಡಿಸಿದ್ದುಂಟು. 'ಅಶ್ವತ್ಥಾಮನ್' ಅಲ್ಲಿ ನಾಯಕನ ಸ್ವಹತ್ಯೆಯೊಡನೆ ನಾಟಕ ಮುಗಿಯದಿದ್ದಿದ್ದರೆ ಚೆನ್ನಾಗಿತ್ತು ಎಂಬ ಒಂದು ವಾದವಿದೆ

– – –-

21 ಷೇಕ್ಸ್ಪಿಯರ್ ಮಾತು ಬಂದಾಗ ಮತ್ತು ಇತರ ವಿಮರ್ಶಕರ ಅಭಿಪ್ರಾಯವನ್ನು ಒಂದು. ವಿರುದ್ಧ ಅಭಿಪ್ರಾಯವೆಂಬಂತೆ ಹೇಳಿದಾಗ ಯಾರಾದರೂ ಕೇಳಿದರೆ ಅವರ ಮನಸ್ಸು ಹೀಗಿರುತ್ತಿತ್ತು; "ವೇರಿಯೋರಂ ಎಡಿಷನ್ ಅಫ್ ಷೇಕ್ಸ್ ಪಿಯರಿನಲ್ಲಿರುವ ವಿಮರ್ಶಕರ ಪಾಠವಿಮರ್ಶೆಯನ್ನೂ–

ಅಭಿಪ್ರಾಯಗಳನ್ನೂ ಇಂಗ್ಲಿಷಲ್ಲಿ ದೊರೆವಮಟ್ಟಿಗೂ ನೋಡಿದ್ದೇನೆ. ಈಚೆಗೆ ಬಂದಿರುವವರ ವಿಮರ್ಶೆಯನ್ನೂ ಓದುತ್ತಿದ್ದೇನೆ. ನನ್ನ ಗುರುಗಳಾದ ಟೇಟ್ ಸಾಹೇಬರು 'ಎಲ್ಲವನ್ನೂ ಓದಿ; ಆಮೇಲೆ ನಿಮ್ಮ ಅಭಿಪ್ರಾಯವೇನು ಎಂಬುದನ್ನು ಗಟ್ಟಿಮಾಡಿಕೊಳ್ಳಿ'– ಎನ್ನುತ್ತಿದ್ದಂತೆ ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ" ಎಂದುದು ನಾನು ಕೇಳಿದ ಮಾತು. And came to the wrong conclusion ಎಂದುದು, ಅವರಿಗಿಂತ ಕಡಮೆ ಅರಿತವರ ಕುಚೋದ್ಯ. ಇವೊತ್ತು ವೇರಿಯೋರಂ ಎಡಿಷನ್ ಎಲ್ಲೆಲ್ಲಿ ಸಿಕ್ಕುತ್ತದೆಯೋ ಯಾರು ಓದುತ್ತಾರೆಯೊ ಕಾಣೆ. *ಹಾಗೆಯೇ Prefaces to Shakespeare* ಎಂಬ ಗ್ರಾನ್‌ವಿಲ್ ಬಾರ್ಕರ್ ಅವರು ಸಂಪಾದಿಸಿ ಪ್ರಚಾರಕ್ಕೆ ತಂದ, ಅವರ ಕಾಲಕ್ಕೆ ಬಂದ ಇತರ ಹೊಸ ದೃಷ್ಟಿಯ ಗ್ರಂಥಗಳನ್ನು ಅವರು ತುಂಬ ಪ್ರೀತಿಯಿಂದ ಓದುತ್ತಿದ್ದರು, ಒಮ್ಮೆ ಯಾರೊ ಬ್ರಾಡ್ಲೆ ಅವರಿಗೆ ಆಡಿದ ನಾಟಕಗಳ ಅನುಭವ ಹೆಚ್ಚಿಲ್ಲ ಎಂದು ಬರೆದವರಿಗೆ, ಮಾತನಾಡುವವರಿಗೆ ಅವರು *Oxford Lectures on Poetry* ಯಲ್ಲಿ ಬರೆದ ಕಡೆಯ ಪ್ರಕರಣದ Shakespeare's Theatre and Audience ಪರಿಚಯ ಇತ್ತೊ ಇಲ್ಲವೊ ಎಂದುದುಂಟು. ಆ ಬಗೆಯದು 'ಶ್ರೀ' ಯವರ ವಿದ್ಯಾವಿಚಕ್ಷಣೆ.

ಕೇವಲ ನಾಟಕದ ಅಖಂಡತೆಯ ದೃಷ್ಟಿಯಿಂದ (Integrity) ನೋಡಿದರೆ ಇದು ಇವೊತ್ತಿನ ದೃಷ್ಟಿಯಿಂದ ಸಾಕೇನೊ. ಆದರೆ ಅಶ್ವತ್ಥಾಮನ ಮೂಲ Aias ಅಥೆನ್ಸ್ ಅಲ್ಲಿ ಪೂಜ್ಯ; ಅವನ ಹೆಸರಲ್ಲಿ ಉತ್ಸವ ಬಹುಕಾಲ ಆಮೇಲೂ ನಡೆಯುತ್ತದೆ. ಆ ಪೂಜೆಗೆ ತಕ್ಕಂಥ ವ್ಯಕ್ತಿಯನ್ನಾಗಿ ಮಾಡಿದ ಸಂದರ್ಭವಾವುದು ಎಂಬುದನ್ನು ಎರಡನೆಯ ನಾಯಕನಂತೆ– ಡ್ಯೂಟಿರಾಗೊನಿಸ್ (ಟ್ಯೂಕರ್ ಅಯಾಸನ ಮಲತಮ್ಮ)– ಏಕಲವ್ಯನನ್ನಾಗಿ ಕಲ್ಪಿಸಿ, ಅವನಿಗೂ ಮೆನೆಲಾಸ್– ಅಗಮೆಮ್ಯಾನ್ ಇಬ್ಬರ ಸಮ್ಮಿಳಿತ ಪ್ರತಿನಿಧಿಯಂತೆ ಭೀಮನನ್ನು ಮಾಡಿ, "ಸತ್ತರ್ಗೆ ಪಾದಪೂಜೆಯನೆಸೆವ ನಯಗಾಜಿನ್, ಬರ್ಕೆ, ಬರ್ಕೆ" ಎಂದು ಏಕಲವ್ಯ ಆಡಿಕೊಂಡು ಬರುವಾಗ, ಸತ್ತ ಅಶ್ವತ್ಥಾಮನಿಗೆ ಆ ಮುಯ್ಯಿಗೆ ಉತ್ತರ ಕ್ರಿಯೆಗಳನ್ನು ಸಲ್ಲಿಸದಂತೆ "ನಾಯ್ಗಳ್ಗೆ ನರಿಗಳ್ಗೆ, ಪರ್ದುಗಳ್ಗೆ ಬಿರ್ದಿಕ್ಕಿ ಬಿಸುಡಿಪೆನ್" ಎಂದು ಬರುವ ಭೀಮನನ್ನು ಎದುರಿಸಿ ನಿಲ್ಲುವಂತೆ ಮಾಡಿದ್ದಾರೆ. ಹಾಗೆ ಎದುರಿಸಿ ನಿಲ್ಲುವ ವೀರ ಒಬ್ಬ ಇರುವವರೆಗೂ ಪ್ರಧಾನವೀರನಿಗೆ ಪಕ್ಷಚ್ಯುತಿಯಿಲ್ಲ. ದುರ್ಯೋಧನನು ಅಶ್ವತ್ಥಾಮನಿಗೆ ಅವಕಾಶ ಕೊಟ್ಟು ಪಾಂಡವರನ್ನು ಕೊಂದುತಂದರೆ ಸಂತೋಷಪಡಲಾರೆನೇ ಎನ್ನಿಸುವ ಪ್ರಸಂಗವನ್ನೂ "ನಾನಿರುವವರೆಗೂ ದುರ್ಯೋಧನನಲ್ಲಿ ಚಾಮರಮಿಕ್ಕುತ್ತಿರು" ಎಂದು ಅಶ್ವತ್ಥಾಮನು ಹೇಳಿ ಹೋದ ಪ್ರಸಂಗವನ್ನೂ (ಪಂಪರನ್ನರಲ್ಲಿಯೂ ನೋಡಿ) ನೆನಸಿಕೊಳ್ಳಬಹುದು. ಈ ರುದ್ರನಾಟಕದಲ್ಲಿ ಕೃಷ್ಣನ ಪಾತ್ರ ಮೊದಲಿಂದ ಅಭಿನಂದನೀಯ. ಅವನಲ್ಲಿ ಹಗೆತನ ಕಲ್ಪಿಸಿಕೊಂಡಿದ್ದು ಸಂಶಯಗೊಂಡಿದ್ದವರೂ ಅವನನ್ನು ನೋಡಿ " ನಾಮಿಂದು ಸತ್ಯಮನ್ ಕಂಡೊಮ್", "ಧರ್ಮ ದೇವತೆಯೆ ನೀನ್!" ಎನ್ನುತ್ತಾರೆ. ಏಕಲವ್ಯನ ಪಕ್ಷದವರು ಮೇಳ ಗೀತದಲ್ಲಿ

ಓ ಕೃಷ್ಣ, ಓ ಕೃಷ್ಣ, ಒಳ್ಪೊಟ್ಟಿನೊಳ್ ಬಂದೆ.
ಶಾಂತಿಯನ್ ಕಲಿಸು ಬಾ, ನಿಲಿಸು ಬಾ, ತಂದೆ.
ಭಾರತದೆ ಶಾಂತಿಯನ್ ನಿಲಿಸು ಬಾ, ಮುಂದೆ!

ಎನ್ನುವ ಮಾತೂ ಸಾರ್ಥಕಗೊಳ್ಳುತ್ತದೆ. ಗ್ರೀಸಲ್ಲಿ 'ಟ್ರ್ಯಾಜೆಡಿ' ಎಂಬುದು ಕೇವಲ ವಿಷಾದಾಂತಕವೇ ಅಲ್ಲ; ಒಂದು ಪೂಜಾಕಾರ್ಯ. ಅಮಂಗಳದಿಂದ ಅದನ್ನು ಮುಗಿಸುತ್ತಿರಲಿಲ್ಲ. ಈ ಸಂಗತಿಯನ್ನು ಮರೆಯದೆ ಆ ನಾಟಕವನ್ನು ಓದಬೇಕು. ಭೀಮನು 'ಅಶ್ವತ್ಥಾಮಹತ'– ಎಂದಿದ್ದುದನ್ನು ಜಯಾಸಕ್ತನಾದ ಯುಧಿಷ್ಠಿರನು "ಹತಃ ಕುಂಜರಃ" ಎಂದು "ಅವ್ಯಕ್ತಂ ಅಬ್ರವೀತ್"– ಎಂದಿದೆ. "ಹತಃ ಕುಂಜರಃ" ಎಂದು ಹೇಳಿದಾಗ 'ಕುಂಜರ' ಎಂಬುದು ತಂದೆಯ ಕಿವಿಗೆ ಬೀಳದಂತೆ ವಾದ್ಯಗಳು ಮೊಳಗಿರಲು ತನ್ನ ಮಗನೇ ಸತ್ತನೆಂದು ದ್ರೋಣ ನಿರ್ಧರಿಸಿದಾಗ ತನ್ನ ಮಗ ಚಿರಂಜೀವಿ ಎಂದು ದ್ರೋಣನಿಗೆ ಗೊತ್ತಿರಲಿಲ್ಲವೆ? ಯಾವಾಗ ಬಂತು ಅವನಿಗೆ ಆ ಪಟ್ಟ? ಯಾರು ಕೊಟ್ಟದ್ದು? ಏತಕ್ಕೆ? ಅಥವಾ ಸೌಪ್ತಿಕಪರ್ವದ ಅಂತ್ಯದಲ್ಲಿ ಅವನ ಮೊಂಡುತನಕ್ಕೆ, ಅಸಂಯಮಕ್ಕೆ, ದುರಾಗ್ರಹಕ್ಕೆ ಕುಪಿತನಾಗಿ ಕೃಷ್ಣನು ಅವನಿಗೆ ಮೂರು ಸಾವಿರ ವರ್ಷಗಳ ಶಾಪವನ್ನು ಕೊಟ್ಟ ಪ್ರಸಂಗ ಇರುವುದನ್ನು ನಾನು 'ಆಗ್ರಹ' ದಲ್ಲಿ ಬರೆದಿದ್ದೇನೆ. ಅದನ್ನೇ ಚಿರಂಜೀವಿತ್ವವೆಂದು ಮೆರಸಬೇಕೆ? ಮಾನ, ಅಭಿಮಾನ ಲೋಕದಲ್ಲಿ ದೊಡ್ಡವು. ಮಾನಕ್ಕೆ ಬದುಕಬೇಕು

ಎಂಬುದು ತಪ್ಪಾಗಬಾರದು. ಮಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ನಾಟಕದ ಅಶ್ವತ್ಥಾಮನ್ ತೀರಿಕೊಂಡನೇಂದು ಭಾವಿಸಬೇಕು.[22] "ತಕ್ಕನ್ ತಕ್ಕವೊಲ್ ಬಾಟ್ಟಿಪನ್, ತಕ್ಕವೊಲ್ ಸತ್ತಪನ್".

----

22 ನಮ್ಮಲ್ಲಿ ಸಹಗಮನ, ಗರುಡರ ಪತಿಸೇವೆ, ಪ್ರಾಯೋಪವೇಶ, ಭೃಗುಪಾತ, ಸಲ್ಲೇಖನ, ಜೋಹರ್, ಗುರುನಿಂದೆಗಾಗಿ ಹೊಟ್ಟಿನಲ್ಲಿ ಹೂತು ಸುಟ್ಟುಕೊಳ್ಳುವುದು ನಡೆದುವೇ ಅಲ್ಲವೆ?)

'ಟ್ರಾಜೆಡಿ'ಯ ಒಂದು ಪ್ರಕಾರವನ್ನು ಕನ್ನಡಕ್ಕೆ ತರಬೇಕೆಂದು ಉದ್ದೇಶಪಟ್ಟ ಅವರು ಯೂರಿಪಿದೇಸನ 'ಬಾಕೆ'(Bacchae) ಎಂಬ ಡಯೊನಿಸಿಯಸ್ ಅಥವಾ ಬಾಕುಸ್ ಪಾತ್ರವನ್ನು ಕೃಷ್ಣನನ್ನಾಗಿ ಮಾಡಿಕೊಂಡು ಅದನ್ನು ರೂಪಾಂತರಿಸಿ ಬರೆಯೋಣವೆಂದಿದ್ದರಂತೆ. ಆದರೆ ಕೃಷ್ಣನು ದೇವರು, ಪೂರ್ಣಾವತಾರ ಎಂದು ನಂಬಿರುವ ಜನಕ್ಕೆ ಉದ್ರೇಕವುಂಟಾಗುತ್ತದೆಂದು ಬಿಟ್ಟರು. ಈ ಸಂಗತಿಗಳನ್ನು ಇಲ್ಲಿ ಹೇಳಬೇಕಾಗಿ ಬಂದುದು ಅನೇಕರಿಗೆ ನಡೆದ ಕೆಲವು ಸಂದರ್ಭಗಳು ವೇದ್ಯವಾಗದಿರುವುದರಿಂದ. ಪಂಪರಾಮಾಯಣದಲ್ಲಿ ಜೈನ ಸಂಪ್ರದಾಯಕ್ಕೆ ತಕ್ಕಂತೆ ರಾವಣನ ಪಾತ್ರವನ್ನು ನಿರ್ದೇಶ ಮಾಡಿದೆ. ವಾಲ್ಮೀಕಿಯಲ್ಲಿ ಅವನ ಸುಗುಣಸಂಪತ್ತಿ ಕಾಣದಿದ್ದರೂ ನಮ್ಮಲ್ಲಿರುವ ಎರಡು ಜೈನ ಸಾಹಿತ್ಯ ಸಂಪ್ರದಾಯಗಳಲ್ಲಿಯೂ ರಾವಣನಲ್ಲಿ ಅನೇಕ ಹಿರಿಯ ಗುಣಗಳಿದ್ದುವು. ಸೀತೆಗೆ ಸೋತ ಭಾಗ ಅವನನ್ನು ನಾಶಮಾಡಿತು. 'ಪರಾಂಗನಾವಿರತಿ' ಎಂಬ ವ್ರತವನ್ನು ಕೈಗೊಂಡಿದ್ದರೂ ಸೀತೆಯ ಚೆಲುವಿಗೆ ಸೋತು ಬೀಳುತ್ತಾನೆ. ಕಡೆಯವರೆಗೂ ಅವನಲ್ಲಿದ್ದ ಒಳತೋಟಿಯನ್ನು ವರ್ಣಿಸಬಹುದಾದಷ್ಟು ವಿಶೇಷದಲ್ಲಿ ಕಡೆಗೆ ತನ್ನಲ್ಲಿ ಹುಟ್ಟಿದ ಧರ್ಮದ ಔದಾರ್ಯಗಳಿಗೆ ಪರಿಣಾಮಗೊಂಡು ಅವನು ಸುಲಭವಾಗಿ Tragic Hero ಆಗಬಹುದು ಎಂದು 'ಶ್ರೀ' ಯವರು ಇಂಗ್ಲಿಷ್‌ಲ್ಲಿ ಒಂದು ಲೇಖನ ಬರೆದರು. ಮಹಾರಾಜ ಕಾಲೇಜ್ ಮ್ಯಾಗಜಿನಲ್ಲೊ ಯೂನಿವರ್‌ಸಿಟಿ ಪತ್ರಿಕೆಯಲ್ಲಿಯೊ ಅದು ಪ್ರಕಟವಾಯಿತು. ಗ್ರೀಸಲ್ಲಿಯೇ Tragedy ಪ್ರವರ್ಧಮಾನಕ್ಕೆ ಬರುವ ಮುಂಚೆ ಇಲ್ಲಿನ ಮಹಾನ್‌ಗಳೆಲ್ಲ ಅವರ Epics ಮತ್ತು ಪುರಾಣಗಳಲ್ಲಿಯ ಪಾತ್ರಗಳನ್ನು ಆರಿಸಿಕೊಂಡು ತಮಗೆ ಬೇಕಾದ ಮಾರ್ಪಾಡುಮಾಡಿಕೊಂಡರು. ಇಲ್ಲಿಯೂ ಅಂಥ ಅವಕಾಶವಿದೆ. Tragedy ಎಂಬ ಪ್ರಕಾರ ನಮ್ಮಲ್ಲಿ ಬಳಕೆಗೆ ಬಂದಿಲ್ಲ. ಆ ಪ್ರಕಾರದಲ್ಲಿನ ಗುಣಗಳನ್ನು ನಮ್ಮವರಿಗೆ ಕಾಣಿಸಬಹುದು. ಒಪ್ಪುವುದು, ಬಿಡುವುದು ಜನಕ್ಕೆ ಕಾಲಕ್ಕೆ ಸೇರಿದ್ದು. ಕೇವಲ ಧರ್ಮ ಅಥವಾ ನೀತಿಬೋಧನೆಗೆ ತೊಡಗಿ ಮಾತ್ರ ದುಷ್ಟಶಿಕ್ಷೆಯಾಗಬೇಕು ಎನ್ನುವುದಕ್ಕಿಂತ ಎಂಥವನಿಗೆ ಯಾವ ಗತಿ ಬಂದಿತು. ಎಂತಹ Waste ಆಯಿತು. ಎಂದು ಧರ್ಮ, ವಿಧಿ, ದೈವ ಇವುಗಳ ವಿಚಾರದಲ್ಲಿ ನಮ್ಮವರು ಹೇಳುವ ಭಯಭರಿತ ಭಕ್ತಿಭಾವ ಉಂಟಾಗುವಂತೆ– ಕಡೆಯದು ಧರ್ಮದ ನುಡಿ ಎಂಬಂತೆ ನುಡಿಯಬೇಕಾದರೂ– ಮಾನವ ಜೀವನ ದೃಷ್ಟಿಯಿಂದ 'ಅಯ್ಯೊ ಪಾಪ, ಹೀಗಾಯಿತಲ್ಲ! ಆಗದಿದ್ದರೆ ಚೆನ್ನಾಗಿತ್ತು' ಎನ್ನುವಂತೆ, Pity and Terror,-Terror ಕೂಡ ಅಲ್ಲ. Awe- ಎಂಬ ಭಾವ ಉಂಟಾಗುವಂತೆ, ಮಾಡಬಹುದು ಎಂಬುದು ಅಲ್ಲಿಯೂ ಉದ್ದೇಶ, ಗ್ರೀಕ್ ನಾಟಕಗಳಲ್ಲಿಯೂ ಅವರಿಗೆ **ಹ್ಯೂಬ್ರಿಸ್–** ಅಹಂಕಾರ, ಮದ–ಪರಮಪಾಪವೆನಿಸಿಕೊಂಡಿತು. ಇದಕ್ಕಿಂತ ಹೆಚ್ಚಾಗಿ **ಹಮಾರ್ಷಿಯಾ.**[23] ಆ ದೃಷ್ಟಿಯಿಂದ ಆ ಲೇಖನವನ್ನು 'ಶ್ರೀ' ಯವರು ಬರೆದರು. ಅಂಥವೇ ಪಾತ್ರಗಳು ಇನ್ನೂ ಕೆಲವಿದೆ ಎಂದು ಕರ್ಣನನ್ನು ಉದಾಹರಿಸಿದರು. ದುರ್ಯೋಧನನು ಹುಟ್ಟಿದಾಗಿನಿಂದ ಕಡೆಯವರೆಗೂ ಛಲ, ಕ್ರೋಧ, ಅಸೂಯೆ– ಅದೂ ಅಹಂಕಾರದ ಔದಾರ್ಯ ಎನ್ನುವರುಂಟು– ಸಾಧಿಸಿ, ಕಡೆಯ ಸನ್ನಿವೇಶಗಳಲ್ಲಿ ಅವನ ದೊಡ್ಡತನ ಹೇಗೆ ಅವನನ್ನು ಒಂದು ಹಿರಿಮೆಯ ಸ್ಥಾನಕ್ಕೆ ತಂದಿತು ಎಂಬುದನ್ನು ಅವರ 'ಗದಾಯುದ್ಧ ನಾಟಕ' ದಲ್ಲಿ ಕಾಣಬಹುದು. [24]

ಇನ್ನೊಂದು ಸಂಗತಿ: ಗದಾಯುದ್ಧವನ್ನು ಮೊದಲು ಪ್ರಕಟಿಸಿದ ಎಂ.ಎ. ರಾಮಾನುಜೈಯಂಗಾರ್ ಮುಂತಾದವರೇ ನಾಟಕಕ್ಕೆ ತಕ್ಕ ಸನ್ನಿವೇಶ ಈ ಕಾವ್ಯದಲ್ಲಿದೆ ಎಂದು ಬರೆದಿದ್ದರು. ಆ ಲಕ್ಷಣ 'ಶ್ರೀ' ಯವರ ಮನಸ್ಸಿನಲ್ಲಿಯೂ ಮೊದಲಿಂದ ಇದ್ದಿರಬೇಕು. ಆ ಕಾವ್ಯ ಆರಂಭವಾಗುವಾಗ ಚಲದ ಸ್ವಭಾವದವನಾದ ದುರ್ಯೋಧನನ ಸ್ಥಿತಿ ಹೇಗಿತ್ತೆಂದೂ ಎಷ್ಟು ಕರುಣಾಜನಕವಾಗಿತ್ತೆಂದೂ ತೋರಿಸಿ, ದುಃಖದಿಂದ ಕ್ರೋಧದಿಂದ ಅದು ಇನ್ನೂ ಹೆಚ್ಚಾಯಿತೆಂದೂ ಕವಿ ಕಾಣಿಸುತ್ತಾನೆ. ನಾಟಕದ ಎರಡನೆಯ ಪದ್ಯದಲ್ಲಿ ಕೃಷ್ಣನ ಹೊಗಳಿಕೆಯಲ್ಲಿಯೂ "ದುರ್ಯೋಧನೂರುಕ್ಷಮಾಧರವಜ್ರಂ" ಕುರುರಾಜರತ್ನಮಕುಟೋತ್ಕೂಟಾಂಘ್ರಿಸಂಘಟ್ಟಸಂಗರಂ" ಎಂದು ಭೀಮನನ್ನು ವರ್ಣಿಸಿದ್ದಾನೆ. ದ್ರೌಪದಿಗೆ ಕೆರಳಿಕೆ ಉಂಟಾಗುತ್ತದೆ. ಅವಳನ್ನು ಸಮಾಧಾನಗೊಳಿಸುವಂತೆ ಅವಳ ಮೂದಲೆಗೆ ಉತ್ತರವಾಗಿ ಕವಿ ಭೀಮನಿಂದ

-----

23 ಅಲ್ಲಿಯೂ "Greek ideas about sin and repentence were vague, to say the least. The nearest they could get in sin was 'amartia' , missing the target, for which the best remedy was 'metanoia', a change of mind ಎಂದು Journeys of St. Paul ಎಂಬಲ್ಲಿ ಹೇಳಿರುವುದು ಒಂದರ್ಥದಲ್ಲಿ ನಿಜ.)

24 ಅದನ್ನೂ ಜೈನ ಸಂಪ್ರದಾಯದವರು– ಇವರೂ ಭಾರತೀಯರೇ; ಅದೂ ಭಾರತಧರ್ಮವೇ ಅಲ್ಲವೆ?– ಪಂಪನಲ್ಲಿ, ರನ್ನನಲ್ಲಿ ಕಾಣಿಸಿದ್ದ "ಚಲದೊಳ್ ದುರ್ಯೋಧನಂ" ಎಂಬ ಪದ್ಯದಲ್ಲಿ "ಇವರ್ಗಳಿನೀ ಭಾರತಂ ಲೋಕಪೂಜ್ಯಂ" ಎಂಬ ವಾಕ್ಯವಿದೆ. ಕದಡದ ನಿಷ್ಠೆ ಅವನನ್ನು ಮುರಿಯಿತು, ನಿಜ. ಆದರೂ ಅದಕ್ಕೆ ಫಲವನ್ನು ಅನುಭವಿಸಿದ. ನಮ್ಮಲ್ಲಿ 'ಧೀರೋದ್ಧತ' ಎಂಬ ಒಂದು ನಾಯಕಪ್ರಕಾರವಿದೆ. ಇದನ್ನು ವಿಸ್ತರಿಸಬಹುದು.)

ಊರುಗಳನುಡಿವೆನೊದೆವೆಂ

ಕೌರವಪರಿವೃಢನ ಮಕುಟಮಂ ವೇಣೀ ಸಂ
ಹಾರಂ ಮಾಡುವೆನದಱೆಂ
ಭಾರಮದಿನಿತಲ್ಲದೆನ್ನ ಪರಿಭವಭಾವಂ

ಎಂದು ಕವಿ ಪ್ರತಿಜ್ಞೆ ಮಾಡಿಸುತ್ತಾನೆ. ಇವೆರಡೂ ಸ್ವಲ್ಪ ಹೆಚ್ಚು ಕಡಮೆ ದ್ರೌಪದಿಗೆ ಮಾನಭಂಗವಾದ ಸಂದರ್ಭದಲ್ಲಿಯೇ– ೧೪ ವರ್ಷಗಳ ಹಿಂದೆ– ಅವನು ಒಡ್ಡಿದ ಸಭೆಯಲ್ಲಿ ನುಡಿದಿದ್ದ ಮಾತುಗಳು, ಕೆಳಗೆ ಬಿದ್ದ ವೀರನ ಕಿರೀಟವನನು ಒದ್ದದ್ದು ಆ ಸಮಯದಲ್ಲಿ ನಮಗೆ ವ್ಯಥೆಯನ್ನು ಉಂಟುಮಾಡುತ್ತದೆ. ಆದರೆ ಅದು ಕಥಾಬೀಜಕ್ಕೆ ಸಂಬಂಧಿಸಿದ್ದು, ಹಾಗೆಯೇ ಕಾವ್ಯದಲ್ಲಿಯೇ ೮ನೆಯ ಆಶ್ವಾಸದ ೧೫ನೆಯ ಪದ್ಯದಲ್ಲಿ

ಅಡಿಯಂ ಕಿಱುದೊಡಿಯಂ ಪೆ
ರ್ದೊಡೆಯಂ ಪೊಱವಾಱನುಡಿಯನುರಮಂ ಮುಯ್ವಂ
ಮುಡುಪಂ ಬೆನ್ನಂ ಕೊರಲಂ
ನಡುನೆತ್ತಿಯನೆತ್ತಿ ಪೊಯ್ದರೊರ್ವರನೊರ್ವರ್

ಎಂಬಲ್ಲಿ ತೊಡೆಬಡಿಯುತ್ತೇನೆಂಬ ಪ್ರತಿಜ್ಞೆ ಕಾರ್ಯಕಾರಿಯಾಗುವುದರ ಸೂಚನೆ ಇದೆ. ಹೀಗೆ ಗದಾಯುದ್ಧದಲ್ಲಿಯೇ ನಡೆವ ಮುಂಚಿನ ವರ್ಣನೆಯನ್ನು ಓದಬೇಕು. ವಿದ್ಯಾಧರ ಪರಿಣತಿಯಿಂದ ಮೇಲಕ್ಕೆ ಎಗರಿ ಭೀಮನ ಮೇಲೆ ಎರಗುತ್ತಿದ್ದಾಗ ಆ ಮುಂಚೆ ಪೆಟ್ಟು ತಿಂದು ಎಚ್ಚರಾವಾಗಿದ್ದ ಭೀಮನು ಅರ್ಜುನನ ಸಂಜ್ಞೆಯಂತೆ ತೊಡೆಯನ್ನು ಗದೆಯಿಂದ ಅಪ್ಪಳಿಸಿ ಒಡೆಯುತ್ತಾನೆ. ಪಾಶ್ಚಿಮಾತ್ಯ ಪ್ರಸಂಗಗಳಲ್ಲಿ–ಅದರಲ್ಲಿಯೂ ಫ್ಯೂಡಲ್ ಕಾಲದ knights ಯುದ್ಧಕ್ಕೆ ವಿಶೇಷವಾಗಿ ಸಂಬಧಿಸುವ–Hitting below the belt ಎಂಬ ಮಾತಿನೊಡನೆ ಸೇರಿಸಿ ಬಲರಾಮನು ಮಹಾಭಾರತದಲ್ಲಿ ನುಡಿವುದೂ ಅದೇ[೨೫] ಅಪರಾಧವನ್ನು ಹೊರಿಸುವುದು ಪೂರ್ತಿ ಸರಿಯಾಗದೇನೊ. ಆದರೆ ಕ್ಷತ್ರಿಯ ಪ್ರತಿಜ್ಞೆ ಅದು ಎಂಬ ಕೃಷ್ಣನ ಮಾತಿದೆ. ಈ ಬಗ್ಗೆಯೂ ಅಪವಾದಗಳೆದ್ದಿವೆಯಾಗಿ ಈ ಮಾತನ್ನಾಡಬೇಕಾಯಿತು. All in ಎಂಬ ಜೆಟ್ಟಿಯುದ್ಧಗಳು ಈಗಲೂ ಇವೆ: ಏನು ಸಲ್ಲುತ್ತದೆ. ಏನಿಲ್ಲ ಎಂಬ ನಿಯಮವಿಲ್ಲ ಅಂಥಲ್ಲಿ, ಪ್ರತಿಯೋಧ ಬಿದ್ದು ನಿಶ್ಯಕ್ತನಾಗುವವರೆಗೂ ಇಲ್ಲಿ ಕ್ರಿಯೆ.

ಅವರು ಇನ್ನೂ ಕೆಲವು ನಾಟಕಗಳನ್ನು ಬರೆಯಬೇಕೆಂದಿದ್ದರು. ಜ್ಯೂಸಿಗೆ ವಿರುದ್ಧವಾಗಿ ಅವನ ನಿಯಮವನನು ಮೀರಿ ಸ್ವರ್ಗದಲ್ಲಿ ಸರ್ವಾಧಿಕಾರದಲ್ಲಿ ಇಟ್ಟು ಕೊಳ್ಳಬೇಕೆಂದಿದ್ದ ಅಗ್ನಿಯನ್ನು ಮಾನವರ ಪ್ರಯೋಜನಕ್ಕಾಗಿ ತಂದು ಕೊಟ್ಟು ಉಪಕಾರಮಾಡಿದ ಆಕಾರ್ಯಕ್ಕಾಗಿ ಪ್ರೋಮಿಥಿಯಸ್ಸನ್ನು ಹೇಗೆ ಶಿಕ್ಷಿಸಿದ, ಹೇಗೆ ಕಿರುಕುಳ ಕೊಟ್ಟ ಎಂಬ 'ಬೌಂಡ್'

––––

೨೫ ಆದ್ದರಿಂದಲೇ ಜಿಹ್ಮಯೋಧೀ ಎನ್ನುತ್ತಾನೆ, ಆತನನನು ಕುರಿತು ಬಲರಾಮ,

ಅನ್ನು Mrs. ಬ್ರೌನಿಂಗ್ ಬರೆದಿದ್ದಾಳೆ. 'ಪ್ರೊಮಿಥಿಯಸ್ ಅನ್‌ಬೌಂಡ್' ಎಂಬಲ್ಲಿ ಸಿಲ್ಲಿ ಬರೆದಿದ್ದಾನೆ.; ಅದನ್ನು 'ಮಾತರಿಶ್ವನ್' ಎಂಬ ವಿಳಾಸದಲ್ಲಿ ಕನ್ನಡಿಸಬೇಕೆಂದಿದ್ದರೆಂಬ ಸಂಗತಿಯನ್ನು ಮೂರ್ತಿರಾಯರು ಆಗಲೆ ತಿಳಿಸಿದ್ದಾರೆ. 'ಮಾರತಿಶ್ವನ್' ಸಂಗತಿ ನಮ್ಮಲ್ಲಿ ಎಷ್ಟು ಜನಕ್ಕೆ ವಿದಿತವಾಗಿದೆ? ಪ್ರೊಮಿಥಿಯಸ್ಸಿನ ಪೌರಾಣಿಕ ಮೌಲಿಕತೆಯನ್ನು ಕುರಿತು ಯಾರಾದರೂ ಒಂದು ಮಹಾಪ್ರಬಂಧವನ್ನು ಬರೆದರಾದೀತು. ಕನ್ನಡಕ್ಕೆ ಇನ್ನೂ ಆ ಪುಣ್ಯವಿಲ್ಲ; ಅಂಥ ಆಕಾಂಕ್ಷೆಗಳೂ ಸಲ್ಲ? ಷೆಲ್ಲಿ ಕವನದಲ್ಲಿರುವ ಪ್ರೊಮಿಥಿಯಸ್ಸಿನ ಶಾಪ ಅವನ ಕಿವಿಗೆ ಬೀಳುವಂತೆ ಮಾಡುವ ಹಾಗೆ ಮಾಡಿದ್ದೂ ನಾಟಕದ ಕೊನೆಯಲ್ಲಿ ಡೆಮೊಗಾರ್ಗನ್ ಮಾತೂ–ಅದನ್ನು ಡಿ.ವಿ.ಜಿ. ಕನ್ನಡಿಸಿದ್ದಾರೆ; ಗೋಕಾಕ ಬರೆದಿದ್ದಾರೆ– ಯಾವ ವಿದೃಶ ಬಗೆಯ ನಿಲವಿನದು ಎನ್ನುವುದನ್ನೂ ಮಂದಟ್ಟು ಮಾಡಿಕೊಳ್ಳಬೇಕು. ಇಂಗ್ಲಿಷ್ ಬೇಡ ಎನ್ನುವವರಿಗೆ ಏನು ಹೇಳಿದರೆ ಏನು ಪ್ರಯೋಜನ? ನಮಗೆ ಬೆಳಕು ಬೇಡ, ಗಾಳಿ ಬೇಡ, ಹೊರಗಡೆಯ ತಿಳುವಳಿಗೆ ಬೇಡ ಎಂದುಕೊಂಡ ಹಾಗಾಗುತ್ತದೆ. 'ಶ್ರೀ' ಯವರೇ ಭಾಷಾಂತರ ಮಾಡಿದಾಗಲೂ ಷೆಲ್ಲಿಯ ಬಾನಾಡಿಯ ಒಂದು ಪಂಕ್ತಿಯನ್ನು– ಉದಾಹರಣೆಗಾಗಿ ತೆಗೆದುಕೊಂಡರೆ– ಅಷ್ಟು ಚೆನ್ನಾಗಿರುವ ಪದ್ಯದಲ್ಲಿ[೨೬] – ಈ ೫೦ ವರ್ಷಗಳಿಂದ ಷೆಲ್ಲಿಗೆ ಮರ್‍ಯಾದೆ ಇಲ್ಲ; ಆ ಮಾತು ಬೇಡ–

"ಒಲಿವೆ, ಒಲಿವರ ದಣಿವು ಬೇಸರವೇನೊ ನಿನಗದೆ ತಿಳಿಯದು" ಎಂಬುದು "Thou lovest; But never knew love's sad satiety' ಎಂಬ ಮೂಲದ ಪಂಕ್ತಿಗೆ ಎಷ್ಟು ಮೈಲಿಯ ದೂರದ್ದು?– ಎಂಥ ಭಾಷಾಂತರದಲ್ಲಿಯೂ– ಗೊತ್ತಾದೀತು. ಇಂಥುದನ್ನೂ ಪಟ್ಟಿ ಮಾಡಿ ಕಾಣಿಸಬಹುದು. ಆ ಭಾಷಾಂತರವನ್ನು ಒಪ್ಪದವರು ಬೇರೆ ಬರೆಯಬಹುದು. " ಧಿಕ್ ತಾಂ ಚ, ತಂ ಚ, ಮದನಂ ಚ, ಇಮಾಂ ಚ, ಮಾಂ ಚ" ಎಂಬುದರ ಗದ್ಯಾರ್ಥ ತರಬಹುದು; ಅದರ ಹೊಳಲನ್ನು ತರುವುದಾರೂ ಹೇಗೆ?

And may there be no moaning of the bar,
When I put out to Sea ,
But such a tide as moving seems asleep ,
Too full for sound and foam .

ಎಂಬುದನ್ನು ಇವರೇ ಭಾಷಾಂತರ ಮಾಡಿದ್ದಾರೆ. (Crossing the Bar- Tennyson). ಮೂಲದ 'Roll' ಮೊರೆ ನೊರೆ ಹೇಗೆ ಬಂದೀತು? ಅಲ್ಲಿನ ಸ್ವರವ್ಯಂಜನಗಳ ಶ್ರೋತವೇ ಭಾವದ ಜೊತೆಗೆ ಅಲ್ಲಿನ ಕವಿತೆ. ತಿರುಮಲೆಯ ಬೆಟ್ಟದ ಮೇಲಿನ ಮೂರ್ತಿಯ ದರ್ಶನಕ್ಕೂ ಮೆರವಣಿಗೆಗೆ ಹೋಗುವ ಮೂರ್ತಿಗೂ ಎಲ್ಲಿಯ ಹೋಲಿಕೆ? ಎಷ್ಟು ಹೆಚ್ಚು ಜನ ಎಷ್ಟು ಬೇರೆ ಭಾಷೆಗಳಿಂದ ಮೂಲದ ಹೃದಯವನ್ನು ಅರಿತು ಕನ್ನಡದ ಜಾಯಮಾನವನ್ನು ಅರಿತು ಬರೆದರೆ ಅಷ್ಟೂ ಅಷ್ಟು ನಮ್ಮ ಕಣಜ. ತುಂಬಿ, ನಮ್ಮ ಸಾಹಿತ್ಯ ಬೆಲೆಯುಳ್ಳದ್ದಾಗುತ್ತದೆ. ಇವೊತ್ತು ಆ ಆಸೆ ಭರವಸೆಗಳಿಗೆ ನೆಲಸಿಲ್ಲವೇನೊ.

*   *

'ಹೊಂಗನಸು'ಗಳಲ್ಲಿ 'ಶುಕ್ರಗೀತೆ' ಒಂದು ಉತ್ತಮ ರಚನೆಗೆ ಉದಾಹರಣೆ. ಅವರನ್ನು ನಾಸ್ತಿಕರು ಇತ್ಯಾದಿಯಾಗಿ ನುಡಿವವರು ಅವರ ಹೃದಯದ ಆಳದಲ್ಲಿ ಸತ್ಯಕ್ಕೆ, ಧರ್ಮಕ್ಕೆ ಎಷ್ಟು ದೊಡ್ಡ ಶ್ರದ್ಧೆ ಇತ್ತು ಎಂಬುದನ್ನು ಕಾಣಿಸುವ ಮಾತಿದೆ ಅಲ್ಲಿ. ಅಲ್ಲಿ ವೇದೋಪನಿಷತ್ತುಗಳ ಸೆಲೆ, ಹೊಳಲು ಕೇಳಿಸುತ್ತದೆ. ಋತದ ಪ್ರಯೋಗ ಸಾರ್ಥಕವಾಗಿ ಬರುತ್ತದೆ. ಅದನ್ನು ಅವರು ಸ್ವತಂತ್ರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಬೆಳ್ಳಿಯ ಹಬ್ಬದ ಕವಿಸಮ್ಮೇಳನದಲ್ಲಿ ಓದಿದರು. ಕೇಡಿನ ಸ್ವರೂಪಗಳಾದ ದುಷ್ಟಶಕ್ತಿಗಳು, ತಾಮಸ, ಅಸತ್ತು, ಮೃತ್ಯುಕಾರಕಶಕ್ತಿಗಳು ಹೇಗೆ ಲೋಕದಲ್ಲಿ ಪ್ರಭಾವ ಬೀರುತ್ತವೆ ಎಂಬುದನ್ನು ಆ ಗೀತೆಯ ಎರಡನೆಯ ಭಾಗದಲ್ಲಿ ವರ್ಣಿಸುತ್ತಾರೆ. ಅದರಷ್ಟು ತೀಕ್ಷ್ಣವಾಗಿ ದೈತ್ಯಶಕ್ತಿಗಳು ಸಂಶಯ, ಪಾಪ ಬಿತ್ತುತ್ತದೆ:

ಅಲ್ಲದುದನಹುದೆಂದು, ಅಹುದನಲ್ಲೆಂದು,
ಇಲ್ಲದುದನಿಹುದೆಂದು, ಇಹುದನಿಲ್ಲೆಂದು,
ನಲ್ಲದಂ ಪೊಲೆಯೆಂದು, ಪೊಲೆ ನಲ್ಲದೆಂದು
ತಿರಿಪಿದರ್ ಮಾಯಾವಿಗಳ್ ಬಾಳ್ವ ಮಕ್ಕಳಂ ಸಾವ ಸಂಸಾರ ಸುತ್ತಿ.
ಪಲ ಪೆಸರ್, ಪುರುಳೊಂದು,
ಪಲ ತೆರನ್, ನೆರನೊಂದು,–

-----

26 ಹಾಗೇಯೇ Faust, Paracelsus, ಅವರನ್ನು ಕುರಿತೂ ವ್ಯಾಸಂಗ, ಕಾವ್ಯರಚನೆ ಆಗಬೇಕು.

ಎಂದು ಬರೆದು, ದೇವ– ಅಸುರ[27] ಎಂಬುದು ಆರಂಭವಾಯಿತು; ಇವು ಉತ್ಪನ್ನ ಮಾಡಿರುವ ಕಾಳಕೂಟವನ್ನು ತಿಳಿಸಿ, ಮೂರನೆಯ ಭಾಗದಲ್ಲಿ ಕಣ್ಣಿಗೆ ಬೆಳಕಾಗುವಂತೆ, ಹೃದಯಕ್ಕೆ ಧೈರ್ಯ ಬರುವಂತೆ, ಬಾಳನ್ನು ಧರ್ಮಕ್ಕೆ ನಡಸುವಂತೆ–

ಯುಗಯುಗದೆ ಧರ್ಮಾಮೃತಂಗರೆವ ಗುರುಗಳ್

ಆಗಿ ಆ ಬ್ರಹ್ಮಪುತ್ರರು ಹುಟ್ಟಿ, ಸಂದೇಶಗಳನ್ನೂ ಜೀವನದ ಧ್ಯೇಯಗಳನ್ನೂ ಸಾರಿದ್ದಾರೆ ಎಂದು ತಿಳಿಸುತ್ತಾರೆ. ಆ ಗೀತೆಯ ಮುಡಿಯಾಗಿ

ಋತವೊಂದೆ ಗೆಲ್ಲುವುದು, ಅನೃತವಲ್ತು;
ಅಮೃತಮೆನೆ ವಿದ್ಯೆಯೆ; ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.

ಸರ್ವ ಜೀವಂಗಳುಂ ಮುಕ್ತಿಯಂ ಕಾಣ್ಗೆ;
ದೇವರೊಳ್ ಪಗೆವವರ ಕಾಳಗಂ ಮಾಣ್ಗೆ;
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ.

ಜ್ಞಾನಧರ್ಮಂಗಳಿಂ ತಣ್ಪನಿಳೆ ತಾಳ್ಗೆ;

ಎಂದು ಹೇಳಿ[28], "ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ" ಎನ್ನುತ್ತಾರೆ. ಮೊದಲಿಂದ ಅವರು ಕನ್ನಡ ಗೆಲ್ಲಲಿ, ಕನ್ನಡ ಬಾಳಲಿ, ಕನ್ನಡದ ಮೂಲಕ ಲೋಕದ ಮಹಾಸತ್ವಗಳು ಬೆಳೆಯಲಿ ಎಂದು ನುಡಿಯುತ್ತ ಬಂದವರು. ತಮಿಳಂತಿರುವ ಕಡೆಯ ಪದ್ಯ– 'ಹಾರೈಕೆ'– ಮದರಾಸಿನ ಸಮ್ಮೇಳನಕ್ಕೆ ಕಳಿಸಿದ್ದು; ತಮಿಳಿನ ಮುಖ್ಯ ಪಟ್ಟಣಗಳಲ್ಲಿರುವವರಿಗೆ ಕನ್ನಡ– ತಮಿಳು ಅವಳಿ ಜವಳಿ ಎಂಬಂತೆ ಕಾಣಿಸಿ, ಯಾವುದು ಮೂಲದ್ರಾವಿಡ ಎಂದು ತಿರುಪತಿಯ ಪ್ರಾಚ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದ್ದರೊ ಅದರ ಪ್ರತೀಕವಾಗಲಿ ಎಂದು ಬರೆದು ಕಳಿಸಿದ್ದು. ಪಂಪನ ಸಹಸ್ರಮಾನೋತ್ಸವದಲ್ಲಿ ಅವನ ಹಿರಿಮೆಯ ಸಾರವನ್ನು ಕುರಿತು ಬರೆದ 'ಪಂಪನ ಒರತೆ' ಎಂಬ ಪದ್ಯದ ಮೊದಲ ಭಾಗದಲ್ಲಿ ಈ ಎರಡು ನುಡಿಗಳೂ ಎಷ್ಟು ಹತ್ತಿರ ಎಂಬುದು ಕಾಣುವಂತೆ–

ಪದಿನೂಱು ನೆಱೆಯೆ, ಪಿರಿದೊಸಗೆ ಮೆಱೆಯೆ,
ಪುಲಿಗೆಱೆಯ ತಿರುಳ ಕನ್ನಡದ ಪುರುಳ
ರಸರಸದ ಬಾವಿ ಮನೆಮನೆಗೆ ತೀವಿ
ತನ್ನೆರಡು ಪಾಟ್ಟುಮೆಸೆಯೆ, ನೆಲನೊಸೆಯೆ,
ತನ್ನ ಸೆಱಪೇ ಸೆಱಪು,
ತನ್ನ ತೇಜಮೆ ತೇಜಮ್

ಎನೆ ಬೆಳಪ ಪಂಪನ್
ಎಮ್ಮ ತಾಯ್ ನುಡಿಗೀಗೆ ಪೊಸಪೊಸತು ಪೆಂಪನ್!

ಎಂದು ತಿಳಿಸುತ್ತಾರೆ. ಮುಂದೆ ಅದು ಹೇಗೆ ಕನ್ನಡ ಕಾವ್ಯವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನು ಹೇಳುತ್ತಾರೆ. 'ರಸರಸದ ಬಾವಿ' ಪಂಪನನ್ನೇ ತರುತ್ತದೆ, ಈ ಪದ್ಯಕ್ಕೆ

– – –

27 ಇದು ವಿಚಿತ್ರ: ಕಶ್ಯಪ ಎಷ್ಟೊ ಬಗೆಯ ನಿರ್ಮಿತಿಯ ತಂದೆಶಕ್ತಿ. ಅವನಿಗೆ ಇಬ್ಬರು ಹೆಂಡಿರಂತೆ. ಅದಿತಿಯಿಂದ ಆದಿತ್ಯರು, ದಿತಿಯಿಂದ ದೈತ್ಯರು ಆದರಂತೆ. ಎರಡು ಗಣಗಳೂ ಎರಡು ಪ್ರತೀಕಗಳು. ವಸ್ತುಭೇದ, ಪಾತ್ರಭೇದ, ಗುಣಭೇದ, ಫಲಭೇದವನ್ನು ಹೇಗೆ ಉಂಟುಮಾಡುತ್ತದೆ, ದೃಷ್ಟಿಭೇದ ಉಂಟುಮಾಡುತ್ತದೆ ಎಂಬುದನ್ನು ಅವರು ಸರ್ವದಾ ಮನಸ್ಸಿನಲ್ಲಿಟ್ಟು ಕೊಳ್ಳುತ್ತಿದ್ದರು.

28 ಆ ಕಾಲದಲ್ಲಿ ಮೈಸೂರಿನ ಒಡೆಯರಾಗಿದ್ದ ಜಯಚಾಮರಾಜರಿಗೆ ಹರಕೆ ಎತ್ತಿದೆ. ಇದು ಕವಿತೆಯ ಹಿರಿಮೆಯನ್ನು ಕೆಡಿಸುತ್ತಾದೀತು.

'ಕನ್ನಡ ತಾಯ್ ನೋಟ'ದ ೨–೩ನೆಯ ಭಾಗಗಳಲ್ಲಿ ಕನ್ನಡನಾಡಿನ ವರ್ಣನೆಯಲ್ಲಿ ("ಬಳಸಿ ಬಂದೆನು ಸುತ್ತ . . . ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ"), ಅವರು ನಾಡಿನ ಪ್ರೇಮವನ್ನು ವರ್ಣಿಸಿರುವ ಹಾಗೆ ಇನ್ನಾವುದೂ ಹೊಮ್ಮಿಸಿಲ್ಲ. 'ಅಶ್ವತ್ಥಾಮನ್' ನಾಟಕದಲ್ಲಿ ಮೇಳದವರು ಬನವಾಸಿ ದೇಶದಿಂದ ಹೋದವರೆಂದಿದೆ. ದ್ರೋಣ–ಅಶ್ವತ್ಥಾಮ ಇಬ್ಬರೂ ದಕ್ಷಿಣದವರು, ಇವನ ಕಡೆಯ ವೀರ ಅಶ್ವತ್ಥಾಮನ್ ಎಂದು ಕಲ್ಪನೆ ಮಾಡಿ ಬರೆದಿರುವುದರಲ್ಲಿ ಕನ್ನಡನಾಡಿನ ವರ್ಣನೆ "ಚೆಲ್ವಿನ ನೆಲೆ ಕಣ್ಗಳ ಬಲೆ ಸುಖದೊರತೆಯ ಬನವಾಸೀ"– ಮುಂತಾಗಿ ರಂಜಿಸಿದೆ, ಪಂಪ 'ಶ್ರೀ' ಯವರ ನಡುವೆ ಕನ್ನಡಕ್ಕೆ ಸೇತುವನ್ನು ಕಟ್ಟಿ..

* *

ಮೈಸೂರಲ್ಲಿ ಅಭ್ಯಾಸ ಶಾಖೆಯನ್ನು ಹೇಗೆ ಮಾಡಿದ್ದರೊ ಹಾಗೆಯೇ ಬೆಂಗಳೂರು ಸೆಂಟ್ರಲ್ ಕಾಲೆಜಿಗೆ ಪ್ರೊಫೆಸರಾಗಿ ಬಂದಮೇಲೆ English Seminar ಎಂಬುದನ್ನು ಆರಂಭಮಾಡಿ, ಇಂಗ್ಲಿಷ್ ಇಲಾಖೆಯ ಆನರ್ಸ್ ಮತ್ತು ಎಂ. ಎ. ವಿದ್ಯಾರ್ಥಿಗಳಿಗೆ ಎದುರು ಬದುರಿಗಿದ್ದ ಇಂಟರ್ ಮೀಡಿಯೆಟ್ ಕಾಲೆಜಿನ ಉಪನ್ಯಾಸಕರಿಗೂ ಅವಕಾಶಕೊಟ್ಟು, ಆ ಸೆಮಿನಾರಲ್ಲಿ ಒಂದು ಹೊಸ ಸಂಪ್ರದಾಯವನ್ನು 'ಶ್ರೀ' ತೊಡಗಿದರು. ಬಹುಶಃ ಶ್ರೀ ಎಲ್.ಎಸ್. ಶೇಷಗಿರಿರಾಯರು ಆ ಸೆಮಿನಾರಿಗೆ ಕಾರ್ಯದರ್ಶಿಗಳು. ಯಾವ ಯಾವ ವಿಷಯಗಳನ್ನು ಕುರಿತು ಅಲ್ಲಿ ಆರಂಭ ಭಾಷಣ, ವಿದ್ಯಾರ್ಥಿಗಳ ಮತ್ತು ಶ್ರೋತೃವರ್ಗದವರ ಭಾಷಣ ನಡೆಯಿತು ಎಂಬುದನ್ನೂ ಕಡೆಯಲ್ಲಿ ಅವರ ಸಮಾರೋಪ– ಸಮಾಪನ ಭಾಷಣ ಎಷ್ಟು ವ್ಯಾಪಕವಾಗಿ ವಿಷಯದ ಹೃದ್ಭಾಗ ಕಾಣುವಂತೆ ನಡೆಯುತ್ತಿತ್ತು ಎಂಬುದನ್ನೂ ನೆನಸಿಕೊಂಡರೆ ಒಂದೊಂದು ಸೆಮಿನಾರ್ ಅಧಿವೇಶನವೂ ಒಂದೊಂದು ವಿದ್ಯಾವಿಲಾಸವಾಗುತ್ತಿತ್ತು. ಹೋಲಿ ಬೈಬಲ್, ಹೊಸ ಒಡಂಬಡಿಕೆಯ ಸೆಂಟ್ ಮಾರ್ಕ್, ಎಕ್ಲಿಸಿಯಾಸ್ಟಿಸ್, ಕೊರಾನ್, ಹಿಟ್ಲರನ ಮೈನ್‌ಕಾಂಫ್, ಕಠೋಪನಿಷತ್ತು, ಭಗವದ್ಗೀತೆ, ಪ್ಲೇಟೊನ 'ರಿಪಬ್ಲಿಕ್', ಜಾನ್ ಸ್ಟುವರ್ಟ್ ಮಿಲ್ಲನ 'ಆನ್ ಲಿಬರ್ಟಿ', ಧಮ್ಮಪದ, ಗಾಧೀಜಿಯವರ *Ends and Means*, ಶಾಕುಂತಲ, ಉತ್ತರ ರಾಮಚರಿತೆ.[೨೯] ದಸ್ ಸ್ಪೇಕ್ ಜರತುಷ್ಟ್ರ, ಏರಯೊಪೆಜೆಟಿಕ, ಟಾಲ್‌ಸ್ಟಾಯ್‌ನ ಯಾವುದೋ ಗ್ರಂಥ, ಪ್ರೊಮಿಥಿಯಸ್, ರಸ್ಕಿನ್ ನ *Unto this Last*, ಡಾಂಟೆಯ *Divine comedy*, ಷೇಕ್ಸ್‌ಪಿಯರಿನ ಕೊರಿಯೊಲೇನಸ್, ಗಯತೆಯ *Faust,* ಜಾರ್ಜ್ ಎಲಿಯಟ್‌ಳ ರೊಮೋಲ, ಆರ್ನಲ್ಡರ *Culture and Anarchy* ಮುಂತಾದ ಎಷ್ಟನ್ನೊ ವಿಷಯವಾಗಿ ಮಾಡಿಕೊಂಡು, ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಪಠ್ಯಗಳಲ್ಲದವನ್ನೆತ್ತಿಕೊಂಡು ಅವರ ಮನೋರಂಗವನ್ನು ವಿಸ್ತರಿಸಿದರು. ಅವೆಲ್ಲವನ್ನೂ ವಿದ್ಯಾರ್ಥಿಗಳು ಓದುವಂತೆ ಮಾಡಿ, ಅವರಲ್ಲಿ ಒಬ್ಬರು ಆ ಗ್ರಂಥವನ್ನು ಕುರಿತು ಬರೆದು ಓದಬೇಕು ಅಥವಾ ಮಾತನಾಡಬೇಕು, ಆಮೇಲೆ ಇತರರು ಮಾತನಾಡಬೇಕು– ಎಂದು ಮಾಡಿದ್ದು ಒಂದು ಹೊಸ ಬಗೆಯ ವಿದ್ಯಾಪ್ರಚಾರ. ಅವರ ಸಮಾಪನ ಭಾಷಣ– ಭೂರಿಭೋಜ್ಯ– ಸಮಾರಾಧನೆ; ಇದು ಪದ್ಧತಿ.

ಅವರ ಪಾಠಗಳಲ್ಲಿ ೬೦ ನಿಮಿಷದ ಗಂಟೆಗಿಂತ ಹೆಚ್ಚಾಗಿ ೨–೩ ಗಂಟೆಗಳವರೆಗೂ ಕೆಲವೇಳೆ ಪಾಠಗಳ ವಿಸ್ತರಣೆಯಾಗಿ ಹರಿಕಥೆಯಂತಾಗುತ್ತಿತ್ತು ಎಂಬವರುಂಟು. ಸಾಹಿತ್ಯದ ಪಾಠ ಹೇಳುವವರು ಬಲ್ಲರು: ಯಾವುದೊ ಒಂದು ರಸಸ್ಥಾನಕ್ಕೆ ಬರುವ ಹೊತ್ತಿಗೆ 'ಗಂಟೆ ಬಡಿದು ಬಿಟ್ಟರೆ ಆ ಕಾವಿಗೆ ಇನ್ನೊಂದು ದಿನ– ಬಹುಶಃ ಒಂದು ವಾರದ ಮೇಲೆ– ಪುನಃ ಬರುವ– ತರುವ– ಕಷ್ಟ ಎಷ್ಟು ಎಂದು. ಅವರ ಸ್ಪೆಷಲ್ ಕ್ಲಾಸುಗಳಲ್ಲಂತೂ ತಪ್ಪದೆ ಆ ವಿಧಾನವಿರುತ್ತಿತ್ತು. ಒಳಗೆ ನರಳುತ್ತಿದ್ದರೂ ಯಾರೂ ಹೊರಗೆ ಹೋಗದೆ ಕೂತಿರುತ್ತಿದ್ದರು, 'I know it is late for some of you; those who cannot sit may go' ಎಂದುದುಂಟು. ಒಂದು ಸಲ ಎಂ.ಎ. ಕ್ಲಾಸುಗಳವರಿಗೆ ಮೈಸೂರಲ್ಲಿ 'ಶಾಂತಿಪುರಾಣ' ದ ಪಾಠವನ್ನು ಮಾಡಬೇಕಾದಾಗ, ಉಳಿದವರಾರೂ ಅದನ್ನು ಮುಟ್ಟದಿದ್ದಾಗ, ವಿದ್ಯಾರ್ಥಿಗಳನ್ನು ಬರಹೇಳಿ, ಚಾವುಂಡರಾಯ ಪುರಾಣ, ಪೊನ್ನನ ಗ್ರಂಥ 'ಶಾಂತಿಪುರಾಣ', ಆ ವಿಷಯವನ್ನು ಕುರಿತ ಇತರ ಗ್ರಂಥಗಳು–ಎಲ್ಲವನ್ನೂ ಮೇಜಿನ ಮೇಲಿಟ್ಟುಕೊಂಡು, ಒಟ್ಟಿಗೆ ಪಾಠ ಹೇಳಿ ಮುಗಿಸಿ, ಆ ಕವಿಚಕ್ರವರ್ತಿಯ ಹಿರಿಮೆಯನ್ನು ಕಾಣಿಸಿದರು ಎಂದು ಕೇಳಿದ್ದೇನೆ. ಒಮ್ಮೆ ನಾನೂ ಆ ಪುಸ್ತಕದ ಮೊದಲ ಆರು ಆಶ್ವಾಸಗಳನ್ನು ಪಾಠ ಹೇಳಬೇಕಾದಾಗ, ಇದಕ್ಕಿಂತ ಮಣ್ಣು ತಿನ್ನುವುದು ಮೇಲು ಎನ್ನಿಸಿತ್ತು. ಯಾವುದನ್ನು ತೆಗೆದುಕೊಂಡರೂ ಅದರ ರಸಸಾರ ಹಿಡಿದು, ಹಿಳಿದು ಅವರ ಹಾಗೆ ಸಾಹಿತ್ಯಪಾಠ

––––(೨೯ ಒಂದು ದಿನ ಅವರು ಸಭೆಗೆ ಬರುವುದಕ್ಕಾಗದೆ, ಕೃಷ್ಣಶಾಸ್ತ್ರಿಗಳು ಸಭೆಗೆ ಅಧ್ಯಕ್ಷರು. ಭವಭೂತಿಯಲ್ಲಿ ಅವರಿಗೆ ಅಷ್ಟು ಭಕ್ತಿಯಿರಲಿಲ್ಲ. ಅಂದು ಅವರು ಪಟ್ಟ ಪಾಡು ಕಣ್ಣೀರು ತರುತ್ತದೆ. 'ಶ್ರೀ'ಯವರು ಎಂದಿಗೂ ತೆಗಳಿಕೆಯ

ಮಾತನ್ನಾಡಿದವರಲ್ಲ; ತೆಗಳಿಕೆ Criticism ಅಲ್ಲ, ಸಂಪ್ರದಾಯವಲ್ಲ. ಆ ಪದದ ಅರ್ಥ ವ್ಯಾಪ್ತಿಯೇನು? Criticism ಎಷ್ಟು ಪ್ರಕಾರಗಳದು?– ಎಂಬುದನ್ನು ತಿಳಿಸಿ, ಅಂಥದನ್ನು ಕೊಟ್ಟರೆ ನಾವೆಲ್ಲ ಬದುಕಿಕೊಂಡೇವು.)

ಹೇಳುವವರನ್ನು ನಾನು ಕಂಡಿಲ್ಲ. ಪಠ್ಯಪುಸ್ತಕವಾಗಿಟ್ಟುದರ ಮೇಲೆ ಕಟು ಟೀಕೆ, ಕುಚೇಷ್ಟೆಯ ಹೀನಾಯದ ಮಾತಾಡುವುದು ದುರ್ನಯ, ಕೃತಿಕಾರನಿಗೆ– ಪಠ್ಯಸಮಿತಿಯ ವಿದ್ವಾಂಸರಿಗೆ ಅಪಮಾನ ಎನ್ನುತ್ತಿದ್ದರು. ಕಡೆಗೆ ಈ ಈ ಆಕ್ಷೇಪಣೆ ಈ ಈ ಗ್ರಂಥದ ಮೇಲೆ ಎತ್ತಬಹುದು ಎಂದು ತಿಳಿಸಿ, ಅದನ್ನು ಕುರಿತಲ್ಲ ನಾನು ಹೇಳಬೇಕಾದ್ದು ಎಂದೇನೊ ನುಡಿಯುತ್ತಿದ್ದರು[೩೦].

ಇನ್ನೊಂದು ಸಂಗತಿ : ಅವರು ತುಂಬಾ ಮೆಚ್ಚುತ್ತಿದ್ದುದು ಒಂದು ವಿಷಯ: 'The Burden of the Prophets' ಎಂಬುದು. ಎಲ್ಲ ಪ್ರವಾದಿಗಳೂ ಉಪದೇಶ ಮಾಡಿದ ಸಾರಸಂಗತಿ ಒಂದೇ; ಇವೊತ್ತು ಅವರ ಅನುಯಾಯಿಗಳು ನಡುವೆ ನಡುವೆ ಗೋಡೆಗಳನ್ನು ಹಾಕಿಕೊಂಡು ವಿಷಮವಾಗಿ ಮಾಡಿಕೊಂಡಿದ್ದಾರೆ ಎಂಬಂತೆ ಮಾತನಾಡುವಾಗ ಆ ಸ್ಫೂರ್ತಿಯನ್ನೂ ವಾಗ್ವೈಭವವನ್ನೂ ವಿಷಯಸಂಪುಷ್ಟಿಯನ್ನೂ ಕೇಳಬೇಕಿತ್ತು. ಕಾರವಾರದಲ್ಲಿ ಕವಿಸಮ್ಮೇಳನದಲ್ಲಿ ನಾನು ಭಾಷಣ ಮಾಡಬೇಕಾದಾಗ ನನ್ನ ಬಳಿ ಕುಳಿತಿದ್ದ ಮುಡಕಟ್ಟಿ ಎಂಬ ವಿಶ್ರಾಂತ ಮ್ಯಾಜಿಸ್ಟ್ರೇಟರೊಬ್ಬರು ನನ್ನ ಬಾಯಿಂದ ಬಲಾತ್ಕಾರವಾಗಿ ಹೇಳಿಸಿದ್ದ 'ಕಸ್ಮೈ ದೇವಾಯ' ಪದ್ಯವನ್ನು ಕುರಿತು ತುಂಬಾ ನೊಂದು, ಅಧ್ಯಕ್ಷರಾದವರು ಇಂಥ ಅನಾಸ್ತಿಕ ಪದ್ಯಗಳನ್ನು ನುಡಿಯಬಾರದು, ಬರೆಯಬಾರದು ಎಂಬಂತೆ ನುಡಿದರು. ಅವರಿಗೆ ಆ ಸಮಯದಲ್ಲಿ ಸಮಾಧಾನವನ್ನು ಹೇಳಿ 'ಶ್ರೀ' ಮುಗಿಸಿದರು. ಆ ಸಂಜೆ ಈ 'The Burden of the Prophets' ಭಾಷಣವನ್ನು 'ಶ್ರೀ'ಯವರು ಸಾರ್ವಜನಿಕವಾಗಿ ಮಾಡಿದರು. ನನಗೆ ಅದು ೫–೬ ಸಲ ಕೇಳಿದ್ದು; ಆದರೆ ಅಂದು ಅವರ ರಂಗೇ ಬೇರೆ.[೩೧] ಅದರಲ್ಲಿ ಭಾರತದ ಸಂಸ್ಕೃತಿಯಲ್ಲಿಯೇ ವೇದಕಾಲದಿಂದ ಹೇಗೆ ಪರಮಾತ್ಮ / ಪರಮಾರ್ಥ ತತ್ವಕ್ಕೆ ಅನ್ವೇಷಣೆ ನಡೆಯಿತು ಎಂದು ತಿಳಿಸಿ ಒಟ್ಟು ಋಗ್ವೇದದ ಹತ್ತನೆಯ ಮಂಡಲದಲ್ಲಿರುವ ಕಸ್ಮೈದೇವಾಯ ಸೂಕ್ತವನ್ನು ಹೇಳಿದರು. ಮುಡಕಟ್ಟಿಯವರು ಸಜ್ಜನರು. 'ಶ್ರೀ' ಯವರಿಗೂ ನನಗೂ ತಮ್ಮ ಮಾತಿಂದ ಬೇಸರಪಡಬಾರದೆಂದು ಹೇಳಿ ಕ್ಷಮೆ ಬೇಡಿದರು.

ಸ್ವರಾಜ್ಯಸಾಧನೆಗಾಗಿ ತೀವ್ರವಾದ ಆಂದೋಳನ ನಡೆಯುತ್ತಿದ್ದ ಕಾಲದಲ್ಲಿ ಬೆಳಗಾಮಿಗೆ ಒಂದು ಸಲ ಹೋಗಿದ್ದಾಗ ಕವಿತೆ, ಕಲೆ, ಗೀತ ಎಂಬ ವಿಷಯಗಳಿಗೆ ಕಳೆಯುವ ಕಾಲ ವ್ಯರ್ಥ ಎಂಬಂತೆ ಊರಿನ ದೊಡ್ಡವರೊಬ್ಬರು ಹೇಳಿದರೆಂಬುದು 'ಶ್ರೀ'ಯವರ ಕಿವಿಗೆ ಬಿತ್ತು.[೩೨] ಆ ದಿನ ರಾತ್ರಿ ಎರಡು ಕಡೆ 'ಶ್ರೀ'ಯವರು ಆಗಲೆ ಭಾಷಣ ಮಾಡಿದ್ದರು. ಅನೇಕರಿಗೆ ತಮ್ಮ ಇಂಗ್ಲಿಷ್ ಭಾಷಣ ಕೇಳಬೇಕೆಂದು ಇಷ್ಟವಿದೆ; ಕನ್ನಡನಾಡಿನ ಅಧಿಕಾರಿಗಳೇ ಅಲ್ಲ, ಮಹಾರಾಷ್ಟ್ರ, ನಾಗಪುರ, ಗುಜರಾತ್ ಕಡೆಯಿಂದ ಬಂದಿರುವವರು ಇದ್ದಾರೆ; ದಯಮಾಡಿ ಇಂಗ್ಲಿಷಲ್ಲಿ ಒಂದು ಭಾಷಣ ಮಾಡಬೇಕು– ಎಂದು ಅಲ್ಲಿಯವರು ಪ್ರಾರ್ಥಿಸಿ, ರಾತ್ರಿ ೧೦ ಗಂಟೆಗೆ ಉಪನ್ಯಾಸ ಏರ್ಪಡಿಸಿದರು. ಅಕ್ಕಪಕ್ಕದಲ್ಲಿ ಎರಡು ಟೆನ್ನಿಸ್ ಆಟದ ಅಂಗಳದ ನಡುವೆ ಇದ್ದ ತಡಿಕೆ ತೆಗೆದುಹಾಕಿ, ಬೆಳಗಾಮಿನ ವಿದ್ವನ್ಮಾನ್ಯರು, ಅಧಿಕಾರಿಗಳು– ಎಲ್ಲರೂ ಒಡ್ಡಿದ ಬೆಳುದಿಂಗಳಲ್ಲಿ ನಿಡಿದಾದ ಸರ್ದಾರ್ ಹೈಸ್ಕೂಲ್ ಆವರಣದಲ್ಲಿ ಸೇರಿದ್ದರು. ಅವರ ಉಪನ್ಯಾಸಕ್ಕೆ ಆ ದಿನ ನಾನು ಅಧ್ಯಕ್ಷ(!), ಇದೇನು ಅವಿವೇಕವಾಯಿತು ಎಂದು ನಾನು 'ಶ್ರೀ'ಯವರಿಗೆ ಹೇಳಿದೆ. "ನಿಮಗೇನು ಕಷ್ಟ, ಒಂದು ಮಾತುಹೇಳಿ" ಎಂದು ಬಿಟ್ಟರು. ನಾನು ಸಂಕೋಚ ಪಟ್ಟುಕೊಂಡು "ಇವರು ನನ್ನ ಸಾಹಿತ್ಯದ ಗುರುಗಳು. ಯಾವ ವಿಷಯವನ್ನು ಕುರಿತು ಮಾತನಾಡುತ್ತಾರೆಂದು ಹೇಳಿಲ್ಲ. ಧೀಮಂತರಾದ ತಾವೆಲ್ಲ ನೆರೆದಿದ್ದೀರಿ. ಅವರು ಏನು ಹೇಳುತ್ತಾರೊ ಅದನ್ನು ಕೇಳಲು ನನಗೂ ನಿಮ್ಮಷ್ಟೇ ಆತುರ, ಕುತೂಹಲ ಇವೆ" ಎಂದು ಹೇಳಿ, "ಪ್ರೊ. ಶ್ರೀಕಂಠಯ್ಯ" ಎಂದು ಹೇಳಿ ಕುಳಿತೆ. ಆ ದಿನದ 'ಶ್ರೀ'ಯವರ ಭಾಷಣ ಉದಾತ್ತವಾದ್ದು. ನನಗೆ ಗೊತ್ತು: ಮಿಲ್ಟನ್ ಅಲ್ಲಿ ಅವರಿಗೆ ಅತಿಶಯ ಪ್ರೀತಿ ಇಲ್ಲವೆಂದು; ಆದರೆ ಮಿಲ್ಟನ್ ಗದ್ಯಪದ್ಯ ಪಾಠ ನಾಲ್ಕಾರು ಬಾರಿ ಹೇಳಿದ್ದುಂಟು. ಆ ದಿನ ಅವರು ಎತ್ತಿಕೊಂಡ ವಿಷಯ ಕವಿಯಾದವನು ರಾಷ್ಟ್ರಕನೂ ಹೌದು. ಆಯುಧ ಹಿಡಿದು ಯುದ್ಧಮಾಡುವ ಸೈನಿಕನು ಮಾತ್ರ ರಾಷ್ಟ್ರಕನಲ್ಲ. ಅವನ ನಿಲವು, ಸ್ಥಾನ, ಮಾರ್ಗ, ಕಾರ್ಯ, ಬೇರೆ; ಆದರೆ ಏತಕ್ಕೂ ಮನಸ್ಸನ್ನು ರೂಪಿಸಬಲ್ಲ, ಸ್ಫೂರ್ತಿಮೂಲವಾಗಬಲ್ಲ– ಎಂಬಂತೆ ಮಿಲ್ಟನ್ ಕವಿಯ ಉದಾಹರಣೆಯನ್ನು ಎತ್ತಿಕೊಂಡರು. ಯೂರೋಪಲ್ಲಿ ವಿದ್ಯಾಸಂಗ್ರಹಕ್ಕಾಗಿ ಸುತ್ತಾಡುತ್ತಿದ್ದ ಆತನು ಇಂಗ್ಲಂಡಲ್ಲಿ ರಾಜಪಕ್ಷಕ್ಕೂ ಕ್ರಾಮ್‌ವೆಲ್ ನಾಯಕತ್ವದಲ್ಲಿ ಬಲಿಯುತ್ತಿದ್ದ ಸ್ವತಂತ್ರ ಪ್ಯೂರಿಟನ್ (Puritan) ಪಕ್ಷಕ್ಕೂ ದೊಡ್ಡ ಘರ್ಷಣೆ ನಡೆದಿದೆ ಎಂದು ಕೇಳಿದವನೇ ಇಂಗ್ಲಂಡಿಗೆ ಹಿಂದಿರುಗಿ, ಕ್ರಾಮ್‌ವೆಲ್ ಕಾರ್ಯದರ್ಶಿಯಾಗಿ ಕಾರ್ಯಮಾಡಲು ನೆರವಾದ ಎಂಬುದನ್ನು ತಿಳಿಸಿ, *Paradise Lost* ಕವಿತೆಯಿಂದ ಕೆಲವು ಭಾಗಗಳನ್ನೂ *Samson Agonistis* ನಿಂದ ಹತ್ತು ಪಂಕ್ತಿಗಳನ್ನೂ ಹೇಳಿದವರೇ, ಸ್ವಾತಂತ್ರ್ಯದಲ್ಲಿ– ವೃತ್ತಿ ಮತ್ತು ವೇತನ ಸ್ವಾತಂತ್ರ್ಯಕ್ಕೆ, ಕ್ರಿಯಾಸ್ವಾತಂತ್ರ್ಯಕ್ಕೆ ರಾಷ್ಟ್ರಕನಿಗೆ ಸಮಸ್ತ ಅವಕಾಶವೂ ತೆರೆದಿರಬೇಕು ಎಂದು ಹೇಳಿ,

– –

(೩೦ ಗುಣದೋಷ ವಿವೇಚನೆ,ಶಾಸ್ತ್ರವಾಗಿ, ನಮ್ಮಲ್ಲಿಯೂ ಹಿಂದೆ ನಡೆದಿದೆ. ಆದರೆ ಈಗಿನ ಕಾಲದ ಕ್ರಿಟಿಸಿಸಂ ಬೇರೆ; ಹೃದಯ, 'ರೀತಿ', ದೃಷ್ಟಿ ವಿಧಾನಗಳದು)

ಮಿಲ್ಟನ್ ಕವಿಯ 'ಏರಿಯೊಪೆಜೆಟಿಕ' ಗ್ರಂಥದ ಸ್ವರೂಪವನ್ನು ವಿಶದಪಡಿಸಿ, ಅವನು ಬರೆದ ೬–೮ ಸಾನೆಟ್‌ಗಳನ್ನು– ಅವು ಅವರಿಗೆ ವಾಚೋವಿಧೇಯವಾಗಿದ್ದುವು– ಹೇಳಿ, ಕಡೆಯಲ್ಲಿ ಸ್ವದೇಶಿ ಚಳವಳಿಯಲ್ಲಿ, ಸ್ವಾತಂತ್ರ್ಯ ಚಳವಳಿಯಲ್ಲಿ ಕವಿಯನ್ನು ಅಲ್ಲಗಳೆಯಬಾರದು; ಅವನ ಕಾರ್ಯವನ್ನು ಅವನ ರೀತಿಯಲ್ಲಿ ಅವನು ಮಾಡುತ್ತಾನೆ; ಅವನ ದೇಶಾಭಿಮಾನವನ್ನು ಅವನ ರೀತಿಯಲ್ಲಿ ತೋರಿಸುತ್ತಾನೆ; ಇದು ಸರ್ವಥಾ ವ್ಯರ್ಥವಲ್ಲ

– – –

(೩೧ ಸ್ವಲ್ಪ ಹೆಚ್ಚು ಕಡಮೆ ಅದೇ ಸತ್ಯದ 'ಮುಕ್ತದ್ವಾರ'– ನಾಟಕವನ್ನು ಕಾರಂತರು ಬರೆದು ಪುತ್ತೂರಲ್ಲಿ ಆಡಿಸಿದಾಗ ಅವರನ್ನು ಮುಂದೆ ರಾಯಚೂರು ಸಮ್ಮೇಳನಕ್ಕೆ ಆಹ್ವಾನಿಸಿ, ಆಡಿಸಿದ್ದುಂಟು.

–––––

೩೨ ಅಂಥ ಮಾತನ್ನು ಗಾಂಧೀಜಿಯವರು ರವೀಂದ್ರನಾಥ ಠಾಕೂರರನ್ನು ಕುರಿತು ಕೂಡ ನುಡಿಯುತ್ತಿದ್ದರಲ್ಲವೆ? ಆತ ಅಷ್ಟುಮಟ್ಟಿಗಾದರೂ ಗಾಂಧೀಭಕ್ತರು!)

ಎಂದು ಹೇಳಿ ಮುಗಿಸಿದರು. ಹನ್ನೆರಡು ಗಂಟೆಯಾಗಿತ್ತು. ಚಿತ್ರಾರ್ಪಿತರಾದಂತೆ ಅಷ್ಟೂ ಜನ ಮೌನವಾಗಿ ಕುಳಿತು ಭಾಷಣ ಕೇಳಿ, ಕಡೆಯಲ್ಲಿ ಪ್ರಶಂಸೆ, ಉದ್ಗಾರಗಳನ್ನು ಹೇಳಿದ್ದೂ ಕೈ ಚಪ್ಪಾಳೆ ಹೊಡೆದದ್ದೂ ೨–೩ನಿಮಿಷಗಳ ಕಾಲ ನಡೆಯಿತು. ಎಷ್ಟು ಜನ ಬಂದು ಅವರ ಕೈಕುಲುಕಿದರು, ಕೃತಜ್ಞತೆ ಸೂಚಿಸಿದರು, ಅಪ್ಪಿಕೊಳ್ಳಲು ಬಂದರು– ಎಂಬುದನ್ನು ನೋಡುವುದು ನನಗಂತೂ ಉತ್ಸಾಹಕರವಾಗಿತ್ತು.

೧೯೨೮ ರಲ್ಲಿ ಗುಲ್ಬರ್ಗಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಭಾಷಣ ಮಾಡಿ 'ಶ್ರೀ'ಯವರು ಜನಗಳ ಮನಸ್ಸನ್ನು ಸಂತೋಷಗೊಳಿಸಿದರು. ಆ ಕಡೆಯ ಜನವೆಲ್ಲ ಕನ್ನಡ ಬರೆಯುವಾಗ ದೇವನಾಗರಿ ಲಿಪಿಯಲ್ಲಿ ಅಥವಾ ಮರಾಠಿ ಮೋಡಿಯಲ್ಲಿ ಬರೆಯುತ್ತಿದ್ದರು. ಹಿಂದಕ್ಕೆ ಬರುವಾಗ ರಾಯಚೂರಲ್ಲಿ ಲಾಯರ್ ಪಿ. ಕಿಶನ್‌ರಾವ್ ಎಂಬವರಲ್ಲಿ ಇಳಿಯತಕ್ಕದ್ದೆಂದೂ ಆ ಭಾಷಣದ ಪ್ರಯೋಜನವನ್ನು ರಾಯಚೂರಿನವರಿಗೆ ಮಾಡಿಕೊಡಬೇಕೆಂದೂ ಪ್ರಾರ್ಥಿಸಿದ್ದರು. ರೈಲು ಅಲ್ಲಿಗೆ ಸೇರುವುದು ಆ ದಿನ ತಡವಾಗಿ ಅವರ ಮಾಳಿಗೆ ಮೇಲೆ ಸೇರಿದ್ದ ಜನ ಎಲ್ಲಾ ಚೆದರಿ ಹೋಗಿದ್ದರು. ೮–೯ ಗಂಟೆಗೆ ಸೇರಬೇಕಿದ್ದ ರೈಲು ೧ ಗಂಟೆಗೆ ಹೋಯಿತು. ಡಂಗುರ ಹೊಯಿಸಿ ಪುನಃ ಊರಿನ ಜನವನ್ನೆಲ್ಲ ರಾಯರು ಬರಮಾಡಿಕೊಂಡರು. ಎರಡು ಗಂಟೆಯ ಹೊತ್ತಿಗೆ– ಆ ಹೊತ್ತಿಗೆ ಅಟ್ಟದ ತುಂಬ ಜನ ಸೇರಿದ್ದರು– 'ಶ್ರೀ'ಯವರು ತುಂಬ ಉತ್ಸಾಹದಿಂದ ಅವರ ಭಾಷಣ ಓದಿ, ನಡುನಡುವೆ ಒಂದೊ ಎರಡೊ ಪದ್ಯಗಳನ್ನು ಹೇಳಿ, ಭಾಷಣ ಮುಗಿಸಿದರು. ಸಭೆ ಸೇರುವ ಮುಂಚೆ ಜಿಲೇಬಿ, ಮಸಾಲೆ ಹಾಲು, ಚೂಡಾ ಎಲ್ಲರಿಗೂ ಹಂಚಿ ಆನಂತರ ಅತ್ತರು ಕೊಟ್ಟರು. ಆ ದಿನ ಉತ್ಸಾಹ ರಾಯಚೂರಿಗೆ ಹೊಸತು, ಎರಡನೆಯ ಮಧ್ಯಾಹ್ನ ನಾವು ಹೊರಡುವ ಮುಂಚೆ ನಮಗೆಲ್ಲ ಏರ್ಪಡಿಸಿದ್ದ ಭೋಜನಕೂಟ ಇತ್ತ ಕಡೆಯವರಿಗೆ ಹೊಸದು. ಬಾಳೆಎಲೆಯ ಮೇಲೆ ೩೦–೪೦ ಜನಕ್ಕೆ ಬೆಳ್ಳಿಯ ತಟ್ಟೆ, ಸುತ್ತ ೫–೬ಬೆಳ್ಳಿಯ ಕೆಲವಟ್ಟಲು; ಒಬ್ಬೊಬ್ಬರಿಗೂ ಒಂದೊಂದು ಬೆಳ್ಳಿಯ ತಂಬಿಗೆ ತುಂಬಾ ಕೇಸರಿ ನೀರು, ಒಂದೊಂದು ಲೋಟ ಇಟ್ಟು, ಒಂದು ವಿಶಿಷ್ಟವಾದ ರುಚಿಯ ಪಾಯಸವನ್ನು ಮಾಡಿಸಿದ್ದರು– ಇತರ ಭಕ್ಷಗಳ ಜೊತೆಗೆ. ಊಟವೆಲ್ಲ ಆದ ಮೇಲೆ 'ಶ್ರೀ'ಯವರು ಅವರಿಗೆ ಇಷ್ಟು ವೆಚ್ಚ ನಮಗಾಗಿ ಏಕೆ ಮಾಡಬೇಕಾಗಿತ್ತು, ಅಗತ್ಯವಿರಲಿಲ್ಲ ಎಂದಾಗ, ರಾಯರು "ನಮ್ಮ ಕಡಿಂದ ಒಬ್ಬ ತಹಸೀಲ್ದಾರರು ಬರ್‍ತಾರೆಂದರೆ ಪುಣೆಯಿಂದ ನಾಲ್ಕು ಮಂದಿ ಪಾತ್ರದವರನ್ನು ಕರಸಬೇಕಾಗುತ್ತದೆ, ಬಿಡ್ರಿ, ಅಢಾಯಿ ಹಜಾರ್ ರೊಕ್ಕವಾದ್ರೂ ವೆಚ್ಚ ಮಾಡಬೇಕಾಗುತ್ತದೆ. ಇಷ್ಟು ಹಿರಿಯರು ನೀವು ಬಂದಿದ್ದೀರಿ; ಈ ಸಣ್ಣ ಮರ್ಯಾದೆ ಏನು ಲೆಕ್ಕ? ನೀವೆಲ್ಲಾ ಬಂದದ್ದು ಹೆಚ್ಚು"– ಎಂದದ್ದನ್ನು ಕೇಳಿ 'ಶ್ರೀ'ಯವರಿಗೆ ತುಂಬಾ ಸಂತೋಷವಾಯಿತು. ಇಂದೋರ್‌ಕಡೆಯ ಜನ ಉಡುವಂತೆ ಶುಭ್ರವಾದ ಬಿಳಿಯ ಉಡುಪು, ಬಿಗಿ ಪಾಯಿಜಾಮ, ಪಂಜಾಬಿ ಜೂತ, ಹಸಿರು ರೇಶಿಮೆ ಮತ್ತು ಜರತಾರಿಯ ಕುಚ್ಚು ರುಮಾಲು ಧರಿಸಿದ್ದ ಅವರ ಚಿತ್ರ ಮರೆಯಲಾಗದ್ದು. ನಮ್ಮ ಜೊತೆಗೆ ಸ್ಟೇಷನ್ನಿಗೆ ಬಂದು ಹೂವು ಹಣ್ಣು ನಿವೇದಿಸಿ, ಪ್ರೀತಿಯಿಂದ ಬೀಳ್ಕೊಟ್ಟರು. ಹತ್ತಾರು ವರ್ಷಗಳ ತರುವಾಯವೂ ಅದನ್ನು 'ಶ್ರೀ'ಯವರು ನೆನಸಿಕೊಳ್ಳುತ್ತಿದ್ದರು.

೧೯೩೪ರಲ್ಲಿ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಅಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಅದರ ಕಾರ್ಯಭಾಗವೆಲ್ಲ ಬೆಳಿಗ್ಗೆ ಮುಗಿದಿತ್ತು. ಸಂಜೆ 'ಶ್ರೀ'ಯವರು ಸಾರ್ವಜನಿಕ ಭಾಷಣ ಮಾಡಿದರು. ನೂರಕ್ಕೆ ಇಬ್ಬರಿಗಿಂತ ಹೆಚ್ಚಾಗಿ ಹೊರಸಭೆಯಲ್ಲಿ ಹಳಗನ್ನಡ ಕಾವ್ಯದ ಪರಿಚಯವಿದ್ದವರಲ್ಲ. ಸಾವಿರ– ಎರಡು ಸಾವಿರಮಂದಿ ಸಾಮಾನ್ಯಜನ. ತೆಲುಗು–ಉರ್ದು ಹೆಚ್ಚಾಗಿ ಬಳಕೆಯಲ್ಲಿದ್ದ ಆ ಜನಕ್ಕೆ ಕನ್ನಡ ಎಷ್ಟು ಸವಿಯಾಗಿದ್ದೀತು ಎಂಬ ಅರಿವಿರಲಿಲ್ಲ. ಆ ದಿನ "ಶ್ರೀ' ಯವರು ಪಂಪನ 'ಆದಿಪುರಾಣ' ವನ್ನು(!) ತೆಗೆದುಕೊಂಡು ಮಾತನಾಡಿದರು. ಭಾರತದ ಕಥೆಯಾದರೂ– ಜನಕ್ಕೆ ಗೊತ್ತಿರುವದು; ಆದಿಪುರಾಣವನ್ನು ಹೇಳುತ್ತಾರಲ್ಲ ಎಂದು ನಮಗೆಲ್ಲಾ ಒಳಗೇ ಅಳುಕು. ಮುಖ್ಯವಾದ ೫–೬ ಪ್ರಸಂಗಗಳನ್ನು ಆಯ್ದುಕೊಂಡು ಅವರು ಭಾಷಣ ಮಾಡುವಾಗ "ಒಂದು ಜೀವ ಒಂದು ಧರ್ಮದ ಕಡೆ ತಿರುಗಿ, ಹಿಂದಿನ ಕರ್ಮಗಳನ್ನೆಲ್ಲ ನಿವಾರಿಸಿಕೊಂಡು, ಸತ್ಕರ್ಮಗಳಿಂದ ಜೀವವನ್ನು ಪರಿಶುದ್ಧಿ ಮಾಡಿಕೊಂಡು, ಸಂರಾಜ ಪದವಿಯನ್ನು ಬಿಟ್ಟುಕೊಟ್ಟು ಜಿನಸಿದ್ಧಿ ಪಡೆದ ಕರ್ಮಕತೆ ಇದು! ಇದನ್ನು ತಾವು ಕೇಳಬೇಕು"–ಎಂದು ಆರಂಭಿಸಿ, "ಪ್ರತಿಜೀವಕ್ಕೂ ಈ ಸಿದ್ಧಿ, ಯೋಗ್ಯತೆ ಇದೇ ಕರ್ಮಬಂಧವನ್ನು ತಪ್ಪಿಸಿಕೊಂಡು ಮುಕ್ತಿ ಪಡೆದ ಮೊದಲ ತೀರ್ಥಂಕರ (ತೀರ್ಥಂಕರ ಎಂದರೆ ಏನು ಎಂದು ವಿವರಿಸಿದರು) ಇವನು; ಈತನು ಎತ್ತಿದ ಜನ್ಮಗಳ ೩–೪ ಭಾಗಗಳನ್ನು ತಮಗೆ ಓದುತ್ತೇನೆ. ಕೇಳಿ,–ಇದು ಹಳತೆಂದು ಬೇಸರಪಟ್ಟುಕೊಳ್ಳಬೇಡಿ' ಎಂದವರೇ ಆರಿಸಿದ ಭಾಗಗಳನ್ನು ಓದತೊಡಗಿದರು. ಅವು "ಸುಲಿದ ಬಾಳೆಯ ಹಣ್ಣಿನಂದದಿ" ಎಂಬಂತೆ ತಿಳಿಯಾಗಿ, ಸುಲಭವಾಗಿ ಸರಸವಾಗಿ ಯಾರ ಕುತೂಹಲವೂ ಕಡಮೆಯಾಗದಂತೆ ಆಕರ್ಷಕವಾಗಿತ್ತು. ಅಂದಿನಭಾಷಣ ಎರಡು ಗಂಟೆಯ ಕಾಲದ್ದು . ಹಳಗನ್ನಡ, ಅದರಲ್ಲಿಯೂ ಪಂಪನದು ಅಷ್ಟು ಸುಲಭವೇ?– ಎಂದು ಗ್ರಂಥವನ್ನು ಓದಿದ್ದ ನಮಗೆ ಆಶ್ಚರ್ಯವಾಯಿತು. ಅಂಥ ಶಕ್ತಿ ಇನ್ನೊಬ್ಬರಲ್ಲಿ ನಾನು ಕಂಡಿಲ್ಲ. ಬೆಂಗಳೂರಿಗೆ ಹಿಂದಿರುಗಿ ಮನೆಗೆ ಬಂದು ಪುನಃ ಹಾಕಿದರೆ ಅವರು ಪದ್ಯವನ್ನು ಬಿಡಿಸಿ ಹೇಳುತ್ತಿದ್ದ ರೀತಿ ನೆರವು ಕೊಟ್ಟಿತೇ ಹೊರತು ನಮ್ಮ ಕಷ್ಟವನ್ನೇನೂ ಕಡಮೆ ಮಾಡಲಿಲ್ಲ. . . . ಎಂಥವರನ್ನೂ ಒಲಿಸಿಕೊಂಡು, ಎಷ್ಟು ಕಷ್ಟ ವಿಷಯವನ್ನಾದರೂ–ಕನ್ನಡದಲ್ಲಾಗಲಿ, ಇಂಗ್ಲಿಷಿನಲ್ಲಾಗಲಿ–ಹೇಳಿ, ಹೃದಯಂಗಮವಾಗಿಸುವ ಜಾಣ್ಮೆ–ಜಾಣ್ಮೆಯೇನು ಬಂತು?–ನಾದಶಕ್ತಿ–ಅವರ ಕೊರಲಿನದು, ನಾಲಿಗೆಯದು: ನಡಸುವ ಮನಸ್ಸಿನದು.

ಜನ ಅನೇಕ ವೇಳೆ ಅವರ ಭಾಷಣಗಳು ಕ್ರಮಕ್ರಮವಾಗಿ ಅತಿನಿಡಿದಾಗುತ್ತಿವೆ. ಎಂದುದುಂಟು. ತಿಳಿದವರೇ ಇದ್ದ ಸಭೆಗಳಲ್ಲಿ ಮಾತನಾಡುವುದು ಒಂದು ರೀತಿ; ಗೊತ್ತಾದ ಪಠ್ಯಗಳನ್ನಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಹೇಳುವುದು ಒಂದು ರೀತಿ; ಸಾಹಿತ್ಯದ ಗಂಧವಿಲ್ಲದೆ ಇರುವ ಜನರಿಗೆ ಹತ್ತು ನಿಮಿಷ ಅರ್ಧ ಗಂಟೆಗಳಲ್ಲಿ ಒಂದು ದೊಡ್ಡ ವಿಷಯವನ್ನು ವಿಸ್ತರಿಸಿ ಹೇಳಬೇಕಾದರೆ ಅದರ ರೀತಿ ಬೇರೆ. ಗಾಯನ ಸಮಾಜದ ಕಚೇರಿಗಳಿಗೆ ಹೋಗಿ ಅಲ್ಲಿನ ವಿದ್ವಾಂಸರು, ಬೂಗಿಬೂಗಿ, ರಾಕ್'ನ್ ರೋಲ್, ಪಾಪ್, ಟ್ವಿಸ್ಟ್ ಹಾಡುಗಳನ್ನು ಹಾಡುವುದಿಲ್ಲ ಎಂದರೆ ಏನರ್ಥ? ವಿಷಯ ನಿಷ್ಣಾತರಾಗಿರುವವರು ವಿದ್ಯಾಪ್ರೌಢಿಮೆಯನ್ನು ಪಡೆದವರಿಗೆ, ಸಾಮಾನ್ಯರಿಗೆ– ಎಬ್ಬರಿಗೂ ರುಚಿಸುವಂತೆ, ಒಂದು ನಿಮಿಷ ಪೋಲು ಮಾಡದೆ, ವಿಷಯನಿಷ್ಠೆಯಿಂದ ಭಾಷಣ ಮಾಡುವುದು ಕಷ್ಟ. ನಡುನಡುವೆ ಯಾವುದಾದರೂ ಸಂಬಂಧ ಕಲ್ಪನೆಯೊ ಹೆಸರೊ ತತ್ವವೊ ಬಂದರೆ ಆ ಸಂಬಂಧದ ಪೂರ್ವ ಸಂಗತಿಗಳನ್ನು, ವಿಶೇಷವನ್ನು, ಅಲ್ಲಿಗೆ ಅದರ ಸಮಂಜಸಿಕೆಯನ್ನು ತೋರಿಸುವಂತೆ ಮಾತನಾಡಬೇಕಾಗುತ್ತದೆ. ಇದು ಶಿಕ್ಷಣಕಲ್ಪ; ಭಾಷಣದ ಒಂದು ಸುಲಭೀಕರಣ. ಅವರ ರೀತಿಯನ್ನು ಸ್ಥಾಪಿಸುವುದಕ್ಕಾಗಿ ಪಕ್ಷಪಾತವಾಗಿ ನುಡಿಯಲು ನಾನು ಇದನ್ನು ಹೇಳುತ್ತಿಲ್ಲ. ಆಕ್ಷೇಪಣೆ ಮಾಡುವವರು ವಿದ್ಯಾವಂತರು; ತಮ್ಮ ವಿದ್ಯಾಪರಿಣತಿಯಲ್ಲಿ ಹಲವೇಳೆ ಬೀಗುವವರು; ಕನ್ನಡದ ಹಿರಿಮೆ ಚೆಲುವುಗಳನ್ನು ಅರಿಯದ ಸಾವಿರಕ್ಕೆ ತಿಳಿಸಬೇಕಾಗಿತ್ತು.

ಒಂದು ಸಲ ಬಿಜಾಪುರದಿಂದ ಸೊಲ್ಲಾಪುರಕ್ಕೆ ಹೋಗಿ ಅಲ್ಲಿ ಇದಿರುಗೊಳ್ಳುವೆವೆಂದು ಮಾತು ಕೊಟ್ಟಿದ್ದವರು ದೊರಕದಿದ್ದಾಗ ಒಂದು ಹೊಟೇಲ್ ಜಗುಲಿಯ ಮೇಲೆ ಕುಳಿತು, ಸ್ವಲ್ಪ ನೀರು ತಂದು ಮುಖಮಾರ್ಜನೆ ಮಾಡಿಕೊಂಡು, ಹೊಟೇಲಿಂದ ಆಹಾರ ತೆಗೆದುಕೊಂಡು, ಬಸ್ಸಲ್ಲಿ ಕುಳಿತು ಪಂಢರಪುರಕ್ಕೆ ಹೋದೆವು. ದೇವಸ್ಥಾನದ ಮುಂದಿನ ನದಿಯಲ್ಲಿ ಸ್ನಾನವಾಯಿತು. ಒಂದು ದಟ್ಟಿ ಉಟ್ಟು, ಮಲ್ ಅರೆತೋಳಿನ ಬನಿಯನ್ ತೊಟ್ಟು ದೇವಸ್ಥಾನಕ್ಕೆ ಹೋದೆವು. ಪಂಢರಪುರದ ವಿಠಲಸ್ವಾಮಿ 'ಕಾನಡಿ ದೇವ್', ಪುರಂದರದಾಸರ ನೆಲೆ, ಸಂಪರ್ಕ ಉಳ್ಳ ಪ್ರದೇಶ. ಒಳಗೆ ಹೋಗಿ ಷರ್ಟು ತೆಗೆದುಹಾಕಿ ದೇವರ ಪಾದ ಮುಟ್ಟಿ ಮಣಿಯುವ ಅವಕಾಶವಿತ್ತು. ದೇವರ ಪಾದದ ಮೇಲೆ ರೂಪಾಯಿ ಇಟ್ಟು ನಮಸ್ಕಾರ ಮಾಡಬೇಕೆಂದರು. ಎರಡು ರೂಪಾಯಿ ಇಟ್ಟದ್ದಾಯಿತು. ಇನ್ನೊಂದು ಪಾದದ ಮೇಲೂ ಅಷ್ಟೇ ಇಡಬೇಕೆಂದರು! ಅದೂ ಇಟ್ಟಾಯಿತು. ಪೂಜಾರಿ ಒಬ್ಬಾತ, ಪಾಪ, ಇವರ ವಯಸ್ಸನ್ನಾಗಲಿ ನಯವನ್ನಾಗಲಿ ಗಮನಕ್ಕೆ ತಂದುಕೊಳ್ಳದೆ ಆ ಪಾದಕ್ಕೆ ಅವರ ಹಣೆಯನ್ನು ಬಡಿದರು ಹಣೆ ಬೋರೆ ಬಂದಿತು! ನಾನು ಹೊರಗೆ ಬಂದು ಇದಕ್ಕೆ ಏನಾದರೂ ಮುಲಾಮು ತರುತ್ತೇನೆಂದೆ. "ಬೇಡಪ್ಪ, ನೇರ ದೇವರ ಸೇವೆ ಮಾಡಿಸಿದ್ದಾರೆ. ಇಷ್ಟು ಸಹಿಸಬಾರದೆ? ನೇರ ದೇವರ ದರ್ಶನವಾಯಿತಲ್ಲ" ಎಂದರು. ಹೊರಜಗುಲಿಗೆ ತೆರೆದು ಇಳಿವ ಒಂದು ಕೊಠಡಿಯಲ್ಲಿ ಒಬ್ಬ ಮಹಾರಾಷ್ಟ್ರ ವಿಧವೆ ಅಡಿಗೆಮಾಡಿ ಬಡಿಸುತ್ತಿದ್ದಲ್ಲಿಗೆ ಹೋಗಿ ತಕ್ಕಮಟ್ಟಿಗೆ ರುಚಿಕರವಾದ ಊಟ ಮಾಡಿದೆವು. "ಊಟ ಪರವಾಗಿ ಇತ್ತಲ್ಲ?" ಎಂದರು. "ಇತ್ತು. ಬೇಕಾದಷ್ಟು ಚಪಾತಿ ಬಡಿಸಿ, ಒಂದೊಂದು ಸಲವೂ ಬೇಕಾದಷ್ಟು ತುಪ್ಪ ಹಾಕಿದರು; ಪ್ರತಿಸಲವೂ ಪಲ್ಯ ಬಡಿಸಿದರು; ಒಳ್ಳೆಯ ಮೊಸರು ಬಡಿಸಿದರು. ಇದಕ್ಕಿಂತ ಇನ್ನೇನು?" ಎಂದರು. ನನಗೆ ಅವರ 'ಇಂಗ್ಲಿಷ್ ಗೀತಗಳ'ಲ್ಲಿನ 'ಇನ್ನು ಅರೆಯಾವುದಿಲ್ಲಿ?' ಎಂಬ ಗೀತದ ಮೊದಲ ಸಾಲು ನೆನಪಿಗೆ ಬಂದಿತು. ಅದಕ್ಕೇನಾದರೂ ಅರ್ಥ ಮಾಡಬಹುದಲ್ಲವೆ ಎಂದೆ. ನಗುತ್ತ ಬೆನ್ನುತಟ್ಟಿದರು. ಸನ್ನಿವೇಶಗಳಲ್ಲಿ ಸಾಮ್ಯವಿಲ್ಲ, ನಿಜ. ಆದರೆ ಎರಡೂ ತೃಪ್ತಿಯ ಉಕ್ತಿಗಳು. ಅಲ್ಲಿಂದ ಉದ್ದಕ್ಕೆ ಬಾಗೇವಾಡಿಗೆಹೋಗಿ ಬಸವೇಶ್ವರರ ಜನ್ಮಸ್ಥಾನ, ದೇವಮಂದಿರ, ಪಕ್ಕದಲ್ಲಿದ್ದ ಬಾವಿ ನೋಡಿಕೊಂಡು ಪುನಃ ಬಸ್ ಹತ್ತಿ ಸುಮಾರು ಹತ್ತು– ಹತ್ತೂವರೆ ಗಂಟೆಯ ಹೊತ್ತಿಗೆ ಮುದ್ದೇಬಿಹಾಳ ಸೇರಿದೆವು. ಅಲ್ಲಿಂದ ತಗಡಗಿ ಎಂತಲೊ, ರಕ್ಕಸಗಿ ಎಂತಲೊ ಹೆಸರಿನ ಊರಿಗೆ ಸೇರಿದೆವು. ಸಂಗಮಕ್ಕೆ ಹೋಗಬೇಕಿತ್ತು. ಅಷ್ಟುಹೊತ್ತಿಗೆ ಇವರು ಕಾಲಿಗೆ ಹಾಕಿಕೊಂಡಿದ್ದ ಪಾದರಕ್ಷೆ ಕೆಟ್ಟು ಉಪಯೋಗವಿಲ್ಲವಾಗಿತ್ತು. ಯಥಾಪ್ರಕಾರ ಒಂದು ದಟ್ಟಿ, ಒಂದು ಬನಿಯನ್ ಹಾಕಿ ಕೊಂಡಿದ್ದವರು "ಹೀಗೇ ಹೋಗೋಣ, ನಡೆಯಿರಿ; ಇದು ಕೃಷ್ಣಾ, ನಮ್ಮ ಪೆರ್ದೊರೆ; ಅಲ್ಲಿ ಸ್ನಾನಮಾಡಬೇಕು"– ಎಂದವರೇ ಸುಮಾರು ಎರಡು ಫರ್ಲಾಂಗ ದೂರ ನೊರಜು ಕಲ್ಲುಗಳ ಮೇಲೆ ನಡೆದರು. ಕಾಲಿಗೆ ಕಲ್ಲುಮುಳ್ಳು ಚುಚ್ಚಿ ಬೇಕಾದಷ್ಟು ರಕ್ತ ಸುರಿಯಿತು. ಅವರ ಅಂಗೈ, ಬೆರಳು ಹೇಗೆ ಚಿಕ್ಕವೊ, ಮಾಂಸಲವೊ– "ಮೃದುಪೀನಂ ಪಾಣಿಭ್ಯಾಂ" ಎಂದು ಸುಮಿತ್ರೆ ಕೌಸಲ್ಯೆಗೆ ರಾಮನ ಸಂಬಂಧದಲ್ಲಿ ಹೇಳುತ್ತಾಳೆ ಹಾಗೆ– ಅವರ ಹೆಜ್ಜೆ ಅಂಗಾಲು ಮಕ್ಕಳ ಅಂಗಾಲು, ಮುಮ್ಮಡಿ, ಹಿಮ್ಮಡಿಗಳಂತೆ ಇದ್ದವು. ಅವನ್ನು ನೋಡಿದವರು, ಅವರ ದಿಟ್ಟವಾದ ಆಕೃತಿಯನ್ನು ನೋಡಿದವರು, ಎಂದಿಗೂ ಮರೆಯಲಾರರು. ಆ ಕಡೆಯ ಅಂಚಿನಲ್ಲಿದ್ದ ಸಮಾಧಿಯನ್ನು ದಾಟಿ ಸಂಗಮದ ಊರೊಳಕ್ಕೆ ಹೋದೆವು. ದೇವಸ್ಥಾನ ಬಳಿಗೆ ಹೋಗುವ ಹೊತ್ತಿಗೆ ಹುಬ್ಬಿನ ಕೆಳಗೆ ವಿಭೂತಿ ಬಳಿದು ಕೊಂಡಿದ್ದ, ಕಿವಿಗೆ ಒಂದು ಅರೆಬೆಂಕಿಯುಳ್ಳ ಬೀಡಿ ಸಿಕ್ಕಿಸಿಕೊಂಡಿದ್ದ ದೇವಸ್ಥಾನದ ಪೂಜಾರಿ ನಮ್ಮ ಎದುರಿಗೆ ಕಾಣಿಸಿದ. ಸುಮಾರು ಅದೇ ಹೊತ್ತಿಗೆ ಅಲ್ಲಿ ನಿಲ್ಲಿಸಿದ್ದ ಯಾವುದೊ ಒಂದು ಸ್ಮಾರಕದ ಕಲ್ಲುಕಂಬಕ್ಕೆ ಹಿಂದಿನ ದಿನದ್ದೊ ಅಂದಿನದೊ ಪಾಕವಾಗಿ ಉಳಿದಿದ್ದ ಬೆಂದ ಬೇಳೆ ಚರಟವನ್ನು ಯಾರೊ ಸುರಿದು ಹೋದರು. ಎಲ್ಲಿಯೂ ಇದೇ ಗತಿ– ನಮ್ಮ ದೇವಸ್ಥಾನಗಳಲ್ಲಿ. ಬಸವೇಶ್ವರನಿಗೆ ಅರ್ಪಿತವಾದ ಈ ಪ್ರದೇಶದಲ್ಲಿಯೂ ಹೀಗಿಟ್ಟುಕೊಳ್ಳುವವರು ಪ್ರಾಚೀನ ಮಂದಿರಗಳನ್ನು ಇನ್ನೇನು ಮಾಡಲಾರರು!– ಎಂದುಕೊಂಡರು.

ಒಳಗೆ ಈಶ್ವರದರ್ಶನವನ್ನುಮಾಡಿಕೊಂಡು ಅವರನ್ನು ಒಂದು ಜಗುಲಿಯ ಮೇಲೆ ಕುಳ್ಳಿರ ಹೇಳಿ, ಊರಲ್ಲಿ ನಾಲ್ಕಾರು ಫರ್ಲಾಂಗ್ ಸುತ್ತಿ, ಒಂದೊಂದು ರೂಪಾಯಿಗೆ ಒಂದೊಂದು ಲೋಟದಂತೆ ಹಾಲು ಕೊಂಡುತಂದು, ಒಂದನ್ನು ಅವರಿಗೆ ಕೊಟ್ಟು, ಇನ್ನೊಂದನ್ನು ನಾನು ಕುಡಿದೆ. ನಮ್ಮನ್ನು ಸುಮಾರು ನೀರು ಬಸ್ಸಲ್ಲಿ ಈ ಕಡೆಗೆ ತಂದು ಬಿಟ್ಟಿದ್ದ ಚಾಲಕನು "ನಾನು ೨ ೧/೨ಗಂಟೆಗೆ ಮುಂಚೆ ಹೊರಡುವುದಿಲ್ಲ; ನೀವು ಹಿಂದಕ್ಕೆ ಬರುವ ಹಾಗಿದ್ದರೆ ಇನ್ನೂ ಅರ್ಧ ಗಂಟೆ ಕಾಯುತ್ತೇನೆ." ಎಂದಿದ್ದ. ಸುಮಾರು ಎರಡು ಗಂಟೆಗೆ ಮುಂಚೆಯೇ ಅಲ್ಲಿಗೆ ಬಂದಿದ್ದೆವು. ಬರುವ ಹೊತ್ತಿಗೆ ಬಸ್ ಹೊರಟುಹೋಗಿತ್ತು. . . ಅವರ ವಿಶ್ವಾಸ ಇಂಗಿಹೋಯಿತು, ಅದನ್ನು ಕಂಡು ಅರಳಿಕಟ್ಟೆಯ ಮೇಲೆ ಅವರನ್ನು ಕೂಡಿಸಿ, ಕೈಚೀಲದಲ್ಲಿ ಸೊಲ್ಲಾಪುರದ B.G. ದೊಡ್ಡ ಸ್ಟೇಷನ್ನಿಂದ ಕೊಂಡು ತಂದಿದ್ದ ಒಳ್ಳೆಯ ಮೂಸಂಬಿಯನ್ನು ಸುಲಿದು ಅವರಿಗೆ ಕೊಟ್ಟೆ.. ಅವರಿಗಾದ ಸಂತೋಷ ಉಕ್ತಿಗೆ ಮೀರಿದುದು. ಆ ದಿನ ಅವರಿಗೆ ನನ್ನಲ್ಲಿ ತುಂಬಾ ಆದರ ಉಂಟಾಗಿರಬೇಕು. ಊರಿನ ಪಟೇಲರ ಮನೆಗೆ ಹೋಗಿ ಏನಾದರೂ ಮಾಡಿ ನಮ್ಮನ್ನು ಒಂದು ರೈಲ್

ಸ್ಟೇಷನ್ನಿಗೆ ಸೇರಿಸಬೇಕೆಂದು ಬೇಡಿಕೊಂಡೆ. ಊರಿನ ಎತ್ತು ಗಾಡಿ ಯಾವುವೂ ಓಡಲಿರಲಿಲ್ಲ. ಸುಮಾರು ೩-೩ ೧/೨ ಗಂಟೆಯ ಹೊತ್ತಿಗೆ ಒಂದು ಬೋಳು ಗಾಡಿಯನ್ನು ಆತ ಸಿದ್ಧಪಡಿಸಿ "ಆರು ರೂಪಾಯಿ ಆದರೂ ಆಗುತ್ತದೆ, ಸ್ವಾಮಿ; ಹೊಲಗಳಿಂದ ತರಿಸಿದ್ದೇನೆ- ಇಂದ್ರ ಚಂದ್ರ ಎಂಬ ಹೆಸರಿನವು- ಎತ್ತುಗಳನ್ನು"- ಎಂದ. ಯಾವುದೊ ವಾಹನ ಸಿಕ್ಕಿತಲ್ಲ ಎಂದು ತೃಪ್ತಿಪಟ್ಟುಕೊಂಡು ಹರ್ಡೇಕರ್ ಮಂಜಪ್ಪನವರಿದ್ದ ಆಲಮಟ್ಟಿ ಸೇರಿ, ಅವರನ್ನು ಹುಡುಕಿಕೊಂಡು ಹೋಗಿ ನೋಡಿದಾಗ ಅರ್ಧ ಗಂಟೆಗೆ ಮುಂಚೆ ತಾನೆ ಅವರು ಎಲ್ಲಿಂದಲೊ ಹಿಂದಿರುಗಿ ಬಂದಿದ್ದರು. "ನನ್ನ ಭಾಗ್ಯ ಸ್ವಾಮಿ; ನಾನು ಈಗ ತಾನೆ ಬಂದೆ; ಒಂದೆರಡು ದಿನ ಇದ್ದು ಹೋಗಬೇಕು" ಎಂದು ಬೇಡಿಕೊಂಡರು. ನಮಗೆ ಅವಕಾಶ ಇರಲಿಲ್ಲ. ಆ ರಾತ್ರಿ ಅಲ್ಲಿದ್ದು ಬೆಳಗ್ಗೆ ಗಾಡಿಯಲ್ಲಿ ಹೊರಟೆವು. ಅದು ಸುಮಾರು ೧೯೩೫-೬ ವರ್ಷ. ಆಗ್ಗೆ ಒಂದು ಕಡೆ 'ರಿಸರ್ವ್‌ಬ್ಯಾಂಕ್ ಆಫ್ ಇಂಡಿಯ' ಸ್ಥಾಪಿತವಾಗಿತ್ತು. ಸರ್ಕಾರದವರು ಭರತಖಂಡದ ರಾಜ್ಯಾಂಗ ಪದ್ಧತಿಯನ್ನು ಸುಧಾರಣೆ ಮಾಡುವಂತೆ ಹೊಸದಾಗಿ ದೊಡ್ಡ ಶಾಸನವನ್ನು ಮಾಡಿದ್ದರು. ತಗಡಗಿಯಿಂದ ಹೊರಟ ೧೦-೧೫ ನಿಮಿಷದಲ್ಲಿಯೇ ಒದ್ದೆ ಚೌಕವನ್ನು ಗಾಡಿಯ ದಂಡಕಾಷ್ಠಗಳಿಗೆ ಒಣಗಹಾಕಿ ಕುಳಿತು ಭಾರತದ ರಾಜ್ಯಾಂಗ ಶಾಸನದಲ್ಲಿ ಆಗತಾನೆ ಬಂದಿದ್ದ ಅರೆ ಅರಕಲು ಸ್ವಾತಂತ್ರ್ಯದ ಅಂಗಾಂಶಗಳನ್ನೆಲ್ಲ ವಿವರ, ವ್ಯಾಖ್ಯಾನ, ಟೀಕೆ ಮಾಡಿಕೊಂಡು ಹೋದೆವು. "ಕನ್ನಡದಲ್ಲಿ ಇನ್ನಾರೂ ಇದನ್ನು ಈಗ ವಿವರಿಸುವವರಿಲ್ಲ; ಆದಷ್ಟು ಬೇಗ ಹತ್ತು ಮಂದಿ ಕನ್ನಡದ ವಿದ್ಯಾರ್ಥಿಗಳನ್ನು ಇಂಥ ಕೆಲಸಕ್ಕೆ ತರಬೇಕು ಮಾಡಬೇಕು" ಎಂದು ನನಗೆತುಂಬ ಪ್ರೀತಿಯ ಮಾತನ್ನಾಡಿದರು. ೩ಗಂಟೆಯ ಕಾಲ ತಿಳಿಯದೆ ಗಾಡಿ ನಡೆದಿತ್ತು. . .

*　　　　*　　　　*

ಬೇರೆ ಇನ್ನಾವಾಗಲೊ ಬಿಜಾಪುರದಿಂದ ಹೊರಟು ಐಹೊಳೆ, ಪಟ್ಟದಕಲ್ಲು, ಬಾದಾಮಿ ಮೂರನ್ನೂ ನೋಡಿಕೊಂಡು ಬಂದೆವು. ಅಲ್ಲಿನ ದೇವಸ್ಥಾನಗಳನ್ನೂ ಶಿಲ್ಪವನ್ನೂ ತೋರಿಸುತ್ತ "ಇದು ನೋಡಿ, ಈ ವ್ಯತ್ಯಾಸ ಇಲ್ಲಿ ಹೇಗೆ ಕಾಣುತ್ತಿದೆ; ಈ ಶಿಲ್ಪವಿಶೇಷ ನೋಡಿ; ಇದು 'ದುರ್ಗಿ' ಗುಡಿ ಅಲ್ಲ; 'ದುರ್ಗದ' ಗುಡಿ ಇರಬೇಕು; ಬೌದ್ಧ ಸಂಪ್ರದಾಯದ್ದು. ಈ ಸುತ್ತುವಲಯ, ಕಟಾಂಜನ. ಅದನ್ನು ಸನಾತನ ಮಾಡಿಕೊಂಡಿದ್ದೇವೆ" ಎಂದರು. ಪಟ್ಟದಕಲ್ಲು, ಐಹೊಳೆಗಳ ಶಾಸನಗಳಲ್ಲಿ ಒಂದೆರಡನ್ನು ಅವಸರದಲ್ಲಿ ಓದಿ ಹೇಳಿದರು. ಅಲ್ಲಿಂದ ಒಂದು ಬೆಟ್ಟದ ಮೇಲಿಂದ ಎಂಬಂತೆ ಹತ್ತಿ ಉದ್ದಕ್ಕೆ ನಡೆದು ಬಂದೆವು. ದಾರಿಯಲ್ಲಿ ಸಿಕ್ಕಿದ ಕೆಲವು ಸಣ್ಣಸಣ್ಣ ಕಲ್ಲುಚಪ್ಪಡಿಗಳ ಮೇಲುಹೊದಿಕೆಯಿಂದ ಮಾಡಿದ್ದ "ಇವನ್ನು 'cromlechs' ಎನ್ನುತ್ತಾರೆ; ಇಂತಹ ಮೂಲ ಕಟ್ಟಡಗಳಿಂದ ನಮ್ಮ ದೇವಾಲಯಗಳ ಸಮಾಧಿಗಳ ಶಿಲ್ಪ ಗೋಪುರಗಳು ಬೆಳವಣಿಗೆಗೊಳ್ಳುತ್ತವೆ." ಎನ್ನುತ್ತ ನಾಲ್ಕಾರು ಮಜಲುಗಳಲ್ಲಿ ಅವು ಬೆಳೆದ ವಿಶೇಷವನ್ನು ತೋರಿಸುತ್ತ, ಮಾತನಾಡುತ್ತ ಬಂದರು. ಬಾದಾಮಿಗೆ ಬರುವ ಹೊತ್ತಿಗೆ ನಮಗೆ ಶಿವಯೋಗ ಮಂದಿರದ ಸ್ವಾಮಿಗಳವರು ಪ್ರವಾಸಿ ಮಂದಿರದಲ್ಲಿಯೊ ಇನ್ನೆಲ್ಲಿಯೊ ವಸತಿ ಮಾಡಿಟ್ಟಿದ್ದರು. ರಾತ್ರಿ ಮಲಗಿ ಬೆಳಗ್ಗೆ ಗವಿಗಳಲ್ಲಿರುವ ದೇವಾಲಯಗಳನ್ನು ನೋಡಿಕೊಂಡು ಬಂದೆವು. ಸ್ವಲ್ಪ ಹೊತ್ತು ಎರಡನೆಯ ಗವಿಯಲ್ಲಿಯೊ ಮೂರನೆಯದರಲ್ಲಿಯೊ ವಿಶ್ರಮಿಸಿಕೊಂಡೆವು. ಪುನಃ ಪಕ್ಕದಲ್ಲಿದ್ದ ಮೆಟ್ಟಿಲುಗಳನ್ನು ಹತ್ತಿ ಹೋಗಿ ಮೇಲಿಂದ ಸುತ್ತಲ ಭೂಮಂಡಲವನ್ನು ನೋಡಿದೆವು ೧ ೧/೨ ಅಡಿ ಎತ್ತರದ ಇಕ್ಕಟ್ಟಾದ ಅರೆಕೆಂಪು ಬೆಣಚಿನ ಕಲ್ಲಿಂದ ಕಟ್ಟಿದ ದ್ವಾರ ಒಂದು ಕಡೆ ಇತ್ತು "ಇಲ್ಲಿ ನೋಡಿ, ನಮಗೆ ಕಮಾನಿನಂತಹ ಅಥವಾ ಅದರ ಸೂಜಿಮುಡಿಯಂತಹ ಶಿಲ್ಪವೇ ಗೊತ್ತಿರಲಿಲ್ಲ ಎನ್ನುವುದುಂಟು. ಇದನ್ನು ಮುಸಲ್ಮಾನರು ಇನ್ನೂವರೆಗೆ ಮುಟ್ಟಿದ್ದಿಲ್ಲ" ಎಂದು, ವಿಧರ್ಮಿಗಳೇ ಅಲ್ಲದೆ ನಮ್ಮ ಶೈವ ಜೈನ ವೈಷ್ಣವ ಪಂಥಗಳೂ ಒಂದು ಕಾಲದಲ್ಲಿ ಮತದ ಆವೇಶಗಳಿಂದ ಏನೇನು ಮಾಡಿರಬಹುದು ಎಂಬುದನ್ನು ಹೇಳಿ," ನಮ್ಮ ಕಾರ್ಯಗಳೂ ಅವುಗಳ ನೆನಪೂ ಅಧಿಕಾರವೂ ಮರೆತುಹೋಗಿ ಸಾವಿರ ವರ್ಷವಾಗಿರುವಾಗ ಇತರರು ಮಾಡಿದ ಕೇಡುಗಳ ಕಡೆಗೇ ಮನಸ್ಸು ಹೋಗುತ್ತದೆ"- ಎಂದರು. ಆಡಿದ ಮಾತು ಅನೇಕ ಅಂಶಗಳ ಸತ್ಯ; ಕೇಳಲು ಕಹಿ.

ಎರಡನೆಯ ದಿನ ಸ್ವಾಮಿಗಳವರು ನಮ್ಮನ್ನು ಶಿವಯೋಗ ಮಂದಿರಕ್ಕೆ ಕರೆದುಕೊಂಡು ಹೋಗಿ ಇಬ್ಬರೂ ಮಾತನಾಡಲೆಬೇಕೆಂದು ಕೇಳಿದರು. ನಾನು ಮೊದಲು 'ಪ್ರಭುಲಿಂಗ ಲೀಲೆ'ಯ ಒಂದೆರಡು ಪ್ರಸಂಗಗಳನ್ನು ಎತ್ತಿಕೊಂಡು ಅರ್ಧಗಂಟೆ ಮಾತನಾಡಿದೆ. ಅವರು ವೀರಶೈವದ ಉಗಮ, ವಚನಕಾರರು, ಈ ಧರ್ಮಸಂಪ್ರದಾಯ ಹೇಗೆ ರೂಪಗೊಂಡು ಬೆಳೆಯಿತು, ಪುರಾಣಗಳ ಕಾಲಕ್ಕೆ ಯಾವ ರೂಪ ತಾಳಿತು ಎಂಬುದನ್ನು ಕುರಿತು ಸುಮಾರು ಎರಡು ಗಂಟೆಯ ಕಾಲ ಎಲ್ಲರಿಗೂ ಮನದಟ್ಟುವಂತೆ, ಶ್ರದ್ಧೆ ಊರುವಂತೆ, ಯಾವ ಸಂಗತಿಗೂ ಯಾರ ಮನಸ್ಸೂ ನೋಯದಂತೆ ಮಾತನಾಡಿದರು. ಮರುದಿನ ಅಲ್ಲಿಂದ ಮಹಾಕೂಟ, ಬನಶಂಕರಿಗಳಿಗೆ ಹೋಗುವುದಕ್ಕಾಗದೆ ಬೆಂಗಳೂರಿಗೆ ಹಿಂದಿರುಗ ಬೇಕಾಯಿತು. ಇಂಥ ಪ್ರಸಂಗಗಳಲ್ಲಿ ಕನ್ನಡನಾಡಿನ ಚರಿತ್ರೆ, ಚಿತ್ರ, ಶಿಲ್ಪ, ಧರ್ಮ, ಸಂಪ್ರದಾಯ, ಈಚಿನ ಕಾಲದ ರಾಜಕೀಯ ಜೀವನದ ವಿವರಾಂಶಗಳು ಅವರ ಮನಸ್ಸಿನಲ್ಲಿ ಹೇಗೆ ಜಾಗೃತವಾಗಿರುತ್ತಿದ್ದವು ಎಂಬುದನ್ನು ಕಾಣಿಸಲು ಇದನ್ನು ತಿಳಿಸಿದ್ದೇನೆ. ಪ್ರೊಫೆಸರಾಗಿ ವಿಶ್ರಾಂತಿ ಪಡೆದ ಮೇಲೆ ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಮೊದಲು, ಆಮೇಲೆ ಇತರ ಒಂದೆರಡು ಕಡೆ ಅಜಂತ ಎಲ್ಲೋರಗಳ ಚಿತ್ರಪ್ರರ್ಶನಗಳನ್ನು ಉದ್ದಕ್ಕೆ ಎಪಿಡಿಯೊಸ್ಕೋಪ್ ಮೂಲಕ ಮೆರಸಿ, ಅಲ್ಲಿನ ಕಲಾ ಪ್ರಪಂಚ, ಕಾಲ ಜೀವನದ ಆವರಣ, ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರದ ಶಿವದೇವಾಲಯಗಳ ವಾಸ್ತುವೈಭವಗಳನ್ನು ಕುರಿತು ಭಾಷಣ ಮಾಡಿದರು.

*　　　　*　　　　*

ಬಳ್ಳಾರಿ ಸಮ್ಮೇಳನದಲ್ಲಿ ಕರ್ನಾಟಕ- ಕರ್ಣಾಟಕ (ನ, ಣ ವಾದ 'ನೊಣ' ಆದ್ದುಂಟು)- ಬಗೆಗೆ ದೇಶದ ಮೇಲೆಲ್ಲ ವಿಚಿತ್ರವಾದ ಉದ್ವೇಗ- ಕೆಲವೇಳೆ ಲೇವಡಿ- ಬೆಳೆದಾಗ ಪರಿಷತ್ತಿನ ಸಕಲ ಸದಸ್ಯ ಸಮ್ಮೇಳನದಲ್ಲಿ ಅದು ಚರ್ಚೆಗೆ ಬಂದಿತು. ಬಹುಮಟ್ಟಿಗೆ ಅಷ್ಟು ದೊಡ್ಡ ಸಕಲ ಸದಸ್ಯ ಸಭೆ ಹಿಂದೆ ಸೇರಿರಲಿಲ್ಲ: 'ಶ್ರೀ'ಯವರ ಬೆಂಬಲಕ್ಕಾಗಿ ಎಂಬಂತೆ ಮೈಸೂರು ಕನ್ನಡಿಗರು, ಪರಿಷತ್ತಿನ ಹೊಸಿಲಮೇಲೆ ಹಿಂದೆಂದೂ ನೆರಳು ಕವಿಸದ ಹಲವರು ಬಂದಿದ್ದರು. ಆ ಸಲದ ಅಧ್ಯಕ್ಷರು ಶ್ರೀ ಆರ್.ಆರ್. ದಿವಾಕರ್.

ಆಗ ಪರಿಷತ್ತಿನ ಅಧ್ಯಕ್ಷರು ಶ್ರೀಮದ್ಯುವರಾಜರು; ಅದು ಗೌರವದ ಸ್ಥಾನ: ಅವರು ಅಲ್ಲಿಗೆ ಸುಳಿದುದಿಲ್ಲ. ವಾದಗಳು ಹೆಚ್ಚು ಬಿರುಸಿನವಲ್ಲವಾದರೂ ಪರಿಷತ್ತು ತೀರ್ಮಾನಮಾಡಿದ ಮಾರ್ಪಾಡಿಗೆ ಒಪ್ಪಿಗೆಯೇನೊ ಬಂದಿತು. ಈ ತೀರ್ಮಾನ ಆದ ಮೇಲೆ ಒಬ್ಬರು 'ಕನ್ನಡ' ಎಂದು ಕರೆದುಬಿಡೋಣ ಎಂಬ ಹೊಸ ನಿರ್ಧಾರವನ್ನು ತಂದರು. ಬಹುಶಃ ಶೀ ಕೈವಾರ ರಾಜಾರಾಯರು. ಅದಕ್ಕಾಗಿ ಪುನಃ ಅಭಿಪ್ರಾಯವನ್ನು ಸಂಗ್ರಹಿಸಿದಾಗ ನಾನು ಪಕ್ಕದಲ್ಲಿದ್ದ ಹಿರಿಯರೊಬ್ಬರಿಗೆ ಹೇಳಿದೆ: "ಈಗ ಇದನ್ನು ತರುವುದು ಸರಿಯಲ್ಲ; ಕ್ರಮವಲ್ಲ; ಇದನ್ನು Amendment ಆಗಿ ಮೊದಲೇ ತಂದು, ಅದು ತೀರ್ಮಾನವಾಗಿ, ಪರಿಷತ್ತಿನ ಮುಖ್ಯಸಭೆಯ ಅನುಮತ ಕೇಳಿದ್ದರೆ ಸರಿಯಾದ ಕ್ರಮವಾಗುತ್ತಿತ್ತು. ವಾಗ್ವಾದ ಬೆಳೆದದ್ದು ಈಗ ತಾನೇ ತೀರ್ಮಾನವಾಗಿದೆ. ಈ ಇನ್ನೊಂದನ್ನು ತಂದು ಅದನ್ನು ಸರ್ವಾನುಮತದಿಂದ ಅಂಗೀಕರಿಸಸುವುದು ಯುಕ್ತವಾಗುವುದಿಲ್ಲ. ನೀವು ನ್ಯಾಯಶಾಸ್ತ್ರವನ್ನು ರಾಜ್ಯಾಂಗ ವಿಧಾನವನ್ನು ಬಲ್ಲವರು, ಪಾರ್ಲಿಮೆಂಟಲ್ಲಿ ಕೆಲಸ ಮಾಡಿದವರು. ಇಂಥುದನ್ನು ನಾವು ಈಗ ಅನುಮೋದಿಸುವುದೂ ಸೂಕ್ತವಲ್ಲ, ಬೇಕಾದರೆ ಇನ್ನೊಂದು ಸಭೆಯನ್ನು ಇದಕ್ಕಾಗಿಯೇ ಕರೆಯೋಣ" ಎಂದೆ. 'ಶ್ರೀ'ಯವರೂ ಬಿ.ಎಲ್.ಪಾಸು ಮಾಡಿದವರೇ. ಅವರ ಮನಸ್ಸಿನಲ್ಲಿ 'ಕನ್ನಡ'ಕ್ಕೇ ಪಕ್ಷಪಾತವಿದ್ದುದರಿಂದ ಯಾವ ಆಕ್ಷೇಪಣೆಯನ್ನೂ ತೆಗೆಯದೆ ಒಪ್ಪಿಕೊಂಡು ಬಿಟ್ಟಿದ್ದರು.೩೩ ಅಭಿಮತಕ್ಕೆ ಹಾಕಿದಾಗ ಯಾತಕ್ಕೆ ಮೊದಲು ಅಭಿಮತ ಕೇಳುತ್ತಾರೊ ಎಂಬ ಸಂದರ್ಭದಲ್ಲಿ ಸಿ.ಕೆ. ವೆಂಕಟರಾಮಯ್ಯನವರೂ ನಾನೂ ಎರಡಕ್ಕೂ ವೋಟು ಮಾಡದೆ ಇದ್ದೆವು. ವೆಂಕಟರಾಮಯ್ಯನವರು ಆಗಲೂ ಕಾರ್ಯದರ್ಶಿಯೊ ಅಲ್ಲವೊ ನೆನಪಿಲ್ಲ. ನಾನು ಕೋಶಾಧಿಕಾರಿ. ನನಗೆ ತಾತ್ವಿಕವಾಗಿ ಅದು ಸರಿಯಲ್ಲವೆನಿಸಿತ್ತು. ಆದರೆ ಸರ್ವಾನುಮತ ಸೂಚಿಸುವ ಚಪ್ಪಾಳೆ ಬಂದು ಕನ್ನಡಕ್ಕೆ ವಿಶ್ವಾಸ ದಕ್ಕಿತು. ರಂಗಪ್ಪ ಭೀ.ಪೋತದಾರರೂ ಶ್ರೀ ಕೈವಾರ ರಾಜಾರಾಯರೂ ಈ ನಿರ್ಣಯಕ್ಕೆ ಯತ್ನಿಸಿದರು.

ಈ ಮುಂಚೆ ಒಂದು ಸಣ್ಣ ಸಂಗತಿ ನಡೆದಿತ್ತು. ನಮ್ಮ ವಸಂತೋತ್ಸವ ಸಮಯದಲ್ಲಿ ನಿಯಾನ್ ಬೆಳಕನ್ನು ಹಾಕಿಸಬೇಕೆಂದೂ ಅದರ ವೆಚ್ಚವನ್ನು ಯಾರೊ ಕೊಡುತ್ತಾರೆಂದೂ ನಿರ್ಣಯವಾಗಿತ್ತು. ಸಂಜೆ ಆರು ಗಂಟೆಯ ಒಳಗಾಗಿ ಅದು ಬೆಳಗಬೇಕು! ಅದನ್ನು ರೂಪಿಸಬೇಕಾಗಿದ್ದವರು ಎಂ.ಎ.ಟಿ. ಶ್ರೀನಿವಾಸನ್ ಅವರು. 'ಣ' ಬೇಕಾದರೆ ೫–೬ ಸುರುಳಿಗಳು ಬೇಕಾಗುತ್ತವೆ; ಅಷ್ಟು ವಕ್ರನಳಿಗೆಗಳು ಆಗಬೇಕಾದರೆ ಹೆಚ್ಚು ಕಾಲ ಹಿಡಿಯುತ್ತದೆ;– ನಾಳೆಯವರೆಗೂ ಬಹುಶಃ. 'ನಾ' ಬೇಕಾದರೆ ಈಗಲೇ ಹಾಕುತ್ತೇನೆ ಎಂದರು ಅವರು. 'ಶ್ರೀ'ಯವರು ಅದಕ್ಕೆ ಒಪ್ಪಿದರು. ಬಹುಜನಕ್ಕೆ– ಕಡೆಗೆ ಸಲಹಾ ಸಮಿತಿಯವರಿಗೆ ಕೂಡ– ಈ ಸಂಗತಿ ತಿಳಿದಿರಲಿಲ್ಲ. ಸರಕಾರದಲ್ಲಿ ರಿಜಿಸ್ಟರ್ ಆದ ಒಂದು ಸಂಸ್ಥೆಗೆ ಈ ಮಾರ್ಪಾಟನ್ನು ತಂದು ಎರಡನೆಯ ದಿನದಿಂದಲೇ ನಮ್ಮ ಕಾಗದಪತ್ರಗಳ (Letter Heads) ನಿರ್ವಹಣೆಗಾಗಿ ಬಳಸುವ ವಿಳಾಸದ ಕಾಗದಗಳ ಮೇಲಿನ ಅಚ್ಚೂ 'ಣಾ'ಕ್ಕೆ ಬದಲು 'ನಾ'ನೇ ಬಿತ್ತು. ಇದು ಸಂಪ್ರದಾಯಸ್ಥರಿಗೆ. ಸಂಸ್ಕೃತದವರಿಗೆ, ರಿಜಿಸ್ಟ್ರೇಷನ್ ನೇಮಪರಿಪಾಲನೆಯ ಬುದ್ಧಿಯವರಿಗೆ, ಇತರ ಅನೇಕರಿಗೆ ಅಸಮಾಧಾನ ತಂದು ದೊಡ್ಡ ಆಂದೋಲನದಂತಹ ಆಂದೋಲನ ನಡೆದಿತ್ತು. ೩೪ ಇಲ್ಲಿ ಬರಿಯ ಪಾಣಿನಿ ಸೂತ್ರದನಿಯಂತ್ರಣವಲ್ಲ, ಮುಖ್ಯ; 'ಕರ್ನಾಟಕ' ಎಂಬ ಶಬ್ದನಿಷ್ಪತ್ತಿ ಭಾಷಾಚರಿತ್ರೆಗೆ ಸಂಬಂಧಿಸಿದ್ದು. ಕರ್, ಕರು, ಕರಿ, ಕನ್, ಕಂ– ಎಂಬ ಗುಣವಾಚಿಗಳಿಂದ ಅದು ನಿಷ್ಕರ್ಷೆಗೊಳ್ಳಬೇಕಾಗಿತ್ತು. ಜೊತೆಗೆ, 'ಟ' ವರ್ಗವೇ ಸಂಸ್ಕೃತದಲ್ಲಿ ಕೂಡ 'ತ'ವರ್ಗದಿಂದ ಉತ್ಪನ್ನ; ಅದರಲ್ಲಿನ ಶಬ್ದಗಳು ಸಂಖ್ಯೆಯಲ್ಲಿಯೂ ಕಡಮೆ ಎಂಬ ವ್ಹಿಟ್ನಿ ವಾದ ಇತ್ತು. ಆ ಭಾಗ ಪರಿಶೀಲನೆಗೆ ಬರಲಲಿಲ್ಲ. ಶ್ರೀ ರಾಜರತ್ನಂ ಅವರು ಆ ಬಗ್ಗೆಯ ಚರ್ಚೆಯಲ್ಲಿ ಒಂದು ಲೇಖನವನ್ನು ಬರೆದಿದ್ದರು. 'ನ'ದ ಪರವಾಗಿ 'ಣ,ನ್', 'ಣ್ಣ,ನ್',– ಇತ್ಯಾದಿ ಎಂದು ಶಾಸನಗಳಿಂದ ನಿದರ್ಶನಗಳು ಬಂದಿದ್ದವು. ಇಷ್ಟು ಸಣ್ಣ ವಿಷಯಕ್ಕೆ ಪರಿಷತ್ತಿನಂತಹ ಸಂಸ್ಥೆ ಏಕೆ ಈ ಗದ್ದಲ ಹೊತ್ತಿಸಿ ಕೊಂಡಿದೆ!– ಎಂದು ಲೇವಡಿಗಳು ಹುಟ್ಟಿದ್ದವು. ಆದುದರಿಂದಲೇ ಸಕಲ ಸದಸ್ಯ ಸಭೆಯಲ್ಲಿ ಈ ವಿಷಯವನ್ನು ಇಟ್ಟುಕೊಂಡದ್ದು. ಯಾರಾದರೂ ಒಬ್ಬರು ಈ ಹೆಸರು ಬದಲಾವಣೆ ಅಕ್ರಮ, ಇಲ್ಲಿ ನಡೆದಿರುವುದೆಲ್ಲ ನ್ಯಾಯಬಾಹಿರ– ಎಂದು ನ್ಯಾಯಶಾಲೆಗೆ ಆಮೇಲೆ ತೆಗೆದುಕೊಂಡು ಹೋಗಿದ್ದರೆ ತುಂಬಾ ರೇಜಿಗೆಗೆ ಇಟ್ಟುಕೊಳ್ಳುತ್ತಿತ್ತು. ಪರಿಷತ್ತಿನ ಅದೃಷ್ಟದಿಂದ ಅದು– ಬಹುಶಃ ಈವರೆಗೂ– ನಡೆಯಲಿಲ್ಲ.

ಜಮಖಂಡಿ ಸಮ್ಮೇಳನದಲ್ಲಿ ಗುಂಡಪ್ಪನವರು ತಮ್ಮನ್ನು ಉಪಾಧ್ಯಕ್ಷ ಪದವಿಯಿಂದ ಬಿಡುಗಡೆ ಮಾಡಿಕೊಡಬೇಕೆಂದು ಹಿಂದೆ ಬಹು ಮುಂಚೆಯೇ ಪ್ರಾರ್ಥನೆ ಮಾಡಿದ್ದರು. ಬೆಂಗಳೂರಿನಲ್ಲೆ ಇಬ್ಬರು ಮುಂದಾಗಿ 'ಶ್ರೀ'ಯವರನ್ನು ಒಪ್ಪಿಸಿ, ಅವರು ಆ ಪದವಿಯನ್ನು ಒಪ್ಪಬೇಕೆಂದು ಹೇಳಿಕೊಂಡಿದ್ದು, ಅವರ ಸಮ್ಮತಿಯನ್ನು ಪಡೆದು, ಸಮ್ಮೇಳನ ಮುಗಿದ ಮೇಲೆ ಸಕಲಸದಸ್ಯರ ಸಭೆ ನಡೆಯಬೇಕಿದ್ದ ದಿನ ಬೆಳಗ್ಗೆ ಅಲ್ಲಿಗೆ ಬಂದು, ಸಭೆಯಲ್ಲಿ ಇದನ್ನು ಎತ್ತಿದರು. ಒಂದು ಗೋಜಾಗಬಹುದಿದ್ದುದನ್ನೂ, ಗಂಡಪ್ಪನವರ ಮತ್ತು 'ಶ್ರೀ'ಯವರ ನಡುವೆ ಉಂಟಾಗಬಹುದಾಗಿದ್ದ ವಿರಸವನ್ನೂ ಇಬ್ಬರ ಹಿರಿಮೆಯಿಂದ ತಕ್ಕ ಸಮರಸದಿಂದ ನಿವಾರಿಸಲಾಯಿತು. ನಿವಾರಿಸಬೇಕಾದ ಅಗತ್ಯವೇ ಬೀಳಲಿಲ್ಲ.

(೩೩ ಇಂಥ ಸಂದರ್ಭಗಳಲ್ಲಿ ಆಕ್ಷೇಪಣೆಗಳ ಮುಳ್ಳು ಮುರಿವಂತೆ ತೀರ್ಮಾನವಾಗದಿದ್ದಲ್ಲಿ ಅವರು ಕೆಲವು ವೇಳೆ ನಮಗೆ ಕೊಟ್ಟಿದ್ದ ನಿರ್ದೇಶಕ್ಕೆ ವಿರುದ್ಧವಾಗಿ ಸಮರಿಸಿಕೊಂಡು ಬಿಡುತ್ತಿದ್ದುದುಂಟು. ಮತದವರೆಂದು ಅಪಕೀರ್ತಿ ಪಡೆದವರಿಗೂ ಇದು ಕೆಲವೇಳೆ ಕ್ಲೇಶಕರವೇ ಆಗುತ್ತಿತ್ತು.)

ಒಂದು ಸಂದರ್ಭದಲ್ಲಿ ಪರಿಷತ್ತಿನ ಅಚ್ಚುಕೂಟದ ನಿರ್ಮಾಣಕ್ಕಾಗಿ 'ಶ್ರೀ' ಯವರು ಮೊದಲು ಒಂದು ಸಾವಿರ ರೂಪಾಯಿಗಳ ನೆರವು ಹಣ ಕೊಟ್ಟಿದ್ದರೂ ಅಚ್ಚುಕೂಟಕ್ಕೆ ಮೂಲಧನವಾಗುವಂತೆ ಐದು ಸಾವಿರ ರೂಪಾಯಿಗಳ ದೇಣಿಗೆಯನ್ನು ಕೊಟ್ಟರು. ನಾನು ೧೯೩೪ ರಿಂದ ಸು.೧೯೪೧–೪೨ರ ವರೆಗೆ ಹಣ ಸಂಪತ್ತಿ ಇಲ್ಲದ ಪರಿಷತ್ತಿಗೆ ಕೋಶಾಧಿಕಾರಿ. ಹಣ ಸಲ್ಲಿಸಿ ಶ್ರೀ ಪುಟ್ಟಯ್ಯನವರನ್ನು

ಮದರಾಸಿಗೆ ಕಳಿಸಿ ಒಳ್ಳೆಯ ಅಚ್ಚಿನ ಯಂತ್ರವನ್ನು ತರಿಸತಕ್ಕದ್ದೆಂದು 'ಶ್ರೀ' ತಿಳಿಸಿದ್ದರು. ಆ ಸಲಹೆ ಸೂಕ್ತವೇ. ಆದರೆ ಅಚ್ಚುಕೂಟದ ವ್ಯವಸ್ಥೆಯನ್ನು ಕ್ರಮಪಡಿಸಿದ ಮೇಲೆ ಇದನ್ನು ಮಾಡೋಣವೆಂದು ಆ ಸಮಯದಲ್ಲಿ ಒಂದು ಮೀಟಿಂಗಲ್ಲಿ ನಾನು ತಡೆದಿದ್ದೆ. ಕೆಲವು ದಿನಗಳಲ್ಲೇ ನಾವು ಉಡುಪಿಯ ಕಡೆ ಹೋಗಬೇಕಾದಾಗ ಶಿವಮೊಗ್ಗೆಯಲ್ಲಿ ಭಾಷಣ ಮುಗಿಸಿಕೊಂಡು. ತೀರ್ಥಹಳ್ಳಿಯಲ್ಲಿ ಸಬ್‌ರಿಜಿಸ್ಟ್ರಾರ್ ಆಗಿದ್ದ ಶ್ರೀ ಡಿ. ಕೃಷ್ಣಯ್ಯಂಗಾರ್ಯರ ಆತಿಥ್ಯವನ್ನು ಸವಿದು. ಆಗುಂಬೆಗೆ ಹೋಗಿ ನಮ್ಮ ಸಾಗಣೆಗೆ ವ್ಯಾನ್ ಬರುವುದಕ್ಕಾಗಿ ಕಾದಿದ್ದೆವು. ಆ ಸಮಯದಲ್ಲಿ 'ಶ್ರೀ'ಯವರು ನನ್ನನ್ನು ಕುರಿತು ಒಂದೆರಡು ಮಾತು ಹೇಳಿದರು; "ನಾನು ಶ್ರೀಮಂತನಲ್ಲ; ನನ್ನ ಮೋಟರ್ ಕಾರನ್ನು ಬದಲಾಯಿಸಿ ಎಂದು ಎಷ್ಟೋ ಜನ ಹೇಳಿದ್ದಾರೆ. ಅದು ಸರಿಯಾಗಿ ಕೆಲಸ ಮಾಡುತ್ತಿರುವಾಗ ಟಿನ್ ಮೇಲೆ ಹೆಚ್ಚುಹಣ ಸುರಿಯುವುದೇಕೆ ಎಂದುಕೊಂಡಿದ್ದೇನೆ. ಈ ಮನುಷ್ಯನ ಮನಸ್ಸು ಕೃಪಣ! ಅದರಂತೆಯೇ ಅವರ ಕಾರಿದೆ!– ಎಂದು ಕೂಡ ಅಣಕಿಸಿದ್ದಾರೆ. (ಇದು ಅವರಿಗೆ ನೋವುಂಟು ಮಾಡಿತ್ತು: ಅದನ್ನೂ ಹೇಳಿದ್ದರು.) ಒಬ್ಬ ಮಗಳು ಸಣ್ಣ ವಯಸ್ಸಿನಲ್ಲಿ ಜೊತೆ ಕಳೆದುಕೊಂಡು ಕಷ್ಟದಲ್ಲಿದ್ದಾಳೆ. ನನಗೆ ತಾಯಾಗಿ, ಹೊಟ್ಟೆಯ ಮಗಳಾಗಿ ನನ್ನನ್ನು ನೋಡಿಕೊಳ್ಳುತ್ತಿದ್ದಾಳೆ. ಎಷ್ಟು ಆಕೆಯ ಬಗೆಗೆ ಸಮಾಧಾನ ಮಾಡಿಕೊಂಡರೂ ಆಕೆಯನ್ನು ನೋಡಿದಾಗಲೆಲ್ಲ, ನೆನಸಿಕೊಂಡಾಗಲೆಲ್ಲ ಆ ಮಗುವಿನ ನೋವು ತಟ್ಟುತ್ತದೆ. ನೀವು ಬಲ್ಲಿರಿ. ಇನ್ನೊಬ್ಬ ಮಗ ಪೂರ್ತಿ ಕಣ್ಣುಕಾಣದ ಸ್ಥಿತಿಯಲ್ಲಿದ್ದಾನೆ. ಅವರಿಗೆ ಅಲ್ಪಸ್ವಲ್ಪ ಉಳಿಸಬಹುದು. ಅದಕ್ಕೆ ಏನೋ ಏರ್ಪಾಡು ಮಾಡಿದ್ದೇನೆ. ಪರಿಷತ್ತಿನ ಅಚ್ಚು ಕೆಲಸ ಹೆಚ್ಚಾಗಿ ನಡೆಯ ಬೇಕಾಗಿದೆ. ಆದರೆ ಕೈಯಲ್ಲಿ ಹಣವಿಲ್ಲ. ಬೆಂಗಳೂರು ಪ್ರೆಸ್ಸಿಗೆ ಕಾದುಕೊಂಡು ನಗದು ಹಣ ತೆರುವುದು ಕಷ್ಟಕರ. ಅದಕ್ಕೇ ಒಂದು ಅಚ್ಚುಕೂಟವನ್ನು ಮಾಡಿಕೊಂಡರೆ ಸುಲಭವಾಗುತ್ತದೆ. ಇನ್ನಷ್ಟು ಕಾರ್ಯಗಳನ್ನೂ ಮಾಡಬಹುದು,– ಇತರರಿಗೆ ಕಾಯದೆ, ತಡವಾಗದೆ. ಈ ಏರ್ಪಾಡಿಗೆ ನೀವೇ ಏಕೆ ಅಡ್ಡ ಬರುತ್ತೀರಿ?" ಎಂದರು. ನಾನು ಅವರಿಗೆ ವಿನಯದಿಂದ ಒಂದು ಮಾತು ಹೇಳಿದೆ:" ಈ ತರುವಾಯ ಯಾರು ಉಪಾಧ್ಯಕ್ಷರಾಗುತ್ತಾರೊ ಕಾರ್ಯದರ್ಶಿಗಳಾಗುತ್ತಾರೊ ಅಚ್ಚುಕೂಟದ ಮ್ಯಾನೇಜರ್ ಆಗುತ್ತಾರೊ– ಅವರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕೊಂಡು ಖರ್ಚು ತೆರದಾದರೆ ಅಥವಾ ತಡಮಾಡಿದರೆ ಅಚ್ಚುಕೂಟದ ಪಾಡೇನು? ಪರಿಷತ್ತಿನ ಕೆಲಸಕ್ಕೆ ಹಣ ಸಂದಾಯವಾಗುವುದಿಲ್ಲ. ಅದು ಲೆಕ್ಕದ ಪುಸ್ತಕಗಳಲ್ಲಿ ವರ್ಗಾವಣೆಯಾಗುವ ವಿಚಾರ; ಚೆನ್ನಾಗಿ ಕೆಲಸ ಮಾಡಿದರೆ ಹೊರಗಡೆಯಿಂದಲೂ ಬೇಕಾದಷ್ಟು ಕೆಲಸವನ್ನು ತೆಗೆದುಕೊಂಡು ಹಣಸಂಪಾದಿಸಿ ಆ ಲಾಭದಿಂದ ಪರಿಷತ್ತಿನ ವೆಚ್ಚವನ್ನು ಕೂಡ ತೂಗಿಸಬಹುದು; ಅದಕ್ಕೆ ತಕ್ಕಂತೆ ಒಂದು ಪ್ರತ್ಯೇಕ ಕಾರ್ಯ– ಸಲಹಾ– ಸಮಿತಿಮಾಡಿ. ಪರಿಷತ್ತಿನ ಕಡೆಯಿಂದ ಒಬ್ಬರು, ಅಚ್ಚುಕೂಟದ ನಿರ್ದೇಶಕರು– ಇನ್ನಾರಾದರೂ ಒಬ್ಬರು, ನಿಮ್ಮ ತರುವಾಯ ನಿಮ್ಮ ಪ್ರತಿನಿಧಿಗಳೊಬ್ಬರು, ಎಂದು ನಿರ್ಣಯಿಸಿ, ಕ್ರಮವಾದ ಒಡಂಬಡಿಕೆ ಮಾಡಿಕೊಂಡು, ಅದನ್ನು ನಿರ್ವಹಿಸೋಣ ಎಂದು ತಡೆದೆನೇ ಹೊರತು ನಿಮ್ಮ ಹಣಕ್ಕೆ ಬೆಲೆ ಇಲ್ಲ ಎಂಬುದರಿಂದಲ್ಲ. ಪರಿಷತ್ತಿಗೆ ಅಚ್ಚುಕೂಟದ ಅಗತ್ಯ ಎಷ್ಟೆಂದು ನಾನು ಬಲ್ಲೆ. ಸಂಪಾದನೆ ಆಗಲಿ, ಬಿಡಲಿ, ಯಂತ್ರಕ್ಕೆ ದುಡ್ಡು ಕೊಡುತ್ತಿರಬೇಕು; ಅಚ್ಚು ಮೊಳೆ ಕಾಗದ ಮಸಿ ಕೊಳ್ಳಲು, ಮೊಳೆ ಜೋಡಿಸುವವರಿಗೆ, ಅಚ್ಚು ಮಾಡುವ ಕುಶಲಕರ್ಮಿಗಳವರಿಗೆ, ಕೆಲಸ ಮಾಡುವ ಇತರ ಗುಮಾಸ್ತರಿಗೆ, ಬಾಲ್‌ಬಾಯ್ಸ್‌ಗೆ ಕಡ್ಡಾಯವಾಗಿ ತಿಂಗಳು ತಿಂಗಳು ತಪ್ಪದೆ ಹಣ, ಸಂಬಳ ಕೊಡಬೇಕು. ಅದು ಕಡ್ಡಾಯವಾಗಿ ಮೊದಲು ಮಾಡಬೇಕಾದ ವೆಚ್ಚ. ಅಷ್ಟೂ ದುಡಿಯದಾದರೆ ಹೂಡಿದ ಹಣ ಸರಿಯಾದ ವರಮಾನ ತರುವುದಿಲ್ಲ. ಇದನ್ನು ದಯಮಾಡಿ ಮೊದಲು

– – –

(ಇಳ ಕಡೆಗೆ ಡಿ. ವಿ. ಜಿ.ಯವರಿಗೆ, ಬೆಳ್ಳಾವೆಯವರಿಗೆ ಕೂಡ ಇದು ಒಪ್ಪಿತವಾಗಲಿಲ್ಲ. ಬೆಳ್ಳಾವೆಯವರು ಈ ಬಗೆಗೆ ಬೆಂಗಳೂರು ಪ್ರೆಸ್ಸಿನಲ್ಲಿ ಒಂದು ಲೇಖನವನ್ನು ಅಚ್ಚುಮಾಡಿಸಿ ಹಂಚಿದ್ದರು. ಸಂಸ್ಕೃತ ವ್ಯಾಕರಣ ಪಂಡಿತರು 'ಶ್ರೀ' ಯವರನ್ನು ಸಭೆಯೊಂದಕ್ಕೆ ಕರೆದು ಮೂದಲೆ ಎತ್ತಿ ವ್ಯಾಕರಣ ಪ್ರಕಾರ 'ರ್' ಇರುವಲ್ಲಿ 'ನ್' ಸೇರಿದಾಗ 'ಣ್' ಆಗಬೇಕಲ್ಲವೆ ಇತ್ಯಾದಿ ನಿಂದಿಸಿದರು. ಇದು ಇನ್ನೊಂದು ನುಡಿಗಟ್ಟು ತನ್ನ ಮೂಲ ರೂಪವನ್ನು ಉಳಿಸಿಕೊಳ್ಳ ಬಯಸುವ ರೀತಿ ಎಂದರು– ಇವರು.)

ವ್ಯವಸ್ಥೆಮಾಡಿ ಎಂಬ ದೃಷ್ಟಿಯಿಂದ ಮಾತ್ರ ಆ ದಿನ ತಡೆದೆ. ನನ್ನ ನಡೆಯನ್ನು ಕ್ಷಮಿಸಬೇಕು" ಎಂದೆ. ಅದು ಅವರ ಮನಸ್ಸಿಗೆ ಹಿಡಿಸಿತೆನ್ನಿಸಿತು. ನಮ್ಮ ಯಾವ ಸಲಹೆ, ಚರ್ಚೆಗಳೂ ಹೀಗೆ ಒಳಗೆ ನಡೆಯುತ್ತಿದ್ದುವು. . . ಈವರೆಗೂ ಅಂತಹ ಒಂದು ಏರ್ಪಾಡು ನಡೆದಿದೆಯೊ ಇಲ್ಲವೊ ಕಾಣೆ. ಈಗ ಅನಗತ್ಯವಾಗಿರುವುದು ಅದರ ಸೌಭಾಗ್ಯ.

ಇನ್ನೊಂದು ಸಂದರ್ಭ ಹೀಗೆ ನಡೆಯಿತು: ಪರಿಷತ್ತನ್ನು ಹೆಚ್ಚು ಜನಪ್ರಿಯವಾಗಿ ಮಾಡಬೇಕು– ಎಂಬ ಉದ್ದೇಶ ಮೊದಲಿಂದ ಇದ್ದರೂ ಅಲ್ಲಿನ ಸದಸ್ಯರಾದವರು ಸಾಹಿತ್ಯದಲ್ಲಿ ಸ್ವಲ್ಪ ಮಟ್ಟಿಗಾದರೂ ಪರಿಚಯ ಉಳ್ಳವರು, ಕಾರ್ಯ ಮಾಡುವವರು ಆಗಿದ್ದು, ಚೆನ್ನಾಗಿ ತಿಳಿದ ಸಾಹಿತಿಗಳೊಬ್ಬರಿಬ್ಬರ ಸಿಫಾರಸಿನ ಮೇಲೆ ಪ್ರವೇಶಗೊಳ್ಳಬೇಕಿತ್ತು. ಜನಪ್ರಿಯವೆಂದಾಗ ಯಾರಾದರೂ ಆಗಬಹುದು; ಇದು ಸಂಖ್ಯಾಬಲ, ಒಂದು ದೃಷ್ಟಿಯಿಂದ ಸದಸ್ಯರಿಂದ ವರ್ಗಣಿ ಹೆಚ್ಚಾಗಿ ಬರುತ್ತದೆ. ಹೆಚ್ಚು ಜನಕ್ಕೆ ಈ ಹೆಸರು ತಿಳಿಯುತ್ತದೆ ಎಂದಾದರೂ ಯಾವ ಗುಣ, ಧ್ಯೇಯಕ್ಕಾಗಿ ಪರಿಷತ್ತು ಸ್ಥಾಪಿತವಾಯಿತೊ ಅದಕ್ಕೂ ಇದಕ್ಕೂ ತಾಳಿಕೆಯಾಗದಿರಬಹುದು. ಹೆಚ್ಚು ಜನಗಳನ್ನು ಸೇರಿಸಿಕೊಳ್ಳಬೇಕು, ಅವರ ಅಭಿಮತದಿಂದ ಸಕಲಸದಸ್ಯ ಸಮ್ಮೇಳನಗಳು ಅಧ್ಯಕ್ಷರನ್ನು ಆಯಬೇಕು ಎಂಬುದು 'ಶ್ರೀ'ಯವರಿಗೂ ಇದ್ದ ಇಷ್ಟ. ಒಮ್ಮೆ ಕೊನೆಯ ಸಮಯದಲ್ಲಿ ಸುಮಾರು ರೂಪಗೊಂಡಿತು. ಆವರೆಗೆ ರಾಜರೊ ಶ್ರೀಮಂತರೊ ಅಧ್ಯಕ್ಷರಾಗಿದ್ದುಕೊಂಡು ಗೌರವ ಸ್ಥಾನದಲ್ಲಿ ಇರುತ್ತಿದ್ದರು. ಕಾರ್ಯ ಮಾಡುವವರು ಉಪಾಧ್ಯಕ್ಷರು. ಸಾಹಿತ್ಯ ಪ್ರಪಂಚದಲ್ಲಿ ಗಣ್ಯರಾದ ಹಿರಿಯರು. ಸಂಖ್ಯಾಬಲ, ಆಯ್ಕೆ ಎನ್ನುವುದು ಬಂದ ಕೂಡಲೆ ಅದರ ಸ್ವರೂಪ ಲಕ್ಷಣ ಬದಲಾಯಿಸಿತು. ಅಧ್ಯಕ್ಷರೇ ಆಯ್ಕೆಯಾದವರೆಂದ ಮೇಲೆ! ಕಷ್ಟ ಬಂದುದು ಹೀಗೆ: ಅಧ್ಯಕ್ಷರು ಬೆಂಗಳೂರಲ್ಲಿ ಇರುವವರಾಗಿರಬೇಕು; ಕಟ್ಟಡ, ಮುಖ್ಯ ಕಚೇರಿ ಇಲ್ಲಿವೆಯಾದುದರಿಂದ. ಈ ಸಂಗತಿ ಮೊದಲಿಂದ ಅಸಮಾಧಾನಕ್ಕೆ ಕಾರಣವಾಗಿತ್ತು. ಆಲೂರು ವೆಂಕಟರಾಯರಂಥವರು ನಾಲ್ಕಾರು ಕಾರಣಗಳಿಂದ ಇದು 'ಬೆಂಗಳೂರು ಸಾಹಿತ್ಯ ಪರಿಷತ್ತು' ಎಂದು ಹೀಗಳೆಯುತ್ತಿದ್ದರು. ಇನ್ನೊಂದು ಸಮಯದಲ್ಲಿ ಸಮ್ಮೇಳನದ ಅಧ್ಯಕ್ಷರಾಗಬೇಕಾದವರು ಪರಿಷತ್ತಿನ ಸದಸ್ಯರಾಗಿರತಕ್ಕದ್ದು; ಅವರ ಹೆಸರನ್ನು ಸೂಚಿಸುವ ಮುಂಚೆ ಅವರ

ಅಭಿಮತವನ್ನು ಪಡೆದುಕೊಂಡಿರಬೇಕು; ಅಭಿಮತ ಪತ್ರಗಳನ್ನು ಎಣಿಸುವಾಗ ಅವರ ಕಡೆಯವರೊಬ್ಬರು ಎದುರಿಗೆ ಇರಬೇಕು ಎಂಬಂತಹ ಮಾತು ಬಂದವು. ಇದು ಪರಿಷತ್ತಿನ ಪ್ರಪಂಚವನ್ನು ಜನತಾರಂಗ ಅಥವಾ ರಾಜಕೀಯ ರಂಗವನ್ನಾಗಿ ಮಾಡುವ ಪ್ರಯತ್ನವಲ್ಲದೆ ಬ್ರಿಟಿಷ್ ಅಕಾಡೆಮಿ ಅಥವಾ ರಾಯಲ್ ಅಕಾಡೆಮಿಯಂತೆ ಸಾಧಿಸಬೇಕೆಂದಿದ್ದ ಹಿಂದಿನ ಆದರ್ಶ ಮಸುಳಿಸಿದಂತೆ ಎನ್ನಿಸಿತು– ನಮ್ಮಲ್ಲಿ ಕೆಲವರಿಗೆ. ಹಾಗೆಯೇ ಕನ್ನಡಕ್ಕೆ ದೀರ್ಘಕಾಲ ತಮ್ಮ ಬದುಕನ್ನು ಮೀಸಲು ಮಾಡಿ ಕೆಲಸ ಮಾಡಿದ್ದವರು, ದೊಡ್ಡ ಪ್ರೋತ್ಸಾಹ ಕೊಟ್ಟಿದ್ದವರು, ಪದವಿಗೆ ಆಸೆ ಇಲ್ಲದವರನ್ನು ಕರೆದು ಅವರಿಗೆ ಇಷ್ಟವಿಲ್ಲದಿದ್ದರೂ ಅವರನ್ನು ಒಪ್ಪಿಸಿ, ದೇಶ ಅವರ ಕಾರ್ಯಕ್ಕೆ ಕೃತಜ್ಞವಾಗಿದೆ ಎಂದು ಸಮ್ಮೇಳನದ ಗೌರವವನ್ನು ಸಲ್ಲಿಸುವ ಸಂದರ್ಭವಾಗಬೇಕು; ಹೇಗಿದ್ದರೂ ಪರಿಷತ್ತಿನ ಕಾರ್ಯಕಾರಿ ವರ್ಗ ಅಧಿಕಾರ ಅವರದಲ್ಲ; ಅವರು ಆ ವರ್ಷ ಆಯ್ಕೆಯಾಗುವ ಸನ್ಮಾನ್ಯ ಸದಸ್ಯರು; ಒಂದು ವರ್ಷಕಾಲ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದುಕೊಂಡು ಅವರ ಸಲಹೆಯಂತೆ ಕಾರ್ಯಗಳನ್ನು ನಿರ್ವಹಿಸಲಿ ಎಂಬುದು ಮಾತ್ರ ಉದ್ದಿಷ್ಟ. ಅವರು ಸದಸ್ಯರಾಗಿಯೇ ಇರಬೇಕು; ಹೆಸರ ಸೂಚನೆಗೆ ಅವರ ಅಭಿಮತ ಪಡೆದಿರಬೇಕು ಆಯ್ಕೆಚೀಟಿ ಎಣಿಸುವಾಗ ಅವರ ಪ್ರತಿನಿಧಿ ಇರಬೇಕು ಇತ್ಯಾದಿ ಮಾತನ್ನು ಪಂಜೆಯವರಂಥವರಿಗಾಗಲಿ, ಅರ್. ನರಸಿಂಹಾಚಾರ್ಯರಂಥವರಿಗಾಗಲಿ, ಗೋವಿಂದ ಪೈ ಅಂಥವರಿಗಾಗಲಿ, ಎನ್ ಎಸ್. ಸುಬ್ಬರಾಯರಿಗಾಗಲಿ ಹೇಳುವ ಹಾಗಿರಲಿಲ್ಲ. ಅವರನ್ನು ಕನ್ನಡದ ಕಡೆಗೆ– ಎಂದರೆ ಸಾಹಿತ್ಯ ಪರಿಷತ್ತಿನ ಕಡೆಗೆ– ಒಲಿಸಿಕೊಳ್ಳಬೇಕೆಂಬ ಉದ್ದೇಶ ಪ್ರಮುಖವಾಗಿರಬೇಕೆ ಹೊರತು, ಜೂಜಿನ ಕುದುರೆಗಳಂತೆ ಅವರು ಹೆಸರು ಸಲ್ಲಿಸಿ, ಅಭಿಮತಗಳು ಲೆಕ್ಕವಾಗಬೇಕೆಂಬ ನೋಟವಿರಲಿಲ್ಲ. ನನ್ನ ಅಸಮಾಧಾನವನ್ನು ಸೂಚಿಸಿ "ಇದು ನನ್ನ ಕಲ್ಪನೆಯ ಸಾಹಿತ್ಯ ಪರಿಷತ್ತು ಆಗುವುದಿಲ್ಲ" ಎಂದೆ. ಈಚೆಗೆ ಇನ್ನೊಂದು ಸಂದರ್ಭ ಬೆಳೆದು ಯಾವ ಊರಲ್ಲಿ ಸಮ್ಮೇಳನ ಕರೆಯುತ್ತಾರೊ ಅವರ ಸಲಹಾಮಂಡಲಿ ಸೂಚಿಸಿದವರನ್ನು ಬಹುಮಟ್ಟಿಗೆ ಆಯಬೇಕಾಗುವ ಕೋಮುವಾರು ಅಥವಾ ಮಹಿಳಾವರ್ಗಗಳವರನ್ನು (– ಇದರಲ್ಲಿ ತಪ್ಪೇನೂ ಇಲ್ಲ) ಆಯಬೇಕಾದ ಪ್ರಸಂಗ ಬಂದು, ಪರಿಷತ್ತಿನ ಕೈಕಟ್ಟುತ್ತಿದೆ,– ಅದರ ಸ್ವರೂಪವೇ ಬದಲಾಯಿಸುತ್ತಿದೆಯಾಗಿ. ಅಪರೂಪವಾಗಿ ಪರಿಷತ್ತಿನವರೂ ಆಯ್ಕೆಗೆ ಒಂದೊ ಎರಡೊ ಹೆಸರುಗಳನ್ನು ಸೇರಿಸಿರುವುದುಂಟು. ಸ್ವಾಗತ ಸಮಿತಿಯವರೇ ತೀರ್ಮಾನ ಮಾಡುವ ಸ್ಥಿತಿ ಜನತಂತ್ರದ ಪ್ರಕಾಶಿಕೆ– "ಕಾಲೇ ಕಾಲೇ ನವಾಚಾರ" ಎಂಬಂತೆ.

* * *

'ಶ್ರೀ'ಯವರು ಬೆಂಗಳೂರಿಗೆ ಬಂದ ಮೇಲೆ ನಾನೊ, ಕೆ. ವಿ. ರಾಘವಾಚಾರ್ಯರೊ, ಇಬ್ಬರೂವೊ ಅವರ ಜೊತೆಗಿರಬೇಕಾದ ಪ್ರಸಂಗ ಬರುತ್ತಿತ್ತು.[೩೫] ಅವರಿಗೆ ಸಿಹಿಮೂತ್ರ ರೋಗವಿತ್ತು; ಆದ್ದರಿಂದ

– – –

೩೫ ಎಸ್. ವಿ. ರಂಗಣ್ಣನವರೂ, ಸಿ. ಕೆ. ವೆಂಕಟರಾಮಯ್ಯನವರೂ ಕಾರ್ಯದರ್ಶಿಗಳಾಗಿದ್ದ ಕಾಲದಲ್ಲಿ ಈ ತೊಂದರೆಗಳಿರಲಿಲ್ಲ.

ಊಟಉಪಚಾರವನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಒಂದೊಂದು ಸಲ ತಲೆಸುತ್ತಿ ಬಿದ್ದುಬಿಡುತ್ತಿದ್ದರು; ಅಂಥ ಸಂದರ್ಭದಲ್ಲಿ ನೆರವು ಅವಶ್ಯಕವಾಗುತ್ತಿತ್ತು. ಒಮ್ಮೆ ಬಿದ್ದು ಕಾಲೆಜಿನ ಕೆಲಸಕ್ಕೆ ಹೇಗೆ ಕಟ್ಟುಕಟ್ಟಿಕೊಂಡು ಬರುತ್ತಿದ್ದರೆಂಬುದನ್ನು ಶ್ರೀರಂಗಣ್ಣನವರು ವರ್ಣಿಸಿದ್ದಾರೆ. ಜೊತೆಗಿರಬೇಕಾದ ಪ್ರಸಂಗದಲ್ಲಿ ಮಾತನಾಡಲು ಬರುವ ಒಬ್ಬರಿಗೆ ಬದಲು ಮೂವರಂತಾಯಿತು ಎಂಬುದು ಒಂದು ಸಣ್ಣ ವಾದ. ನಾನು ಕನ್ನಡಕ್ಕೆ 'ಶ್ರೀ'ಯವರ ವಿದ್ಯಾರ್ಥಿಯಲ್ಲ. ಎಂ.ಎ. ತರಗತಿಯಲ್ಲಿ ರಾಘವಾಚಾರ್ಯರು ಅವರ ವಿದ್ಯಾರ್ಥಿ. ಜೊತೆಗೆ, ಇಂಗ್ಲಿಷ್– ಕನ್ನಡ ನಿಘಂಟಿಗೆ ಒಡನೆ ಸೇರಿ ಕೆಲಸ ಮಾಡಿದವರು. ಇಬ್ಬರಿಗೂ ತಮಿಳು ಗೊತ್ತು. ಗ್ರೀಕ್ ಭಾಷೆಯ ವ್ಯಾಸಂಗದಲ್ಲಿ ಕೂಡ ಅವರಿಬ್ಬರಿಗೆ ಸಾಹಚರ್ಯವಿತ್ತು. ಆಚಾರ್ಯರಿಗೆ 'ಶ್ರೀ'ಯವರಲ್ಲಿ ಗುರುಭಾವನೆ, ಜೊತೆಗೆ ಅವರು ಕಾರ್ಯದರ್ಶಿ, ನಾನು ಕೋಶಾಧಿಕಾರಿ. ನನಗೇ ತಿಳಿದಂತೆ 'ಅಯಾಸ್' ನಾಟಕದ ೨–೩ ಮೇಳ ಭಾಗಗಳನ್ನು ಅದರ ನಡೆ, ಛಂದಸ್ಸು, ಪ್ರಾಸ, ಕಾಣುವಂತೆ ಮೂಲಗ್ರೀಕಲ್ಲಿ ಓದಿ ಹೇಳಿ, ಅದಕ್ಕೆ ಕನ್ನಡವಾಗಿ ಇವರು ಮಾರ್ಪಡಿಸಿದ್ದ ಭಾಗಗಳನ್ನು ಅವರು ನನಗೆ ಹೇಳಿರುವುದುಂಟು. 'ಅಯಾಸ್' ಇಂದ ರೂಪಗೊಂಡ 'ಅಶ್ವತ್ಥಾಮನ್' ಪಾಠ ಹೇಳುವಾಗ ಕ್ಯಾಂಬೆಲ್, ಸ್ವಾರ್ ಮುಂತಾದವರ ಜೊತೆಗೆ ಜೆಬ್'ರ ಮೂಲಪಾಠಗಳ ನಿರ್ಣಯ, ಅವರ ಗದ್ಯರ್ಥ ಹೇಗೆ ರೂಪಪಡೆಯಿತು ಎಂಬುದನ್ನು ನೋಡಿದವರಿಗೆ ಆ ವಿದ್ಯಾಕ್ರಮ ಬಹು ಹಿಂದೆ ನಮ್ಮ ಕಾಲದಲ್ಲಿದ್ದು ಮರೆಯಾಗಿರುವುದು ಪುನಃ ಬೆಳೆಯಬೇಕಾದ್ದು ಎನ್ನಿಸಿದೆ. ಒಂದು ಕಡೆ 'ಅಯಾಯ್''– AI AI- ಅಯ್ಯೊ, ಅಯ್ಯೊ– ಎಂಬುದು ಅಯಾಸ್‌ನ ಹೆಸರಿಗೆ ಹೇಗೆ ಅಲ್ಲಿ ಹೊಂದುತ್ತದೆ ಎಂಬುದನ್ನು ಹೇಳಿದರಲ್ಲದೆ, 'ಪಾರಸಿಕರ'ಲ್ಲಿ ಅದೇ ಮಾತು, ಅದರೊಡನೆ ಇನ್ನೊಂದೆರಡು ಮಾತು ಸೇರಿ, ನೋವಿನ ಪ್ರಸಂಗ ಹೇಗೆ ಬರುತ್ತದೆ ಎಂಬುದನ್ನು ಕಾಣಿಸಿದರು. ನನಗೆ ಗ್ರೀಕ್ ಬರುತ್ತದೆ ಎಂದು ಅವರು ಯಾರಿಗೂ ಹೇಳಿಕೊಳ್ಳುತ್ತಿರಲಿಲ್ಲ; ಸಂಸ್ಕೃತ ಬರುತ್ತದೆಂದೂ ಹೇಳುತ್ತಿರಲಿಲ್ಲ. ಸ್ವತಂತ್ರವಾಗಿ ಸಂಸ್ಕೃತವನ್ನು ಓದುತ್ತಿದ್ದರು. ವ್ಯಾಕರಣ, ಅಲಂಕಾರಗಳನ್ನು ಸಂಸ್ಕೃತದಲ್ಲಿ ಓದಿ ವಿದ್ಯಾಭ್ಯಾಸ ಮಾಡಿದವರು ಅವರಲ್ಲ; ಆದ್ದರಿಂದ ಸಂದೇಹ ಬಂದಾಗ ಆ ಭಾಷೆಯನ್ನು ಚೆನ್ನಾಗಿ ತಿಳಿದ ಸ್ನೇಹಿತರಿಂದಲೊ ಪಂಡಿತರಿಂದಲೊ ಇಂಗ್ಲಿಷಲ್ಲಿ ಬರೆದ ಗ್ರಂಥಗಳ ನೆರವಿನಿಂದಲೊ ಸ್ಪಷ್ಟಪಡಿಸಿಕೊಳ್ಳುತ್ತಿದ್ದರು.[೩೬] ಇನ್ನಾರಾದರೂ ನಮ್ಮಲ್ಲಿ ಒಬ್ಬರು ಒಂದು ಸಂಸ್ಕೃತ ಪದವನ್ನು ಹಾಕಿದ್ದರೆ "ಈ ರೂಪಸಿದ್ಧಿ ಸರಿಯಾಗುತ್ತದೆಯೊ ಇಲ್ಲವೊ; ಅದು ಯಾವ ಲಿಂಗ ವಚನ ವಿಭಕ್ತಿ ಎಂದು ಇನ್ನೊಂದು ಸಲ ವಿಚಾರ ಮಾಡಿ ನೋಡಿ" ಎನ್ನುತ್ತಿದ್ದರು. ಶಕ್ಯವಾದ ಮಟ್ಟಿಗೂ ಹಳೆಯ ಕಾಲದ ಪಂಡಿತರನ್ನು ಹೊಸ ಕನ್ನಡದ ನೆರವಿಗೂ ಒಲವಿಗೂ ಸೇರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅವರಿಗೆ ಒಪ್ಪಿತವಾಗದ ರೂಪಗಳನ್ನು ಬಿಡೋಣ ಎನ್ನುತ್ತಿದ್ದರು.[೩೭]

ಸಂಸ್ಕೃತ ಮಹಾಗ್ರಂಥಗಳನ್ನು ಕುರಿತು ಸೆಮಿನಾರಲ್ಲಿ, ಬೇರೆಯ ಕಡೆ ವಾಕ್ಯಗಳನ್ನು ಉದ್ಧಾರ ಮಾಡಿ ನುಡಿಯುತ್ತಿದ್ದುದಲ್ಲದೆ, ಅವುಗಳ ಹಿರಿಮೆ ಎಷ್ಟು ದೊಡ್ಡದು ಎಂದು ಒತ್ತಿ ಹೇಳುತ್ತಿದ್ದರು. ನಚಿಕೇತ ಪ್ರಸಂಗ, ನಳದಮಯಂತಿ, ಸಾವಿತ್ರಿ, ಯಾಜ್ಞವಲ್ಕ್ಯ–

ಮೈತ್ರೇಯಿ, ಮಹಾಭಾರತದ ಕೆಲವು ಪ್ರಕರಣಗಳು, ಭಗವದ್ಗೀತೆ, ಉತ್ತರರಾಮ ಚರಿತೆ, ಶಾಕುಂತಲ ಮುಂತಾದುವನ್ನು ಆಯ್ದುಕೊಂಡು ಇಂಗ್ಲಿಷ್ ಸೆಮಿನಾರಲ್ಲಿ ವಿಚಾರವಿನಿಮಯ ಮಾಡುತ್ತಿದ್ದುದನ್ನು ಹಿಂದೆಯೇ ತಿಳಿಸಿದೆ. ಅದನ್ನು

– – – –

೩೬ ಭಾರತೀಯ ತತ್ತ್ವಶಾಸ್ತ್ರ ಬರೆವ ಬಹು ಮುಂಚೆ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರಿಗೆ ತಿಗಳಿಗೆ ೧೦೦ರೂ. ಕೊಟ್ಟು ರಾಧಾಕೃಷ್ಣನ್ ಅವರೇ ದರ್ಶನಗಳ ವ್ಯಾಸಂಗ ಮಾಡುತ್ತಿದ್ದರು. ಅವರ ಸಂಸ್ಕೃತವನ್ನು ಕುರಿತು ಎಷ್ಟು ಟೀಕೆ ಬಂದಿಲ್ಲ? ಸಂಸ್ಕೃತದ ವ್ಯಾಕರಣ ಪ್ರಕ್ರಿಯೆ ತಿಳಿದವರು ಏಕೆ ಅವರ ಹಾಗೆ ದರ್ಶನ ಪ್ರಕಾಶನ ಮಾಡಲಾಗಿಲ್ಲ?.

– – –

೩೭ ನನ್ನ ಬೆಂಗಾಡು, ಕೈಲಿ, ಮುಚ್ಚಟೆ, ಮಾಸು–ಮುಂತಾದ ಮಾತುಗಳನ್ನು ಕುರಿತೂ ನುಡಿದುದುಂಟು. ಇನ್ನೊಮ್ಮೆ ಬಸ್ಸಲ್ಲಿ ಹೋಗುತ್ತಿದ್ದಾಗ ಹೂ ತಿರಿ, ಆಯು, ಬಿಡಿಸು, ಕೀಳು, ಕುಯ್ ಇತ್ಯಾದಿಗಳಿರುವಾಗ ಕೊಯ್ಯು ಬರ್ಬರವಾಗುತ್ತದಲ್ಲವೆ ಎಂದರೆ "ರೂಢಿಗೆ ಬಂದಿದೆಯಪ್ಪ, ಇಷ್ಟು Squeamish ಆಗಿಬಿಟ್ಟರೆ ಹೇಗಪ್ಪ" ಎಂದರು.

ಆಗಿನ ಕಾಲದವರೆಲ್ಲ ಬಲ್ಲರು. ಈಚಿನ ಕಾಲದ ಕನ್ನಡ ಕವಿಗಳಲ್ಲಿ ಕೆಲವರೂ ಪ್ರೌಢವಾಗಿ ಬರೆಯಬೇಕೆಂಬ ಅಭಿಲಾಷೆಯಿಂದ, ಪಾಂಡಿತ್ಯದಲ್ಲಿ ಸಂಸ್ಕೃತದವರಿಗಿಂತ ತಾವು ಕಡಮೆಯವರಲ್ಲ ಎಂದು ಅಲ್ಲಿನ ಸಮಸ್ತ ಪದಗಳನ್ನೂ ಅಪರೂಪ ಪ್ರಯೋಗಗಳನ್ನೂ ಕವಿಸಮಯದ ಮತ್ತು ಶ್ಲೇಷೆಗಳ ಅತಿರೇಕಗಳನ್ನೂ ಕಟ್ಟಿ, ದ್ರಾಕ್ಷಿ ಬಳ್ಳಿಗೆ ಕಬ್ಬಿಣದ ಕಟ್ಟು ಹಾಕಿದಂತೆ ಮಾಡಿದ್ದಾರೆ; ಕನ್ನಡದ ದೇಸಿ, ರೂಢಿ, ಜಾಯಮಾನ ಪ್ರಕಾಶಮಾಗುವಂತೆ ಅಕ್ಷರವರಿಯದವರಿಗೂ ಹೆಚ್ಚಾಗಿ ಓದದವರಿಗೂ ಹೆಂಗಸರು ಮಕ್ಕಳಿಗೂ ಅರ್ಥವಾಗುವಂತೆ ಕನ್ನಡಕಲ್ಲಿ ಸಾಹಿತ್ಯ ನಿರ್ಮಾಣವಾಗಬೇಕು[೩೮]. ಎಂಬ ಅಭಿಲಾಷೆ 'ಶ್ರೀ' ಅವರನ್ನು ಸಂಸ್ಕೃತ ದ್ವೇಷಿಗಳು ಎಂಬಂತೆ ಮಾಡಿತು. ಭಾಷಣಗಳಲ್ಲಿಯೊ ಅಥವಾ ಅವರನ್ನು ರೇಗಿಸಿದ ಅತಿರೇಕದ ಸಂದರ್ಭಗಳಲ್ಲಿಯೊ ಅವರು ಆಡಿದ ನಾಲ್ಕು ಮಾತು ಸಂಸ್ಕೃತದವರಿಗೆ ವಿಷಮವಾಗಿ, ಕರ್ಕಶವಾಗಿ, ಹಗೆಯ ಮಾತಿನಂತೆ ಕೇಳಿಸಿದ್ದು ನಿಜ.[೩೯] ಸಾಹಿತ್ಯ ರೂಪದಲ್ಲಿ ಬಹುಮಟ್ಟಿಗೆ ಸಂಸ್ಕೃತ ರೀತಿಯ ಗುಣಸಂಪತ್ತೆಲ್ಲ ಕನ್ನಡಕ್ಕೆ ಬಂದಿದೆ; ಅಲ್ಲಿಯೂ ಇಲ್ಲಿಯೂ ಹೊಸಜೀವನದ, ನೋಟಗಳ ರಕ್ತಪ್ರವಾಹ, ಸಂಪತ್ತಿ ತಂದು ಈಗಿನ ಅಗತ್ಯಕ್ಕೆ ತಕ್ಕುವಾಗುವಂತೆ ಮಾಡಬೇಕಾದ ಕೆಲಸ ಇಬ್ಬರ ಪಾಲಿಗೂ ಬರಬೇಕು ಎಂಬುದು ಅವರ ನಿಲವು. ಭಾರತ ಸಂಸ್ಕೃತಿಯ ಆಧಾರಭೂತವಾಗಿದ್ದು ನಮ್ಮ ಭಾಂಡಾಗಾರವಾಗಿರಲಿ ಎಂದರು. ಆದರೆ ಸಂಸ್ಕೃತದ ಹೆಂಡತಿ ಸಂಸ್ಕೃತಿ ಎನ್ನಬೇಡಿ ಎಂದುದು ಖಾರವಾಯಿತು.

ಅನೇಕ ವೇಳೆ ಅವರು ಪಂಪರಾಮಾಯಣವನ್ನೊ ಆದಿಪುರಾಣವನ್ನೊ ಅಥವಾ ಪಂಪಭಾರತವನ್ನೊ ಪಾಠ ಹೇಳುವಾಗ ಅ ಟ ಮಾತಿರಲಿ, ಶಬ್ದದ ಲಕ್ಷಣ, ರಚನೆ ಇವನ್ನು ಕುರಿತೇ ತಮಿಳಿನ ಮಾತಿನಿಂದ ನಿದರ್ಶನವನ್ನು ತೆಗೆದುಕೊಂಡು, ಅದರ ರೂಪಾಂತರವೇ ಇದು, ಇವೆರಡೂ ಒಂದು ಜೊಂಪದ ಎರಡು ಹೂಗಳು ಎಂಬಂತೆ ತೋರಿಸಿಕೊಡುತ್ತಿದ್ದರು. ತಮಿಳು ಪ್ರಾಚೀನವೆ? ಕನ್ನಡವೆ?– ಎಂಬ ಒಂದು ಲೇಖನದಲ್ಲಿ ಈ ಮಾತನ್ನೆತ್ತಿದ್ದಾರೆ. ತಮಿಳವರು ಇನ್ನೂ ಅಷ್ಟನ್ನು ಉಳಿಸಿಕೊಂಡಿದ್ದಾರೆ; ನಾವು ಎಷ್ಟನ್ನು ಕುಲಗೆಡಿಸಿದ್ದೇವೆ ಎನ್ನುತ್ತಿದ್ದರು. ಆದರೆ ಭಾಷೆಯ ಬೆಳವಣಿಗೆಯಲ್ಲಿ ಇಂಥದು ಸಾಮಾನ್ಯ– ಎಲ್ಲಿಯೂ– ಎಂಬ ಮಾತು ಪೂರಕವಾಗಿ ಬರುತ್ತಿತ್ತು. ಕನ್ನಡ ತಲೆಯೆತ್ತವ ಬಗೆ ಹೇಗೆ, ಕನ್ನಡ ಭಾಷೆಯ ವಿಚಾರಗಳು ಎಂಬ ಭಾಷಣಗಳಲ್ಲಿ ಒಂದರಲ್ಲಿ ಕನ್ನಡಕ್ಕೆ ಏನೇನಾಗಬೇಕಿದೆ, ಹೇಗೆ?– ಎಂಬ ಅಂಶವೂ, ಇನ್ನೊಂದರಲ್ಲಿ ಭಾಷೆಯ ಶುದ್ಧಿಗೆ, ಚರಿತ್ರೆಗೆ ಹೊಂದುವಂತೆ ವ್ಯಾಕರಣ ಮತ್ತು ಶಬ್ದರಚನೆಯ ವಿಚಾರವೂ ಕನ್ನಡಕ್ಕೆ ಪ್ರಶಸ್ತಿ ಬರುವ ಮುಂಚಿತವಾಗಿಯೇ ಅವರು ಹೇಗೆ ಆಡಿದ್ದಾರೆ ಎಂಬುದನ್ನು ಕಾಣಿಸುತ್ತದೆ. ಅವರಿಂದ ನಮ್ಮ ಮೂರು ವ್ಯಾಕರಣಗಳ ತುಲನ, ತಮಿಳಿನ ಮೂರು ವ್ಯಾಕರಣಗಳ ರೀತಿಯನ್ನು ಸಂಗ್ರಹಿಸಿ, ಅವರು ನೋಡಿ– ಎಷ್ಟು ಸುಲಭ ಮಾಡಿಕೊಂಡಿದ್ದಾರೆ, ತಮ್ಮ ಭಾಷೆಯ ಜೀವವನ್ನು ಉಳಿಸಿಕೊಂಡಿದ್ದಾರೆ ಎಂಬುದನ್ನು ತೋರಿಸಿಕೊಡಿ ಎಂದು ಕೇಳಿದಾಗ, ಇನ್ನೇನು ಒಂದು ವಾರದಲ್ಲಿ ಮುಗಿಸಿಕೊಡುತ್ತೇನೆ ಎಂದು ಹೇಳಿದ್ದರು. ಯಾರಿಂದಲೊ ಯಾವುದೊ ಅಡ್ಡ ಮಾತು ಬಂದು, ಆ ಕೆಲಸವನ್ನು ನಿಲ್ಲಿಸಿದರು.[೪೦] ಮಾಡಿದ್ದಿದ್ದರೆ ಎರಡು ಭಾಷೆಗಳಲ್ಲಿಯೂ ಪರಿಣತರಾದ ಪ್ರೀತಿ ಉಳ್ಳವರಾದ ಅವರು ಅದರ ಬಾಂಧವ್ಯವನ್ನು ಇನ್ನಷ್ಟು ಸ್ಫುಟಗೊಳಿಸುವ ಅವಕಾಶವಿತ್ತು. ಈಚಿನ ಕಾಲದಲ್ಲಿ ಇನ್ನೂ ಹತ್ತು ಹೆಜ್ಜೆ ಮುಂದಿರಿಸಲು ಅವಕಾಶ ದೊರೆಯುತ್ತಿತ್ತು. ನನಗೆ ತಿಳಿದಂತೆ ಕಱಳನ್ನು ಪೂರ್ತಿಯಾಗಿ ಕನ್ನಡಕ್ಕೆ ಭಾಷಾಂತರ ಮಾಡಿದ್ದರು. ಒಂದು ಕಂದದಷ್ಟಕ್ಕೆ ಒಂದೊಂದು ಕುಱಳನ್ನು ವಿಸ್ತರಿಸುವಾಗ ಅದರ ಸ್ವರೂಪ ಕೆಡುತ್ತದೆ ಎಂಬುದನ್ನು ಪ್ರಕಟವಾಗಿ ಒಂದು ದಿನ ಬೆಂಗಳೂರ ಸೆಂಟ್ರಲ್ ಕಾಲೆಜಿನ ಕರ್ನಾಟಕ ಸಂಘದಲ್ಲಿ ತಮಿಳು ವಿದ್ವಾಂಸರೊಬ್ಬರು ಮಾತನಾಡಿಯಾದ ಮೇಲೆ ಹತ್ತಿಪ್ಪತ್ತು ಕುಱಳನ್ನು ಕಪ್ಪುಹಲಗೆಯ ಮೇಲೆ ಬರೆದು ಅವಕ್ಕೆ ಪ್ರತಿಯಾದ ಕನ್ನಡ ಅನುವಾದವನ್ನು ತಿಳಿಯಾಗಿ ಮಾಡಿತೋರಿಸಿದರು. ಶ್ರೀ ರುದ್ರಪತಿಯವರೊ ಶ್ರೀ ಚೆಂಗಲ್ವರಾಯನ್ ಅವರೊ ಅದನ್ನು ಬಲ್ಲರು. ಮೊದಲೇ ಆ ಎಲ್ಲವೂ ಅಚ್ಚಾಗಬಹುದಿತ್ತು; ಆದರೆ ರಾ. ನರಸಿಂಹಾಚಾರ್ಯರು 'ನೀತಿಮಂಜರಿ'ಯ ಕಂದಪದ್ಯದಲ್ಲಿ ಅದನ್ನು ಮಾಡಿ, ಪಠ್ಯಗಳಾಗಿ ಮಾಡಿ ನಡಸಿರುವಾಗ, ತಾವು ಇದನ್ನು ಅಚ್ಚು ಮಾಡಿಸುವುದು ಅಲೌಕಿಕವಾದೀತು, ಅವರಿಗೆ ಅಗೌರವವೆಂದು ಕಾಣಿಸೀತು ಉದ್ದೇಶಪೂರ್ವಕವಾಗಿ ಇವರನ್ನು ತೆಗಳುವಂತೆ ಮಾಡುತ್ತಿದ್ದಾರೆ ಎಂಬ ಅಪಖ್ಯಾತಿಯನ್ನು ತಪ್ಪಿಸಿಕೊಳ್ಳಲು ಅದರ ಪ್ರಕಟಣೆಗೆ ಹಿಂಜರಿದುಬಿಟ್ಟರು. ಮಣಿಮೇಖಲೈ, ಶಿಲಪ್ಪದಿಕಾರಂ ಇತ್ಯಾದಿಗಳ ಕೆಲವು ಭಾಗಗಳನ್ನೂ ಕನ್ನಡಿಸಿದ್ದರು. ಅವರ 'ಶಿಲಪ್ಪದಿಕಾರಂ'ನ ಭಾಷಾಂತರ ಕನ್ನಡನಾಡಿನ ದುರದೃಷ್ಟದಿಂದ ಗೆದ್ದಲು ತಿಂದೊ ಅರಿಯದವರು ಒಲೆಗೆ ಹಾಕಿಯೊ ಧಾರವಾಡದಲ್ಲಿದ್ದಾಗ ನಷ್ಟವಾದುವು.[೪೧] ಅವರ ಅಳಿಯಂದಿರಾದ ಶ್ರೀ ಎಸ್. ಆರ್. ಗುಂಡಪ್ಪನವರು ನನಗೆ ಒಮ್ಮೆ "ರಾತ್ರಿಯೆಲ್ಲ ಏನೇನೊ ಅರೆಗಟ್ಟಿಯಾಗಿ ಓದಿಕೊಳ್ಳುತ್ತ, ಹಾಡಿಕೊಳ್ಳುತ್ತ ನಮ್ಮ ಮಾವ ಕೊಠಡಿಯಲ್ಲಿ ತಿರುಗಾಡುತ್ತಿರುತ್ತಾರೆ.

– – –

(೩೮ 'ಇಂಗ್ಲಿಷ್ ಗೀತಗಳ'ನ್ನು ಅಚ್ಚ ಹೊಸಗನ್ನಡದಲ್ಲಿಯೂ 'ಅಶ್ವತ್ಥಾಮನ್', 'ಪಾರಸಿಕರ'ನ್ನು ಹಳಗನ್ನಡದಲ್ಲಿಯೂ ಬರೆದು ತಮ್ಮ ಕನ್ನಡ ಸೇವೆಸಲ್ಲಿಸಿದರು.

೩೯ ತಮ್ಮ 'ಅನ್ನ' ತಿಂದು ಕನ್ನಡ ಅಥವಾ ದ್ರಾವಿಡದಿಂದ 'ನೀರ್' ತೆಗೆದುಕೊಂಡರೆಂದು ನಮ್ಮ ತಳಕ್ಕೆ 'ಶ್ರೀ' ನೀರು ತಿದ್ದಿದರು ಎಂದುದುಂಟು.

೪೦ 'ಮುಟ್ಟಿದರೆ ಮುನಿ'– ಅಲ್ಲ, ಮುರಿ(ಚೌ) ಎಂಬಂತೆ, ಒಂದು ಸಣ್ಣ ಗಿಡ ಹಾಗೆ ಮುದುರಿಕೊಳ್ಳುತ್ತದೆ. ಅದು ಕೆಲವರಿಗೆ ಅಪಾರ್ಥಕ್ಕೀಡಾಗುತ್ತಿತ್ತು. ಸ್ವರಕ್ಷಣೆ ಎಂಬ ಒಂದು ಭಾವ ಅಂಗಾಂಗಗಳಲ್ಲಿ ಹೇಗೊ ಮನೋವಿಚಾರಗಳಲ್ಲಿಯೂ ನುಡಿ, ನಡೆವ ನಡತೆಯಲ್ಲಿಯೂ ಹಾಗೇ ಕಂಡುಬರುತ್ತದೆ.)

(೪೧ ಇದು ಜಾನ್ ಎಸ್. ಮಿಲ್ ಮನೆಯಲ್ಲಿ ಶ್ರೀಮತಿಯೊ ಮನೆಯ ಇನ್ನಾರೊ ಕಾರ್ಲೈಲನ *French Revolution* ಹಸ್ತಪ್ರತಿಗೆ ಅಗ್ನಿಸ್ಪರ್ಶ ಮಾಡಿದುದನ್ನು ನೆನಪಿಗೆ ತರುತ್ತದೆ.

ರಾಶಿರಾಶಿಯಾಗಿ ಇಂಗ್ಲಿಷಲ್ಲಿ ಕನ್ನಡದಲ್ಲಿ ಏನೇನೊ ಬರೆದು ಹಾಕಿಕೊಂಡಿದ್ದಾರೆ" ಎಂದು ಹೇಳುತ್ತಿದ್ದರು.[೪೨] ಆತನ ಮಾತು ಯುವಕರ ಧೋರಣೆಯ ಮಾತು; ಆದರೂ ಆತನ ವಿದ್ಯೋತ್ಸಾಹ ಒಳ್ಳೆಯ ಉಪಾಧ್ಯಾಯನದು. ಆತನನ್ನು ಆಕ್ಸ್‌ಫರ್ಡ್‌ಗೆ ಕಳಿಸಬೇಕು ಎಂಬ ಎಷ್ಟ ಅವರಿಗಿತ್ತು. ಕಾರವಾರದ ಸಮ್ಮೇಳನ ಮುಗಿಸಿಕೊಂಡು ಬಂದ ಕೆಲವೇ ದಿನಗಳಲ್ಲಿ ಆತನು ತೀರಿಕೊಂಡಾಗ ಅವರು ಪಟ್ಟ ಆಂತರಿಕ ವ್ಯಥೆ ದಾರುಣವಾದುದು. ಅತಿಯಾದ ಸಂತೋಷವನ್ನು ನಕ್ಕು ಮುಗಿಸುವುದಕ್ಕಾಗುವುದಿಲ್ಲ; ಅತೀವ ದುಃಖವನ್ನು ಕಣ್ಣೀರು ಸುರಿಸಿ, ಗೋಳಾಡಿ ತೀರಿಸಲಾಗುವುದಿಲ್ಲ. ಧೀರ, ಧಾರುಣಾ, ಕ್ಷಮಾ ಎಂಬ ಮಾತುಗಳಲ್ಲಿ ತಾಳ್ಮೆಯ ಈ ಲಕ್ಷಣ ಅತಿಶಯವಾಗಿ ಬರುತ್ತದೆ, ಆ ದಿನ 'ಶ್ರೀ' ಯವರು ಶ್ಮಶಾನದಲ್ಲಿ ನಡೆದುಕೊಂಡ ರೀತಿ ಇಂಥ ಧೀರತ್ವದ ಗುರುತು. ತಮ್ಮ ಕಾಲದಲ್ಲಿ ಕನ್ನಡ ಕಾವ್ಯಸಂಗ್ರಹಗಳನ್ನು, ವಿವಿಧ ವಿಷಯಕವಾದ ೨೦೦–೩೦೦ ಪುಟಗಳ ಲೋಕಪರಿಜ್ಞಾನದ ಮತ್ತು ಸಂಸ್ಕೃತಿ ಪ್ರಸಾರಕ ಗ್ರಂಥಗಳನ್ನು ಸಂಪಾದಿಸಿ, ಕೈಪಿಡಿಗಳೆಂಬಂತೆ ಅಚ್ಚುಮಾಡಿಸಿ, ಅವನ್ನು ೧೨ ಆಣೆಯಷ್ಟು ಸುಲಭ ಬೆಲೆಗೆ ಮಾರಲು ಏರ್ಪಡಿಸಿದರು. ಇಂಗ್ಲಿಷ್– ಕನ್ನಡ ನಿಘಂಟುವಿಗೆ ಐದು ರೂಪಾಯಿ ಬೆಲೆ ಎಂದಾಗ ಆಗಿನ ವೈಸ್ ಛಾನ್ಸಲರ್ ಆದ ಇ.ಪಿ. ಮೆಟ್‌ಕಾಫ್ Dirt cheap, How can you afford it? ಎಂದರು. ಆಗ ಇವರು "ನಮ್ಮಲ್ಲಿ ಹಳ್ಳಿಯ ಶಾಲೆಯ ಉಪಾಧ್ಯಾಯರಿಗೆ ಹತ್ತರಿಂದ ಇಪ್ಪತ್ತು ರೂಪಾಯಿ ಸಂಬಳ; ಹೆಚ್ಚು ಬೆಲೆ ಇಟ್ಟರೆ ಎಲ್ಲಿ ಕೊಂಡಾರು?"– ಎಂದರು. E. P. M., Go ahead ಎಂದರು. ಕೈಪಿಡಿ, ಸಂಗ್ರಹಗಳ ವಿಷಯದಲ್ಲಿ ಒಂದು ಮಾತು ಹೇಳಬಹುದು. ಹಿಂದೆ ಒಟ್ಟು ಒಂದು ಕಾವ್ಯವನ್ನು ಪಠ್ಯವಾಗಿ ನೇಮಿಸುವ ರೂಢಿ ಇರಲಿಲ್ಲ. ಕವಿಯ ಪೂರ್ತಿ ಗ್ರಂಥ ಹೇಗಿದೆ, ಅದರ ಒಟ್ಟು ದೃಷ್ಟಿ, ಅಂಗವಿನ್ಯಾಸ ಹೇಗಿದೆ– ಇತ್ಯಾದಿಗಳ ಪರಿಚಯ ವಿದ್ಯಾರ್ಥಿಗಳಿಗೂ ಸಾಧಾರಣರಿಗೂ ಆಗಬೇಕು; ಅಲ್ಲಿನ ಅತಿಪಾಂಡಿತ್ಯಗಳಿಗೂ ಕವಿಸಮಯದ ಕೃತಕತೆಗಳಿಗೂ ಕಥಾಭಾಗಕ್ಕೆ ನೇರವಾಗಿ ಸಂಬಂಧಿಸದ– ಇತರ– ಅಂಶಗಳನ್ನು ಬಿಟ್ಟು– ಮುಖ್ಯ ಭಾಗಗಳ ಅರಿವಾಗಬೇಕು ಎಂಬುದು. ಆ
ಸಂಬಂಧದ ಸಂಶೋಧನೆ, ಪಾಠ ನಿರ್ಣಯಗಳನ್ನು ಒಳಗೊಂಡ ಪೀಠಿಕೆ, ಕಡೆಯಲ್ಲಿ ಕ್ಲಿಷ್ಟಪದಗಳ ಅರ್ಥಕೋಶ ಇರುವಂತೆ ಮಾಡಿಸಿದರು. ಈ ಉಪಕಾರ ಸಾಮಾನ್ಯವಾದ್ದಲ್ಲ.

* *

ಧಾರವಾಡಕ್ಕೆ ಅವರು ಹೋಗುವುದು ಇಲ್ಲಿನ ಅನೇಕರಿಗೆ ಅಷ್ಟೇನೂ ಸಂತೋಷದ್ದಲ್ಲ. ಒಂದು ಕಾರಣ: ಮೈಸೂರಿಂದ ಬೆಂಗಳೂರಿಗೆ ಬಂದದ್ದೇ ಅವರಿಗೆ ಹಿತವಾದ ಆಪ್ತವಾದ ಆವರಣ ದೊರೆಯದಿದ್ದುದು. ಅಲ್ಲಿ ಜನ ವಿಶ್ವಾಸದಲ್ಲಿ, ಅವರಿಗೆ ತೋರಿಸಿದ ಗೌರವದಲ್ಲಿ, ಇಲ್ಲಿನ ಯಾರಿಗೂ ಕಡಮೆಯಾಗಲಿಲ್ಲ. ಇವರನ್ನು ಕರೆದುಕೊಂಡು ಹೋಗಬೇಕೆಂದು ಹೊಸತಾಗಿ ಸ್ಥಾಪಿತವಾಗಿದ್ದ ಒಂದು ಕಾಲೆಜಿನ ಕಾರ್ಯದರ್ಶಿ ಆಗಿದ್ದ ಶ್ರೀ ವಿ. ಆರ್. ಮುಧೋಳ್‌ಕರ್ ೩–೪ ಜನರೊಡನೆ ಬಂದು ತುಂಬಾ ಪ್ರೀತಿಯಿಂದ ಕರೆದರು. "ನೀವು ಪ್ರಿನ್ಸಿಪಲ್ ಆಗಿದ್ದರೆ ಅದೊಂದು ದೊಡ್ಡ ಗೌರವ; ನಮ್ಮ ಕಾಲೆಜಿಗೊಂದು ಸ್ಥಾನಮಾನ ಬರುತ್ತದೆ" ಎಂದರು. ಇಲ್ಲಿ ಪ್ರಿನ್ಸಿಪಲ್ ಆಗದೆ ಇದ್ದುದರ ವಿಷಯದಲ್ಲಿ ಅವರ ಒಳಮನಸಿನಲ್ಲಿ ಏನು ಕೊರತೆ ಇದ್ದಿತ್ತೊ ಏನಿಲ್ಲವೊ ಖಚಿತವಲ್ಲ. ಆ ನ್ಯೂನತೆಯನ್ನು ಅವರು ಎಣಿಸದೆಯೂ ಇರಲಿಲ್ಲವೇನೊ. ಒಮ್ಮೆ ನಮ್ಮ ಸಂಸ್ಥಾನದ ವಿದ್ಯಾ ಇಲಾಖೆಯ ಮುಖ್ಯ ನಿರ್ದೇಶಕರಾಗಿ ಆಗುವುದು ಶಕ್ಯವಾದರೆ ನನಗೆ ಸಂತೋಷವಾಗುತ್ತದೆ ಎಂದು ಮಿರ್ಜಾ ಸಾಹೇಬರೊಡನೆ ಅವರು ಮಾತನಾಡಿದ್ದುಂಟೆಂದೂ ಇವರಿಗೆ ಸೀನಿಯರ್ ಆಗಿ ಪ್ರೊ. ಎ.ಆರ್. ವಾಡಿಯಾ ಇದ್ದುದರಿಂದ ಆ ಸಮಯದಲ್ಲಿ ಅವರಿಗೆ ಅದು ಶಕ್ಯವಿಲ್ಲವೆಂದು ಅವರು ಹೇಳಿದ್ದರೆಂದೂ ಗಾಳಿಸುದ್ದಿ ಕೇಳಿದ್ದೆವು. ಅವರ ಉದ್ದೇಶ ಒಂದು. ಅನ್.ಎಸ್. ಸುಬ್ಬರಾಯರು ಕನ್ನಡದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಇಲ್ಲಿ ಕೈಗೊಂಡಿದ್ದರು. ಅದನ್ನು ಮುಂದುವರಿಸೋಣ; ವಿದ್ಯಾ ಇಲಾಖೆಯಲ್ಲೆಲ್ಲ ಕನ್ನಡ ಶ್ರದ್ಧೆ, ಅದಕ್ಕೆ ಸರಿಯಾದ ಪಾಠ ಕ್ರಮ, ಪುಸ್ತಕ ಪ್ರಪಂಚ

–––

೪೨ ಆದರೆ 'ಶ್ರೀ'ಯವರು ಒಂದನ್ನೂ ಹೊರಗೆಡಹುತ್ತಿರಲಿಲ್ಲ. ಅವರ ತಮ್ಮ ನನ್ನ ಸಹಪಾಠಿ ಬಿ. ಎಂ. ಕೃಷ್ಣಸ್ವಾಮಿಯವರು (ಶ್ರೀಮತಿಯರಾದ ತ್ರಿವೇಣಿ, ಆರ್ಯಾಂಬ ತಂದೆ) ಮಾತು ಒಮ್ಮೆ ಬಂದಾಗ "ನಮ್ಮಣ್ಣ ಪೇಪರುಗಳನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿ ಹೊರಗೆ ಬೇರೆ ಬೀಗ ಹಾಕಿಕೊಂಡು ಹೋಗುತ್ತಾರೆ. ಒಬ್ಬರಿಗೆ ಒಂದು ಸುಳಿವು ಕೊಡುವುದಿಲ್ಲ" ಎಂದಿದ್ದರು, ಇಂದು?)

ಬೆಳೆದು ಒಂದು ಹೊಸ ಸಾಹಿತ್ಯ ಮತ್ತು ನಯ ಪ್ರಕಾರ ಬೇಗ ಇಲ್ಲಿ ಬೆಳೆಯಲಿಲ; ಶಕ್ಯವಾದರೆ ಮಾಡೋಣ– ಎಂದಿದತ್ತು. ಅದು ಆಗದಿದ್ದುದು ಅವರಲ್ಲಿ ಸ್ವಲ್ಪ– ವ್ಯಥೆ ಎನ್ನಲಾರೆ,– ಕೆಲವು ದಿನ ಅತೃಪ್ತಿಯನ್ನು ಉಂಟುಮಾಡಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಅವರ ಮನಸ್ಸಿನಲ್ಲಿ ಧಾರವಾಡ ಸಂಬಂಧದಲ್ಲಿ ಇದ್ದುದು ತುಂಗಭದ್ರೆಯ ಆಚೆ ಕಡೆ ಬೊಂಬಾಯಿ– ಪೂನಾಗಳ ಪ್ರಭಾವದಿಂದ ಬೆಳೆದಿದ್ದ ಕಾಲೇಜ್ ಕನ್ನಡ ವಿದ್ಯಾರ್ಥಿಗಳ ಮನಸ್ಸು. ಇಲ್ಲಿ ತಾವು ಬೆಳಸಬೇಕೆಂದಿದ್ದು, ಬೆಳೆಸಲು ಯತ್ನಿಸಿದ್ದ ರೀತಿಗೆ ಅನುವಾದರೆ ಒಂದು ಬಗೆಯ ಮನಸ್ಸು, ಪಾಠಪ್ರವಚನ, ಸಾಹಿತ್ಯ ದೃಷ್ಟಿ, ವಿಮರ್ಶೆ ಬೆಲೆಗಾಣ್ಕೆ ಅಲ್ಲಿಯೂ ಬೆಳೆಯಲಿ; ಇದು ಒಟ್ಟು ಒಂದು ದೇಶ; ಧಾರವಾಡವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಉತ್ತರ ಕರ್ನಾಟಕ ಪ್ರಾಂತದಲ್ಲೆಲ್ಲ ಸಾಹಿತ್ಯ ಸಂಸ್ಕೃತಿಗಳ ಏಕರೂಪವಾದ ಒಂದು ಮನಸ್ಸು ಬೆಳಸುವುದಕ್ಕೆ ಯತ್ನಿಸೋಣ ಎಂದಿತ್ತು. ಇದು ಬಲವಾದ ಪ್ರೇರಣೆ. ನಮಗೆ ಒಂದೇ ಒಂದು ಅಳುಕು. ಅವರ ಆರೋಗ್ಯ ರಕ್ತದಲ್ಲಿನ ಶರ್ಕರಭಾಗದ ವ್ಯಾಧಿಯಿಂದ ಅನುವಾಗಿರಲಿಲ್ಲ, ತೀವ್ರವಾದ ಭಾವೋದ್ವೇಗ ಉಂಟಾದಾಗ ತಲೆ ಸುತ್ತಿಬಂದು ಕೆಳಗೆ ಬಿದ್ದುಬಿಡುತ್ತಿದ್ದರೆಂದು ಈ ಮುಂಚೆ ತಿಳಿಸಿದ್ದೇನೆ. ಅಂಥ ಸಮಯಗಳಲ್ಲಿ ನೋಡಿಕೊಳ್ಳುವ ಜನರ ಅಗತ್ಯವಿತ್ತು. ಅಂಥುದನ್ನು ಕುರಿತು ಒಬ್ಬಿಬ್ಬರು ತಮ್ಮ ಕಟುಟೀಕೆಯಿಂದ, ವಿರುದ್ಧವಾದದಿಂದ, ಇವರು ಸೋತು ಬಿದ್ದರು ಎಂಬವರೆಗೂ ಕೊಚ್ಚಿದ್ದುದನ್ನು ನಾನು ಬಲ್ಲೆ. ಅಂಥದಕ್ಕೆಲ್ಲ ಸೋಲುವವರು, ಒಡೆಯುವ ಸಾಮಾನು ಅವರಲ್ಲ; ಅಂಥ ಸಾವಿರವನ್ನು ಅವರು ತಡೆದುಕೊಳ್ಳಬಲ್ಲವರಾಗಿದ್ದರು. ಅವರು ಹೊರಗೆ ಹೋದರೆ ಬಹು ಎಚ್ಚರಿಕೆಯಿಂದ ಅವರ ಆಹಾರವನ್ನು ಕ್ರಮಪಡಿಸಿಕೊಳ್ಳಬೇಕಾಗಿತ್ತು. ಸಕ್ಕರೆ ಹೆಚ್ಚಾಗಿ ಬಳಸದ ಪದಾರ್ಥಗಳನ್ನು ಸೇವನೆ ಮಾಡಬೇಕಾಗಿ, ಸ್ನೇಹಕ್ಕೂ ದಾಕ್ಷಿಣ್ಯಕ್ಕೂ ಕೆಲವೇಳೆ ದಿನಕ್ಕೆ ಎರಡು ಸಲ ಇನ್‌ಸ್ಯುಲಿನ್ ಚುಚ್ಚಿಕೊಳ್ಳುತ್ತಿದ್ದರು. ಇನ್ನು ಹತ್ತು ವರ್ಷ ಅವರು ಉಸಿರಿಟ್ಟುಕೊಂಡಿದ್ದು, ಅವರೇ ಮಾಡಬೇಕಾಗಿದ್ದ ಕೆಲಸಕ್ಕೆ ಅವಕಾಶವಿರಬೇಕು; ಅದಕ್ಕೆ ಅಪಾಯ ತಂದುಕೊಳ್ಳಬಾರದು ಎಂಬುದು ನಮ್ಮಲ್ಲಿ ಕೆಲವರ ಮನಸ್ಸು. ಇಷ್ಟೇ ಚೆನ್ನಾಗಿ ನೋಡಿಕೊಳ್ಳಬಲ್ಲ ಜನ ಅಲ್ಲಿ ಕಾಲಕ್ರಮದಲ್ಲಿ ಹೊರೆಯಬಲ್ಲದ್ದಾಗಿತ್ತೇನೊ. "ಅತಿಸ್ನೇಹಃ ಪಾಪಶಂಕೀ" ಎಂಬ ಹಾಗೆ– ಸ್ನೇಹವಲ್ಲ, ಗೌರವ– ಇತ್ತು; ಇದನ್ನು ತಪ್ಪಾಗಿ ಎಣಿಸುವವರು ಎಣಿಸಲಿ. ಬೆಂಗಳೂರು ಶಿಷ್ಯರ ಭಕ್ತಿ ನಮ್ಮಲ್ಲಿ ಇಲ್ಲ ಎಂದು ಮೈಸೂರಿನ ಕೆಲವರು ಶಿಷ್ಯರು ಆಡಿಕೊಂಡಿದ್ದರೆಂಬುದು ನನ್ನ ಕಿವಿಗೆ ಬಿದ್ದಿತ್ತು. ನಮಗೆ ಇದ್ದ ಅಪಾಯದ ಶಂಕೆ ಇಂಥದು. ಶಾಕುಂತಲದಲ್ಲಿ ಅವಳ ಸಖಿಯರಾದ ಅನಸೂಯೆ ಪ್ರಿಯಂವದೆಯರು ನಾಲ್ಕನೆಯ ಅಂಕದ ಕಡೆಯ ಭಾಗದಲ್ಲಿ ಹೇಳುವ ಮಾತುಗಳನ್ನು ಇಂಥಲ್ಲಿ ಅನ್ವಯಿಸಬಹುದು. ಅವರೇನೊ ಒಪ್ಪಿಕೊಂಡು ಹೋದರು. ಅಲ್ಲಿರುವಷ್ಟು ಕಾಲವೂ ಸ್ನೇಹಿತರೂ ಸಹೃದಯರಾದ ಶಿಷ್ಯವರ್ಗವೂ ಬೆಳೆಯಿತಾದರೂ ಹೆಚ್ಚು ಕಾಲ ಅವರು ಅಲ್ಲಿ ಇರುವುದಾಗಲಿಲ್ಲ. ಯಾವ ಉದ್ದೇಶದಿಂದ ಅವರು ಅಲ್ಲಿಗೆ ಹೋದರೊ ಅದು ನೆರವೇರುವುದಕ್ಕೆ ಕಾಲ ಬೇಕಿತ್ತು. ಕಾಲ ದೊರೆಯಲಿಲ್ಲ. ಅವರು ಬರೆದಿದ್ದು, ಪ್ರಕಟವಾಗದಿದ್ದ ಹಲವಾರು ಲೇಖನಗಳೂ ಧಾರವಾಡದಲ್ಲಿಯೇ ನಾಶವಾದವು. ನಷ್ಟ ನಮ್ಮದು. . .

ಅವರು ಸ್ವಂತಕ್ಕೆ ಮಾಡಿಕೊಳ್ಳುತ್ತಿದ್ದ ಓದುಗಾರಿಕೆಯ ರೀತಿಯನ್ನು ಒಂದು ಸಣ್ಣ ಪ್ರಸಂಗದಿಂದ ತಿಳಿಸುತ್ತೇನೆ. ಅವರ ಅರವತ್ತು ವರ್ಷದ ಹಬ್ಬ ಮುಗಿದಿತ್ತು. ಲಾಲ್‌ಬಾಗ್ ರೋಡಲ್ಲಿದ್ದ ಅವರ ಮನೆಯಲ್ಲಿ ಅವರನ್ನು ಕಾಣಲು ಒಮ್ಮೆ ಹೋದಾಗ ಕೈಯಲ್ಲಿ ಒಂದು ಪುಸ್ತಕ ಹಿಡಿದುಕೊಂಡು ಈಚೆಗೆ ಬಂದರು. ಅವರದೇ ಸುಲಭವಾಗಿ ಪೂರ್ತಿ ಮಡಿಸಿ ಹಿಡಿಯಬಲ್ಲ ತೆಳುಕಾಗದದ ಮೊರಾಕೊ ಬೈಂಡಿನ ಪುಸ್ತಕ ಅದು. ಕೈಯಲ್ಲಿ ಪೆನ್‌ಸಿಲ್ ಇತ್ತು. ಒಂದು ಮಾತು ಆಡುವುದಕ್ಕೆ ಮುಂಚೆ– "ಇವಳು ನೋಡಿ ಸೀ.– ಎಷ್ಟು ಚೆನ್ನಾಗಿ ಬರೆಯುತ್ತಾಳೆ" ಎಂದವರೇ ಜೇನ್‌ಆಸ್ಟೆನ್ ಬರೆದ Emma ಪುಸ್ತಕದ ಒಂದು ಸಣ್ಣ ಭಾಗವನ್ನು ಓದಿ, ನನಗೆ ಅದರ ಅರ್ಥವಂತಿಕೆಯನ್ನು ಕುರಿತು ಅವಳ ಒಟ್ಟು ಬರವಣಿಗೆಯ ದೃಷ್ಟಿಯಿಂದ, ಆ ಪ್ರಕರಣದ ದೃಷ್ಟಿಯಿಂದ ನಾಲ್ಕುಮಾತು ಹೇಳಿದರು. ಎಷ್ಟು ಸಲ ಆ ಪುಸ್ತಕವನ್ನು ಓದಿದ್ದರೊ, ಹುಡುಗರಿಗೆ ಪಾಠ ಹೇಳಿದ್ದರೊ! ಪುನಃ ಅದನ್ನು ಈ ವಯಸ್ಸಿನಲ್ಲಿ ಕೈಯಲ್ಲಿ ಪೆನ್‌ಸಿಲ್ ಹಿಡಿದು ಓದುತ್ತಾ ಇದ್ದು ನನಗೆ ಪ್ರೀತಿಯಿಂದ ಹೇಳಿದುದು ಆಶ್ಚರ್ಯವನ್ನುಂಟುಮಾಡಿತು.[೪೩] ಗೃಹಿಣಿಯಾಗಿದ್ದವಳು ನೆಮ್ಮದಿಯಾಗಿದ್ದ ಒಂದು ಮನೆಯಿಂದ ತನ್ನ ಸುತ್ತಲ ಸಮಾಜವನ್ನು ವಿನೋದ ವಿಲಾಸದಿಂದ ನೋಡುತ್ತಾ ಅರೆವ್ಯಂಗ್ಯ ಪ್ರಕಾಶ ಮಾಡುತ್ತ ಅಚ್ಚ ಇಂಗ್ಲಿಷ್ ಎನ್ನಬಹುದಾದ ತಿಳಿ/ಮೃದು ಹಾಸ್ಯವನ್ನು ಕಾಣಿಸುವಂಥದು ಆಸ್ಟೆನ್ ಗುಣ. 'Art consists in concealing Art ' ಎನ್ನುವುದುಂಟು ಅತ್ಯುತ್ತಮವಾದ ನೆಯ್ಗೆಯನ್ನು ಮುಟ್ಟಿ ಹತ್ತಿರದಿಂದ ನೋಡಿ ಅನುಭವಿಸಬೇಕಲ್ಲದೆ ಅದು ಕಣ್ಣಿಗೆ ಹೊಡೆಯುವುದಿಲ್ಲ. ಹಾಗಿರುತ್ತದೆ. ಸಾಮಾನ್ಯವಾಗಿ ಜೇನ್ ಆಸ್ಟೆನ್ ಬರವಣಿಗೆ. Pride and Prejudice ಬೇರೆ ರೀತಿ; Sense and Sensibility ಬೇರೆ ರೀತಿ; Emma ಇನ್ನೊಂದು ರೀತಿ; Mansfield Park ಬೇರೆ ರೀತಿ. " ಈಗ ಇದನ್ನು ಏನು ಇಟ್ಟು ಕೊಂಡಿರಿ? " ಎಂದೆ ನಾನು." ಅದನ್ನು ಓದುತ್ತಿದ್ದೆ; ನಿಮಗೆ ಪ್ರಿಯವಾದೀತು–ಎಂದು ಓದಿದೆ" ಎಂದರು.

"There comes a season in our lives when all our travels being ended, all our experiments made, we have no keener enjoyments than to study and deeply meditate upon the things we know, to relish what we feel, just as when we see and meet again those we love: pure delights of the heart and the taste in maturity. It is that the word Classic assumes its real meaning, and is defined for every man of taste by a favourite and irresistible choice. Then the taste is formed and definite: our good sense is consummated, if it is ever to come . We have no time to try nor the desire to go forth in search of discoveries. We are satisfied with the friends we have, who have been proved so by long intercourse. Old wines, old books , old friends…"-

----

೪೩ ಒಂದು ಗುಣಕ್ಕೆ ಜೇನ್ ಆಸ್ಟೆನ್ ಇಂಗ್ಲಿಷ್ ಕಾದಂಬರಿಕಾರರಲ್ಲಿ ಮಾನ್ಯ ಸ್ಥಾನವನ್ನು ಪಡೆದಿದ್ದಾಳೆ. ಎಫ್. ಆರ್. ಲೆವಿಸ್ ಅವಳಿಗೆ, ಜಾರ್ಜ್ ಎಲಿಯಟ್‌ಗೆ ಬಹು ದೊಡ್ಡ ಸ್ಥಾನವನ್ನು ಕೊಡುತ್ತಾರೆ. ಎಂಬುದು–ಬಹುಶಃ ಹೆನ್ರಿ ಜೇಮ್ಸ್‌ಗೆ ಜೋಸೆಫ್ ಕಾನ್‌ರಾಡ್‌ಗೆ– ಈಚಿನ ಮಾತು. ಒಪ್ಪಬಹುದು, ಬಿಡಬಹುದು: ವಿಮರ್ಶೆ ಸ್ವತಂತ್ರ.

ಎಂಬ ಸೆಂಟ್‌ಬೂವ್ ಮಾತಿದೆ. ಅದು ಸರ್ವಥಾ ನಿಜ. ಪ್ರಗತಿವಾದಿಗಳೂ ವರ್ಷವರ್ಷವೂ ನವಕ್ರಾಂತಿ ಆಗಬೇಕೆನ್ನುವವರೂ ಬೇಕಾದ್ದೆಂದುಕೊಳ್ಳಲಿ. ಅದಕ್ಕೆ ಆಯುಷ್ಯ ಮಿತ: ಸ್ವೇಚ್ಛೆಯಾ, ಮನಸ್ಸಿಗೆ ಒಂದು ಮೌಲ್ಯ, ನಿರ್ಣಯ ಫಲಿಸಿ ಸಮತೆ, ನೆಮ್ಮದಿ ಬಂದಿರುವಾಗ–ಬೇಡವೆ?–ಇಂಥವಾಗುತ್ತದೆ. ನೆತ್ತರ ಕುದಿತ, ಸಾಹಸ, ಪ್ರತಿಷ್ಠೆ, ನುಗ್ಗು ಎಲ್ಲ ಮುಗಿದ ಮೇಲೆ ಹೀಗಾಗುವುದು ಸಹಜ. ಅವನ್ನು Classic ಎನ್ನಿ, ಮಹಾಕಾವ್ಯವೆನ್ನಿ: ಶಾಶ್ವತವೆನ್ನಬಹುದಾದ ಒಂದು ಬೆಲೆಯ, ಪ್ರೀತಿಯ ಗೌರವ ಅಂಥುದಕ್ಕೆ ಸಲ್ಲುತ್ತಿರುತ್ತದೆ. ಪುನಃ ಪುನಃ ಅದು ನೆನಪಿಗೆ ಬರುತ್ತದೆ. ಮಾತುಗಳು ನಾಲಿಗೆಯಲ್ಲಿ ಮರುಕಳಿಸುತ್ತವೆ. ರಕ್ತತಂಪಾದವರು, ನರಸತ್ತವರು, ಮುದಿ ಜರಠ ಎಂದಾರು ಹುಡುಗುರು.

ನೇರವಾಗಿ ಯಾವ ವಿಷಯವನ್ನು ಕುರಿತಾದರೂ ಯಾವ ಕ್ಷಣದಲ್ಲಿಯಾದರೂ ಅವರು ಮಾಣನಾಡಬಲ್ಲವರಾಗಿದ್ದರೂ ಕೆಲವೇಳೆ ದಿನವೂ ಹರಿದು ಹಾಕುವ ಕ್ಯಾಲೆಂಡರ್ ಹಾಳೆಗಳಲ್ಲಿ ೪–೫ ಅಂಶಗಳನ್ನು ಗುರುತು ಹಾಕಿಕೊಂಡು ವಿಷಯಕ್ರಮ ತಮ್ಮ ಮನಸ್ಸಿಗೇ ಪುನಃ ಬರುವಂತೆ ಮಾಡಿಕೊಳ್ಳುತ್ತಿದ್ದರು ಎಂದು ಬೇರಲ್ಲಿ ತಿಳಿಸಿದ್ದೇನೆ. ನೂರಾರು ಸಂದರ್ಭಗಳಲ್ಲಿ ಮಾತನಾಡುತ್ತಿದ್ದುದರಿಂದ ಆರಂಭದಲ್ಲಿ ಮಾತನಾಡಿದವರೊ ಇನ್ನಾರಾದರೊ ಏನಾದರೂ ಹೇಳಿದುದೊ ಆದಿನದ ಪ್ರಚೋದನೆಗಾಗಿ ಹೊರಗೆ ಬರುತ್ತಿತ್ತು. ಕೆಣಕು ಮಾತಾಗಿದ್ದರಂತೂ ಆ ದಿನ ಮಾತು ಬೆಂಕಿ; Blast Furnace ನಿಂದ ಹರಿದು ಬರುವ ಕಾದ ಕಬ್ಬಿಣದ ಪ್ರವಾಹ, ಅಥವಾ, ತನ್ನ ಸುತ್ತ ಗೂಡು ಕಟ್ಟಿಕೊಂಡಿದ್ದ ರೇಶಿಮೆಯ ಹುಳದಂತೆ ಹೊರಗೆ ಬರುತ್ತಿತ್ತು. ಅದನ್ನು ಲೋಕಕ್ಕೆ ಕೊಡಲು ತಾನು ಹೇಗೆ ಪ್ರಾಣ ಬಿಡುತ್ತದೆಯೊ ಹಾಗೆ– ಎಂದರೂ ಎನ್ನಬಹುದು. ಅದು ಕೊಟ್ಟುದು ರೇಶಿಮೆ. ಅವರ ಗದ್ಯದ ಬರವಣಿಗೆಯಲ್ಲಿ ಎರಡು ಆಡುಮಾತಿನ ರೀತಿ ಇತ್ತು: ಒಂದು ಶಾಸ್ತ್ರವಿಷಯವನ್ನು ಕುರಿತು ಬರೆಯುವಾಗ; ಕೇವಲಸೂಚನೆಗಳು ಮಾತ್ರದಂತಿರುವ ಸೂತ್ರಪ್ರಾಯವಾದ ಬಹು ಸಣ್ಣ ವಾಕ್ಯಗಳ ಶ್ರೇಣಿ. ಉದಾಹರಣೆಗಳನ್ನು ಕೊಡುವರು. ಉದ್ದವಾದ ಭಾಷಣಗಳನ್ನು ಮಾತನಾಡುವಾಗ ಅಲ್ಲಿ ಉದ್ದಕ್ಕೆ ಒಂದೇ ಧಾತುವುಳ್ಳ ಪ್ರಕಾರಕ್ಕಿಂತ ಹೆಚ್ಚಾಗಿ ನಡುವೆ ನಡುವೆ ಯಾವುದನ್ನು purple patches ಎಂದು ಇಂಗ್ಲಿಷಲ್ಲಿ ಹೇಳುತ್ತಾರೊ ಅವು ಇರುತ್ತಿದ್ದವು. ಬರೆದುದು ಮಾತನಾಡುವ ಅಥವಾ ಉಪನ್ಯಾಸದ ರೀತಿಯಲ್ಲಿ. ಅಲ್ಲಿ ಎದುರಿಗೆ ಕುಳಿತವರ ಮುಖಗಳನ್ನು ನೋಡಿಕೊಂಡು ಮಾತುಗಳನ್ನು ಆಡುವಾಗ– ಎಂ. ಆರ್. ಶ್ರೀ. ಹೇಳುತ್ತಿದ್ದಂತೆ– 'ಪೋಂಭಾವಣೆ' ಇರುತ್ತಿತ್ತು. ಅದನ್ನು Rhetoric Looseness ಎಂದು ಕರೆದವರುಂಟು. ಗದ್ಯಕ್ಕೂ ಸುಭಗವಾದ ಒಂದು ಲಯಬಂಧವಿರುತ್ತದೆ. The Other Harmony of Prose ಎಂದು ಡಾ. ಜಾನ್, ಬ್ರೌನ್, ರಸ್ಕಿನ್, ನ್ಯೂಮನ್ ಮುಂತಾದವರ ರೀತಿಯನ್ನು ಬಲ್ಲವರು ಹೇಳಿದ್ದಾರೆ. ನಮ್ಮಲ್ಲಿ ಮನೋರಮೆಯ ಮಾತಿದೆ.

ಅಥವಾ, ಹೀಗೆ ಹೇಳಬಹುದು : ಒಂದು ದೊಡ್ಡ ಮಹಲನ್ನು ಕಟ್ಟುವಾಗ, ಒಂದು ದೊಡ್ಡ ಮಂದಿರದಿಂದ ಇನ್ನೊಂದಕ್ಕೆ ಹೋಗುವಾಗ ಸ್ವಲ್ಪ ಜಳ್ಳು ದಾರಿ ಇರಬೇಕು. ಅದು ಸ್ವಲ್ಪ ನೀರಸವಾಗಿ ಕಾಣಬಹುದು. ಉದ್ದಕ್ಕೆ ಒಂದೇ ವಾಗ್ವಿಲಾಸವನ್ನು ಬೆಳಸಿದರೆ ತುಂಬಾ ವಾಗ್ಮಿತಾ ಪ್ರಾಗಲ್ಭ್ಯ ಆಗಬಹುದು; ಕೇಳಿದವರಿಗೆ ಮಾದಕವಾದೀತು. 'ಶ್ರೀ'ಯವರ ಮಾತುಗಾರಿಕೆಯಲ್ಲಿ ಏನೇ ಮಾತನಾಡುತ್ತಿದ್ದರೂ ವಿಶದತೆ, ಅರ್ಥದ ತಿಳಿ, ನುಣುಪು, ಮಾತುಗಳ ಆಯ್ಕೆ, ಅರ್ಥವಂತಿಕೆ, ಭಾವಪ್ರಕಾಶನ ಕೆಲವಲ್ಲಿ ಅತಿಯಶತೆ ಇದ್ದವು. ಹತ್ತಿರದ ಇನ್ನು ಯಾವುದೊ ಉದಾಹರಣೆಗೊ ಆಥವಾ ಸಂಬಂಧಲೋಕಕ್ಕೊ ತೆಗೆದುಕೊಂಡು ಹೋಗಿ ಪುನಃ ಮುಖ್ಯ ವಿಷಯಕ್ಕೆ ಬರುವ ಒಂದು ಮಾರ್ಗವಿತ್ತು. ವಿಜ್ಞಾನವೊ ಗಣಿತವೊ ಆದರೆ ಅಡಕ, ನೇರ, ಸಂಗ್ರಹ ಸರಿ. ಆದರೆ ಒಮ್ಮೆ ಸೇಂಟ್ಸ್‌ಬರಿ ಹೇಳಿದ್ದುಂಟು: Mathematics is a mother without breasts; she cannot suckle her children. ನಿಜವೊ ಸುಳ್ಳೊ ಕಾಣೆ. ಗಣಿತದಲ್ಲಿ ಹೆಚ್ಚು ಆಸಕ್ತಿ ಇಲ್ಲದವರು. ಕೆಲವರಿಗೆ ಹಾಗೆ ಕಾಣುತ್ತದೆ. ಗಿಡಗಳ ಎಣಿಕೆಗೆ ತೊಡಗಿದರೆ ಕಾಡು ಮರೆಯಾಗುತ್ತದೆ. ತರ್ಕದ ಗೋಜಿಗೆ ಸಿಕ್ಕದಂತೆ ತತ್ವದರ್ಶನ ಮಾಯವಾಗಬಲ್ಲದು. ಅತಿವ್ಯಾಕರಣ ಸಾಹಿತ್ಯಕ್ಕೆ ಮಾರಕ; ಅತಿ ಕಾನೂನು ಕಲಾಪ ನ್ಯಾಯಧರ್ಮವನ್ನು ಮರೆಸೀತು. ಇಂಥ ತತ್ವಗಳನ್ನು ಮೆರದವರು ಅವರಲ್ಲ. ಯಾವುದರಲ್ಲಿಯೂ ಅನಿಶ್ಚಯವಿಲ್ಲ; ಮುಕ್ಕು, ಕೊರೆ ಇಲ್ಲ. ಒಟ್ಟಿನಲ್ಲಿ ಒಂದು ಸಮವಾಯ ಇರುತ್ತಿತ್ತು. ಸಾಹಿತ್ಯದ್ದು ಒಂದು ಜೀವದ, ಒಂದು ವಾಣಿಯ ಪ್ರವಾಹ. ಎಷ್ಟೊ ಹೊತ್ತು ಮಾತನಾಡಲಿ, ಅವರಲ್ಲಿ ವಿಷಯ ಸಂಪತ್ತಿಗೆ ಕೊರತೆ ಒರುತ್ತಿರಲಿಲ್ಲ. ಕೆಲವರಿಗೆ ಉತ್ತರವಾಗಿ ಅವರು ಹೀಗೆ ಹೇಳಿದ್ದುಂಟು; ಒಂದು ಸಿನಿಮಾಗೆ, ನಾಟಕಕ್ಕೆ ಹೋದರೆ, ಒಂದು ಹರಿಕಥೆಗೂ ಪುರಾಣ ಕೇಳಲೊ ಹೋದರೆ ಗಂಟೆಗಟ್ಟಲೆ ಕುಳಿತುಕೊಳ್ಳುತ್ತಾರೆ. ಒಂದು ಉತ್ತಮ ಸಾಹಿತ್ಯಕೃತಿಯ ಗುಣಪರಿಣಾಮವನ್ನು ಕುರಿತು ವಿಷಯವನ್ನು ವಿಸ್ತರಗೊಳಿಸುವುದು ತಪ್ಪಾಗಬಾರದು. ಕೇಳಲು ಇಷ್ಟವಿರುವವರು ಕೇಳಲಿ; ಇಲ್ಲದವರು ಹೋಗಲಿ, ಈ ಮನೋಭಾವ ಕೆಲವರ ದೃಷ್ಟಿಯಲ್ಲಿ ಒಂದು ಅಪಕೀರ್ತಿಯನ್ನೇ ತಂದಿತು; ಆದರೆ ಅವರ ಪ್ರಕಾರ, ವಿಧಾನ ಅದು. ಪಾಠಗಳನ್ನು ಅವರು ಹಾಗೆ ಮಾಡುತ್ತಿದ್ದುದುಂಟು. ಸಾರ್ವಜನಿಕ ಉಪನ್ಯಾಸಗಳಲ್ಲಿಯೂ ಎರಡು ಗಂಟೆ, ಮೂರು ಗಂಟೆ ಮಾತನಾಡಿದ್ದುಂಟು. ಆದರೆ ಜಳ್ಳುಭಾಗ ಕಡಿಮೆ. ಇನ್ನು ಮೂವರು – ನಾಲ್ವರು ಕನ್ನಡಿಗರು ಹಾಗೆ ಮಾಡಿದವರುಂಟಾದರೂ ಹೋಲಿಕೆ, ವ್ಯತ್ಯಾಸ, ವಿಶ್ಲೇಷಣೆ ತರವಲ್ಲ.

ಆದಿಪುರಾಣವನ್ನೊ ಯಶೋಧರಚರಿತೆಯನ್ನೊ ಶಾಂತಿಪುರಾಣವನ್ನೊ ಅಥವಾ ಮಾರ್ಕಸ್ ಆರಿಲಿಯಸ್, ರಿಪಬ್ಲಿಕ್ ಅಥವಾ ಸೇಂಟ್ ಮಾರ್ಕ್, ಗಯಠೆ ಮುಂತಾದವರನ್ನು ಕುರಿತೊ ಅವರ ಒಂದು ಭಾಷಣವನ್ನು ಕೇಳಿ, ಅಲ್ಲಿ ತುಂಬಿ ಬರುತ್ತಿದ್ದ ಒಂದು ಸಂಪೂರ್ಣ ದೃಷ್ಟಿ, ಒಂದು ಸಮಗ್ರ ಯೋಚನಾವಿಲಾಸ ಆ ಪ್ರಪಂಚವನ್ನು ಸುಲಭವಾಗಿ ವಿಶದವಾಗಿ ಮಾಡಿಕೊಡುತ್ತಿದ್ದುದರಿಂದ, ಅಂಥ ಒಂದೊಂದು ಭಾಷಣವನ್ನು ಕೇಳಿ ಇತರ ಹಲವರು ೮ – ೧೦ ಲಘು ಭಾಷಣಗಳನ್ನು "ಬಿಗಿ"ಯುತ್ತಿದ್ದರು. ನಾನು ಕೇಳಿದ ಇನೊಬ್ಬಿಬ್ಬರು ಅಂಥವರು ಸರ್. ಸಿ.ವಿ. ರಾಮನ್, ರಾಧಾಕೃಷ್ಣನ್ ಅವರು. ಕಾಲ

ಕಳೆಯಬೇಕೆಂದೊ ಇನ್ನೊಬ್ಬರನ್ನು ಹೊಗಳಬೇಕೆಂದೊ ತೆಗಳಬೇಕೆಂದೊ ಮನಸ್ಸು ಮಾಡಿದಾಗ ಒಂದು ಗಂಟೆ ಹೊತ್ತು ಅದನ್ನು ರಾಮನ್ ಹೊಟ್ಟೆ ತುಂಬಾ ಮಾಡುತ್ತಿದ್ದರಾದರೂ ವಿಜ್ಞಾನಕ್ಕೆ ಸಂಬಂಧಿಸಿದ ಯಾವುದಾದರೂ ಒಂದು ವಿಷಯವನ್ನು ಅವರು ಕುರಿತ ಮಾತನಾಡಿದರೆ ಆ ವಿಷಯವನ್ನು ಬೆಳೆಸುವ ರೀತಿ, ಆ ಸಮಗ್ರತೆ, ವಿಜ್ಞಾನದ ತಿಳಿ ಸಾಮಾನ್ಯ ಶ್ರೋತೃವಿಗೂ ಆ ವಿಷಯದ ಸಂಪೂರ್ಣ ಪರಿಜ್ಞಾನ ಆಕೃತಿಗೊಂಡು ಬರುವಂತಾಗುತ್ತಿದ್ದಿತು. ತಾನೂ ಅದನ್ನು ಕುರಿತು ಈಗ ಮಾತನಾಡಬಲ್ಲೆ, ಬರೆಯಬಲ್ಲೆ ಎಂಬ ಕಲ್ಪನೆ ಶ್ರೋತೃವಿಗೆ ಉಂಟಾಗುತ್ತಿತ್ತು. ರಾಧಾಕೃಷ್ಣನ್ ಪಾಠಗಳಲ್ಲಿ ಹಾಗೆ ಕಾಂಟ್, ಹೆಗೆಲ್, ಅರಿಸ್ಟಾಟಲ್ ಕುರಿತು ಮಾತನಾಡಿದ ಮೇಲೆ ಇನ್ನೇನಾದರೂ ಹೇಳುವುದಿದೆಯೆ, ಬೇರೆ ನಿಲುವು ಗೊಡ್ಡು ಎನನಿಸಿಬಿಡುತ್ತಿತ್ತ. ಇದು ಗುಣವಾದ ದೋಷ. 'ಶ್ರೀ' ಯವರ ಭಾಷಣ ಹಾಗೆ. ಈ ಗುಣ ತೀರ ಅಪರೂಪ. ರಾಮನ್‌ರ ವಿಜ್ಞಾನವೈದುಷ್ಯ ಎಷ್ಟು ದೊಡ್ಡದೊ ಇಂಗಿಷ್ ಭಾಷೆಯ ಮೇಲೆ, ಅದರ ನುಡಿಗಟ್ಟು ಸೊಬಗಿನ ಮೇಲೆ ಅಷ್ಟೇ ಪ್ರಭಾವವುಳ್ಳದ್ದಾಗಿತ್ತು. ಒಮ್ಮೆ ಬೆಂಗಳೂರಿನ Theologicl collegeನಲ್ಲಿ 'ಶ್ರೀ' ಯವರಿಂದ ಒಂದು ಭಾಷಣವನ್ನು ಮಾಡಿಸಬೇಕೆಂದು ಕರೆದರು 'ಎಕ್ಲಿಸಿಯಾಸ್ಟಸ್' ಎಂಬುದರ ಮೇಲೊ, ಅಥವಾ ಇನ್ನೂ ಅಪರೂಪವಾದ ಇನ್ನಾವುದೊ ಒಂದು ಹಳೆಯ ಒಡಂಬಡಿಕೆಯನ್ನು (Old Testament) ಕುರಿತೊ ಒಂದೂ – ಒಂದೂವರೆ ಗಂಟೆ ಮಾತನಾಡಿದರಂತೆ. ಅವರ ಭಾಷಣವನ್ನು ಕೇಳಿ ಆ ಮತದ ಸಂಪೂರ್ಣ ವಿದ್ವಾಂಸರೆಂದುಕೊಳ್ಳುತ್ತಿದ್ದ ಬೋಧಕ ಜನವೇ – ಗ್ರೀಕ್ ಲ್ಯಾಟಿನ ಹೀಬ್ರೂ ಮೂರನ್ನೂ ಅರಿತಿದ್ದ ವಿದ್ವಾಂಸರು ಬೆರಗಾಗಿ, ಆ ದಿನದ ಅಧ್ಯಕ್ಷರು ತಾವು ಆಗಾಗ ದಯಮಾಡಿಸಿ ನಮಗೆ ತಿಳಿವಳಿಕೆಯನ್ನು ಕೊಡಬೇಕು; ಇಂಥವರ ಇಂಥ ಭಾಷಣ ಕೇಳುವುದು ಅಪೂರ್ವ – ಎಂದು ಹೇಳಿದರಂತೆ. ಇದನ್ನು ಮೌಲ್ವಿನ್ ರಾಘವಾಚಾರ್ಯರಿಗೆ ತಿಳಿಸಿದರು. ಎಂದರೆ, ಯಾವ ವಿಷಯವನ್ನು ಕುರಿತು ಅವರು ಮಾತನಾಡುತ್ತಿದ್ದರೊ ಅದರ ಚಾರಿತ್ರಿಕ ಆವರಣ, ಪ್ರಕರಣಸಿದ್ಧಿ, ಇತಿಮಿತಿ, ಸಾಮಂಸ್ಯ, ಅದಕ್ಕೆ ಸಂಬಂಧಿಸಿದ ತತ್ವದರ್ಶನ, ಅಲ್ಲಿ ಪ್ರಧಾನ ಯಾವುದು, ಗೌಣ ಯಾವುದು – ಎಂಬ ವಿಚಾರ ಪೂರ್ತಿ ಯಾಗಿ ಅವರ ಮನಸ್ಸಿನಲ್ಲಿ ಇರುತ್ತಿತ್ತು. ತಾವು ಓದುವಾಗಲೇ ಅವರು ಹಾಗೆ ಓದುತ್ತಿದ್ದರಾದೀತು. ರಿಜಿಸ್ಟ್ರಾರ್ ಆಗವ ೧೯೨೬ ರ ವರೆಗೂ ಹೆಚ್ಚಾಗಿ ಸಭೆಗಳ ಮುಂದೆ ನಿಂತು ಮಾತನಾಡಿದವರಲ್ಲ; ಸಾರ್ವಜನಿಕವಾಗಿ ಒಟ್ಟು ಉಗ್ರಾಣ ತುಂಬಿಕೊಳ್ಳುತ್ತಿತ್ತು. ಸಿದ್ಧತೆ, ಸಜ್ಜು, ಅಷ್ಟು; ಸಂಪತ್ತಿಯನ್ನು ಕೂಡಿಸಿಕೊಂಡು ಆವರೆಗೂ ತಮ್ಮ ಶಕ್ತಿಯನ್ನು ಸಂಗ್ರಹಿಸಿ ತಮ್ಮಲ್ಲಿಯೇ ಅರಗಿಸಿಕೊಂಡಿದ್ದರು. ಈ ರೀತಿ ಸಿದ್ಧವಾಗುವುದು ಅಪರೂಪವಾಗುತ್ತಿದೆ. ಅಂತುದಕ್ಕೆ ಬೆಲೆಯೇ ಇಲ್ಲವೇನೊ ಎಂಬಷ್ಟು – ಕೇಳುವವರಲ್ಲಿ ಓದುವವರಲ್ಲಿ ಮನಸ್ಸು ಬೆಳೆಯುತ್ತಿಲ್ಲದಿರುವುದು ಚಿಂತೆತರುವ ಸಂಗತಿ. ಆಚಾರ್ಯರ ಸೂತ್ರಭಾಷ್ಯಗಳನ್ನು ಓದಿರುವವರಿಗೂ ಅಭಿನವಗುಪ್ತಾದಿಗಳ ವ್ಯಾಖ್ಯಾನಗಳನ್ನು ಓದಿರುವವರಿಗೂ ಈಚೆಗೆ ಭಾಂಡಾರ್‌ಕರ್, ಕಾಣೆ, ಸುಕ್ತಂಕರ್ ಮುಂತಾದವರ ವೈದುಷ್ಯವನ್ನು ಕಂಡವರಿಗೂ ಇದು ವ್ಯಕ್ತಪಟ್ಟೀತು. ಮೋನಿಯರ್ ವಿಲಿಯಂಸ್ ಅಂಥವರು 'ಶಾಕುಂತಲ' ಕ್ಕೆ ಭಾಷಾಂತರ, ಪಾಠವಿಮರ್ಶೆ ಮಾಡುವ ರೀತಿ ಅನೇಕರಿಗೆ ನಮ್ಮಲ್ಲಿ ಫಲಿಸದಿರುವುದು ಇದಕ್ಕೆ ನಿದರ್ಶನ... ಕೇವಲ ನನ್ನದಾದ ಇನ್ನೊಂದು ಸನ್ನಿವೇಶವನ್ನು ನಿವೇದಿಸಲು ಸಂಕೋಚವಾಗುತ್ತದೆ. ಜಮಖಂಡಿ ಸಮ್ಮೇಳನದಲ್ಲಿ ಕೆಲವು ವಿರಸಗಳು ನಡೆದವು. ಅವರು ಹೊಸದಾಗಿ ಉಪಾಧ್ಯಕ್ಷರಾದರು. ಹಲಿಯಾಳ್ಕರ(?)ರ ಮನೆಯ ಮಹಡಿ ಹಾಲಲ್ಲಿ ಒಂದು ಮಂಚದ ಮೇಲೆ ಬೆಳಿಗ್ಗೆ ಇನ್ನೂ ಮಲಗಿದ್ದರು. ಗುಂಡಪ್ಪನವರು ಪಿ. ಶ್ರೀನಿವಾಸರಾಯರು, ನಾನು, ಬಿಜಾಪುರ ಬಾದಾಮಿ ಮೂಲಕ ಪ್ರಯಾಣ ಮಾಡಲು ನಿರ್ಣಯವಾಗಿದ್ದುದರಿಂದ ಅವರಿಗೆ ತಿಳಿಸಿ ಅಪ್ಪಣೆ ಪಡೆಯಲು ಹೋದೆ. ಅರ್ಧ ಮೇಲಕ್ಕೆ ಎದ್ದು, ಮೃದುವಾಗಿ ನನ್ನ ಗಲ್ಲ ಮುಟ್ಟಿ (!), "ನನ್ನ ಕೈ ಬಿಡಬೇಡಿ, ಅಪ್ಪ" ಎಂದರು. ನನ್ನ ಜನ್ಮದಲ್ಲಿ ಹಾಗೆ ಪ್ರೀತಿ ತೋರಿಸಿದವರನ್ನು ಕಾಣೆ. ಮಗುವಿನಂತೆ, ಹೆಣ್ಣಂತೆ ಎಂಬ ಅವರಗುಣವನ್ನು ತಿಳಿಸಲು ಈ ಮಾತನ್ನು ಹೇಳುತ್ತಿದ್ದೇನೆ ಮಾತ್ರ.

ನನಗೆ ಅವರ ಕಡೆಯ ದರ್ಶನವಾದದ್ದನ್ನು ಕುರಿತು ಇನ್ನೆಲ್ಲೊ ಒಂದು ಕಡೆ ಹೇಳಿದ್ದೇನೆ. ಅವರೂ ನಾನು ಗದಗಿಗೆ ಯಾವುದೊ ಒಂದು ಕಾರ್ಯಕ್ರಮಕ್ಕಾಗಿ ಹೋಗಿದ್ದೆವು. ಆ ದಿನದ ಸಂಜೆಗೆ ಶ್ರೀರಾಜರತ್ನಂ ಬಂದು ಸೇರಿಕೊಂಡರು. ಮೂವರದೂ ಆ ಸಂಜೆ ಭಾಷಣಗಳು. 'ಶ್ರೀ' ಅಧ್ಯಕ್ಷರು. ಎರಡನೆಯ ದಿನ ನಾವು ಮೂವರೂ ಒಟ್ಟಿಗೆ ರೈಲಲ್ಲಿ ಕುಳಿತು ಪ್ರಯಾಣಮಾಡುವಾಗ 'ಶ್ರೀ' ಮತ್ತು ರಾಜರತ್ನಂ ಕಾರ್ಯಕ್ರಮಕ್ಕಾಗಿ ಬಾಗಲಕೋಟೆಯಲ್ಲಿ ಇಳಿದರು. ನಮಗೆ ಒಬ್ಬೊಬ್ಬರಿಗೂ ಬೇಕಾದಷ್ಟು ಹಣ್ಣು ಹೂ ಫೇಡಾ ಗದಗಿನಲ್ಲಿ ಕೊಟ್ಟು ಕಳಿಸಿದ್ದರು. ನನಗೆ ಆ ಸಂಜೆ ಬಿಜಾಪುರದಲ್ಲಿ ಭಾಷಣ ಇತ್ತು. ಆದ್ದರಿಂದ ನಾನು ಮುಂದಕ್ಕೆ ಹೊರಡಲೇಬೇಕಾಯಿತು. ಹೋಗುವ ಮುಂಚೆ ಒಂದಷ್ಟು ಹಣ್ಣನ್ನು ನನಗೆ ಕೊಟ್ಟು, ಒಂದು ಮಾತು ಹೇಳಿದರು : "ನಾನು ಯಾರು ಯಾರಿಗೊ ಹೇಳಿದೆನಪ್ಪ; ಅವರು ಯಾರೂ ಕನ್ನಡ ನಾಡನ್ನು ಸುತ್ತಲು ಮನಸ್ಸು ಮಾಡಲಿಲ್ಲ. ನಿಮ್ಮ ಸ್ಥಿತಿ ನನಗೆ ಗೊತ್ತು. ಒಡೆದುಹೋಗಿರುವ ಕನ್ನಡ ನಾಡು ಒಂದಾಗಬೇಕು. ರಾಜರತ್ನಂ, ನೀವು– ಬೇರೆಯಾಗಿ ಅ.ನ.ಕೃ., ಶಿವಮೂರ್ತಿಶಾಸ್ತ್ರಿಗಳು – ಹೋಗುತ್ತಿರುತ್ತೀರಿ. ಸಂತೋಷ. ನೀವು ಮಾತ್ರ ಏನೇ ಕಾರಣದಿಂದ ಈ ಕಡೆಗೆ ಬರುವುದನ್ನು ನಿಲ್ಲಿಸಬೇಡಿ –"Let us be the living human bridges across the Tungabhadra"– ಎಂದರು. ರಾಜರತ್ನಂಗೆ ಜ್ಞಾಪಕವಿದೆಯೊ ಇಲ್ಲವೊ. ಇದು ನನಗೆ ಅವರ ಕಡೆಯ ಸಂದೇಶ–ಆದೇಶ. ಬಿಜಾಪುರದ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ನಾನು ಹೈದರಾಬಾದಿಗೆ ಹೋಗಿ, ಅಲ್ಲಿಂದ ಬಹುಶಃ `Indian PEN'ನ ಮೊದಲ ಸಮ್ಮೇಳನಕ್ಕಾಗಿ ಜಯಪುರಕ್ಕೆ ಹೋದ ನೆನಪು. ಅಲ್ಲಿಂದ ಹೆಚ್ಚು ದಿನ 'ಶ್ರೀ' ಯವರು ಉಳಿಯಲಿಲ್ಲ... ಕಡೆಯ ಗಳಿಗೆಯ ಸುಮಾರಲ್ಲಿ ಅವರ ಬಳಿಯಲ್ಲಿದ್ದವರು ರಂ. ಶ್ರೀ. (ಈಗ ಡಾಕ್ಟರ್) ಮುಗಳಿ. ಆಗ ನಡೆದುದನ್ನು ಅವರು ವರ್ಣಿಸಿದ್ದಾರೆ. ನನಗೆ ಉಳಿದಿರುವುದು ಬಾಗಲಕೋಟೆ ಸ್ಟೇಷನ್ನಿನದೇ ಕಡೆಯ ನೆನಪು...

ಊಟ ಉಪಚಾರಗಳಲ್ಲಿಯೂ ಸುಖವಾಗಿರುತ್ತಿದ್ದರು. ಕರೆದ ಅತಿಥಿಗಳಿಗೆ ಉತ್ತಮ ಭೋಜನ ಏರ್ಪಡಿಸುತ್ತಿದ್ದರಂತೆ. ಹೋದಲ್ಲಿ ಕೆಲವೇಳೆ ದಾಕ್ಷಿಣ್ಯಕ್ಕೆ ಒಳಪಟ್ಟರೂ ಆರೋಗ್ಯಕ್ಕೆ ಕೇಡಾಗುವುದೆಂದು ತಿಳಿದಿದ್ದರೂ ಯಜಮಾನರಿಗೆ ಅಸಮಾಧಾನವಾಗಬಾರದೆಂದು ಧಾರಾಳವಾಗಿರುತ್ತಿದ್ದರು. ಉದಾಹರಣೆಗೆ, ಬಿಜಾಪುರದಲ್ಲಿ ಕೌಜಲಗಿ ಶ್ರೀನಿವಾಸರಾಯರ ಮನೆಯಲ್ಲಿ ೨೦–೩೦ ಜನ ಇತರರೊಡನೆ ಆ ಕಡೆಗೆ ವಿಶೇಷವಾದ ಪೊಂಗಲು ತರಹ ಮಸಾಲೆ ಹುಗ್ಗಿ, ಕೇಸರೀಬಾತ್,

ಗೋಧಿಪಾಯಸ, ಬುರಬೂರಿ, ಅದರ ಮೇಲೆ ವಿಶೇಷ ರುಚಿಯಾಗಿ ಜಿಲೇಬಿ ಬಡಿಸಿಕೊಳ್ಳಿ ಎಂದಾಗ ಹಾಕಿಬಿಡಿ ಎಂದು ಒಂದು ಕ್ಷಣ ಮುನಿದುಕೊಂಡರೂ – ನನಗೆ ಹೇಳಿದರು. ಇವೊತ್ತು ಎರಡು ಭರ್ತಿ ಇಂಜಕ್ಷನ್ ಕೊಟ್ಟು ಕೊಳ್ಳಬೇಕಾಗುತ್ತೆ ತಾನೆ ಎಂದು ತಿಂದುಬಿಟ್ಟರು. ಆ ಗೋಷ್ಠಿಯಲ್ಲಿ ಕೌಜಲಗಿಯವರಿಗೆ ತುಂಬಾ ಸ್ನೇಹಿತರಾದ ಡಾ. ಮುಗಳಿ ತಂದೆ ಶ್ರೀನಿವಾಸರಾಯರೂ ಇದ್ದರು. ಆ ಸಂತೋಷ ಕೂಟದಲ್ಲಿ ಸಂಕೋಚಪಟ್ಟುಕೊಳ್ಳದೇ ಊಟ ಮಾಡಿಬಿಟ್ಟರು. ಪ್ರಯಾಣ ಹೋಗುವಾಗ ಮಗಳು ಶಾರದಮ್ಮ ಕಲಸನ್ನ, ಆಂಬೊಡೆ, ತನಿಯಾಗಿ ಕಲಿಸಿ ಕಳಿಸಿದ ಮೊಸರನ್ನ ಕಂಡು ನನ್ನ ತಾಯಿ ಈ ಮಗಳು ಕಾಪಾಡಿಕೊಂಡು ಬಂದಿದ್ದಾಳಪ್ಪ ಎನ್ನುತ್ತಾ ಧಾರಾಳವಾಗಿ ಸೇವನೆ ಮಾಡುತ್ತಿದ್ದುದು ಸಾಮಾನ್ಯ ವಾಡಿಕೆ.

* *

'ಶ್ರೀ' ಯವರದು ಒಂದು 'ವಾಣಿ' –a Voice. 'ಶ್ರೀಕಂಠ' ಎಂಬುದು ಮಾತು. ಅವರ 'ಕಂಠಶ್ರೀ' ಎಂದು ಚಮತ್ಕಾರವಾಗಿ ಹೇಳುವುದುಂಟು. ಆ ಶ್ರೀಮಂತಿಕೆ ಏತಕ್ಕೆ, ಅದು ಯಾವ ಹದ ಲಕ್ಷಣದ್ದು – ಎಂಬುದನ್ನು ಮಾತುಗಳಲ್ಲಿ ಹೇಗೆ ವಿವರಿಸುವುದು? ಅದು ಕಿವಿಯಲ್ಲಿ ಸರ್ವದಾ ಜೇಂಕರಿಸುತ್ತಿರಬೇಕು. ಅದು ಉರಿಯುವ, ಕಿಡಿ ಹಾರುವ, ಹೊಗೆಯುಗುಳುವ, ನಾಲಗೆ ಚಾಚಿ ನುಂಗುವ, ಸುಡುವ ಬೆಂಕಿಯಲ್ಲ; ಬಿಳಿ ಬೆಳಕು. ಆದರೂ ಕಾವಿಲ್ಲದಿರುವುದು, ಅಷ್ಟಾದರೂ ಅಲ್ಲಿ ಕಬ್ಬಿಣ ಕರಗಿಸುವ ಶಾಖ, ಅದನ್ನು ವಿಶ್ಲೇಷಿಸಿದರೆ ಬಾನ್‌ಬಿಲ್ಲಿನ ಸಪ್ತವರ್ಣಗಳನ್ನು – ಅವರ ಮನಸ್ಸಿನ ಏಳು – ಎಪ್ಪತ್ತು ವರ್ಣಗಳನ್ನು – ಕಾಣಬಹುದಿತ್ತು ಎಂದು ಹೇಳಿ ಈ ಹೊಗಳಿಕೆಯೆನ್ನಬಹುದಾದ ಮಾತನ್ನು ಮುಗಿಸುತ್ತೇನೆ. ಧರ್ಮ ವಿಷಯದಲ್ಲಿ ಸಂದೇಹ ಬಂದಾಗ ಇತರ ಶಿಷ್ಟರನ್ನು ಕೇಳಿ,–

ಏತತ್ರ ಬ್ರಾಹ್ಮಣಾಃ ಸಮ್ಮರ್ಶಿನಃ
ಯುಕ್ತಾಯುಕ್ತಾಃ
ಅಲೂಕ್ಷಾ ಧರ್ಮಕಾಮಾಸ್ಯುಃ

ಎಂಬ ಗುರುಗಳ ಅನುಶಾಸನದ ವಾಣಿ ಈಗಲೂ ಕೇಳುತ್ತಿರುತ್ತದೆ...

ವ್ಯಕ್ತಿಪರಿಚಯ, ವಿದ್ಯಾದಾನರೀತಿ, ನಾಡುನುಡಿ ಸೇವೆ ಮಾತ್ರ ನೆನಸಿಕೊಂಡು ನಾನು ಈ ಪರಿಚಯ ಕಾಣಿಕೆಯನ್ನು ಅರ್ಪಿಸುತ್ತಿದ್ದೇನೆ; ಇಲ್ಲಿ ವಿಮರ್ಶೆಯ ಭಾಗ ಇಲ್ಲ. ಎಲ್ಲರೂ ಓದಬಹುದಾದ ಅವರ ಕೃತಿಗಳು ಮುಂದಿವೆ: ತಮ್ಮ ಸಂತೋಷಕ್ಕೆ, ತೀರ್ಮಾನಕ್ಕೆ. ಅವನ್ನು, ಅವರ ಕೊರಲ ಸೌಭಾಗ್ಯ, ಮಾಧುರ್ಯವನ್ನೆಲ್ಲ ಎಲ್ಲಿ ತರಲಿ?

ಆವಳ ನಿರ್ಮಲ ತೇಜಂ
ತೀವಲ್‌ಕಳೆಗೊಂಡು ಪಾಡಿ ಮೆಱೆದರೊ ಕವಿಗಳ್
ಆವಾಣಿ ತನ್ನ ಪಾವ್‌ನ
ಸೇವೆಗೆ ಕೃಪೆಯಿಂದಮೆಂದು ಕರೆವಳೋ ಎನ್ನಂ ।

* * *

ಅರಿಕೆ

ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತಗಳನ್ನು ಬರೆದೆನೋ ಆ ಕಣ್ಣುಗಳು ಬೇಗ ಮುಚ್ಚಿಹೋಗಿ, ಕೆಲವು ವರ್ಷ ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು. ಇದನ್ನು ಬಲ್ಲ ನನ್ನ ಗುರುಗಳು ಕೀರ್ತಿಶೇಷರಾದ ಮ.ರಾ. ಬಾಪೂ ಸುಬ್ಬರಾಯರು ಮೂರು ಕವನಗಳನ್ನು ತೆಗೆದುಕೊಂಡು ತಮ್ಮ 'ವಿದ್ಯಾದಾಯಿನಿ' ಯಲ್ಲಿ ೧೯೧೯ನೆಯ ಇಸವಿಯಲ್ಲಿ ಹೊರಪಡಿಸಿದರು: ೧೯೨೧ ರಲ್ಲಿ ತಮ್ಮ 'ಗ್ರಂಥಮಾಲೆ' ಯಲ್ಲಿ ಇನ್ನು ಹನ್ನೆರಡು ಗೀತಗಳನ್ನು ಅಚ್ಚುಹಾಕಿಸಿದರು. ನನ್ನ ಮಿತ್ರರಾದ ಮ.ರಾ. ಡಿ.ವಿ. ಗುಂಡಪ್ಪನವರು ತಾವೇ ಕವಿಗಳಾದದ್ದರಿಂದ ಸ್ವಜಾತಿಪ್ರೇಮದಿಂದಲೋ ಏನೋ ಮತ್ತೆ ಇಪ್ಪತ್ತುನಾಲ್ಕು ಕವನಗಳನ್ನು ೧೯೨೪ರಲ್ಲಿ ತಮ್ಮ 'ಕರ್ಣಾಟಕ ಜನಜೀವನ' ಪತ್ರಿಕೆಯಲ್ಲಿ ಮುದ್ರಿಸಿಕೊಟ್ಟರು. ಈಗ ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಸಿದ್ಧಿ ಹೊಂದಿದ 'ಕರ್ಣಾಟಕ ಸಂಘ'ದ ಅಧಿಕಾರಿಗಳು ವಿಶ್ವಾಸವಿಟ್ಟು ಗ್ರಂಥವನ್ನೆಲ್ಲ ಪುಸ್ತಕರೂಪದಲ್ಲಿ ಪ್ರಕಾಶಕ್ಕೆ ತಂದು ನನಗೆ ಪ್ರೋತ್ಸಾಹವನ್ನು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಯಾವಾಗಲೂ ಕೃತಜ್ಞನಾಗಿದ್ದೇನೆ.

ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣ ಗ್ರಂಥದಿಂದ ಸ್ವಲ್ಪ ಮಟ್ಟಿಗೆ ತಿಳಿಯಬಹುದಾಗಿದೆ. 'ಭಾಷಾಂತರಕಾರರು ಕೊಲೆಗಾರರು' ಎಂದು ಪಾಶ್ಚಾತ್ಯರಲ್ಲಿ ಒಂದು ಗಾದೆಯುಂಟು. ಆ ಅಪವಾದವನ್ನು ತಪ್ಪಿಸಿಕೊಂಡಿರುವೆನೆಂದು ನಾನು ತಿಳಿದುಕೊಂಡಿಲ್ಲ. ಆದರೆ, ನನ್ನ ಬುದ್ಧಿಬಲವಿರುವ ಮಟ್ಟಿಗೂ ಮೂಲವನ್ನು ಪ್ರತಿಬಿಂಬಿಸುವ ಕರ್ತವ್ಯವನ್ನೇ ಮುಂದಿಟ್ಟುಕೊಂಡು ಕೆಲಸ ಮಾಡಿದ್ದೇನೆ. ಕೆಲವು ಕಡೆ, ಹೆಸರು, ಭಾವ ಮುಂತಾದುವು ಕನ್ನಡ ಜನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಡಾಗಿದ್ದರೂ, ಸಾಮಾನ್ಯವಾಗಿ ಪದಪ್ರಯೋಗ, ಶೈಲಿ, ಛಂದಸ್ಸು, ಭಾವ, ರಸ– ಇವೆಲ್ಲವೂ ಮೂಲಕವಿಯ ವ್ಯಕ್ತಿತ್ವವನ್ನೇ ಅನುಸರಿಸಿವೆ. ಕನ್ನಡದ ಜಾಯಮಾನವನ್ನು ಮೀರದೆ ಎಷ್ಟುಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲಬಹುದೋ ಅಷ್ಟುಮಟ್ಟಿಗೂ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಪಟ್ಟಿರುತ್ತೇನೆ. ಇಂಗ್ಲಿಷ್ ಬಲ್ಲವರು ಇದನ್ನು ತಿಳಿಯುವರು; ಅಚ್ಚಕನ್ನಡಿಗರು ಈ ಭಾಗದಲ್ಲಿ ಅಸಮಾಧಾನಪಡಬಾರದೆಂದು ನನ್ನ ಪ್ರಾರ್ಥನೆ ಮುಖ್ಯ.

ಹೇಳಿದ್ದೆ ಹೇಳುವರು, ಕೇಳಿದ್ದೆ ಕೇಳುವರು,
ಕೇಳಿದ್ದೆ ಕೇಳಿ ಸುಖಿಸುವರು ಗುರುಗಳ
ಹೇಳಿಕೆಯೆ ಬೇರೆ ಸರ್ವಜ್ಞ,

ಎಂಬ ವಚನದಂತೆ, ಸಂಪ್ರದಾಯ ಮಾರ್ಗವನ್ನೇ ಛಲಹಿಡಿಯದೆ, ವಿಶ್ವಕವಿತಾವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿಸೌಂದರ್ಯ, ಮಾನವಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜಭಾಷೆಯಲ್ಲಿ ಸೌಂದರ್ಯರಚನೆಯನ್ನು ಮಾಡಿರುವರೋ ಅದನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ, ಧೈರ್ಯವನ್ನೂ ಶಿಕ್ಷಣಬದ್ಧವಾದ ಸ್ವಾತಂತ್ರ್ಯವನ್ನೂ ವಹಿಸಿ ಕನ್ನಡ ಕವಿಗಳು ಹಿಂದಕ್ಕಿಂತಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ ಎನ್ನುವುದೇ ನಮ್ಮೆಲ್ಲರ ಹಾರೈಕೆಯಾಗಿರತಕ್ಕದ್ದಾಗಿದೆ. ಹೊಸ ಮಾರ್ಗದ ಕವಿಗಳು ಆಗಲೇ ಹಾಡುವುದಕ್ಕೆ ತೊಡಗಿರುವ ನಮ್ಮ ಕಾಲದಲ್ಲಿ ಈ ಮಾತನ್ನು ಒತ್ತಿಹೇಳಬೇಕಾಗಿಲ್ಲ.

ಇಲ್ಲಿ ಕೊಟ್ಟಿರುವ ಕವನಗಳೆಲ್ಲಾ ಇಂಗ್ಲಿಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಆದುಕೊಂಡುವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈಮೀರದುವಾಗಿ ಕಂಡುಬಂದ ಗೀತಗಳವು. ಇಂಗ್ಲಿಷ್ ಕವಿಗಳುಶೃಂಗಾರ ರಸವನ್ನು ಹೇಗೆ ಗಂಭೀರವಾಗಿಯೂ, ಸೂಕ್ಷ್ಮವಾಗಿಯೂ, ಸ್ವಾಭಾವಿಕವಾಗಿಯೂ ತೋರಿಸುವರೆಂಬುದನ್ನು ತಿಳಿಸುವುದಕ್ಕಾಗಿ ಆ ಬಗೆಯ ಗೀತಗಳು ಕೊಂಚ ಹೆಚ್ಚಾಗಿ ಬಂದಿದೆ. ಇಂಗ್ಲಿಷ್ ಸಾಹಿತ್ಯ ಸಮುದ್ರದ ಕರೆಯಲ್ಲಿ ತೆರೆಯೆಸೆದ ಈ ಕೆಲವು ಸಣ್ಣ ಚಿಪ್ಪುಗಳಿಂದ, ಆ ದಿವ್ಯರತ್ನಾಕರದ ಲಾವಣ್ಯವೂ, ವಾಸನೆಯೂ, ಘೋಷವೂ, ರುಚಿಯೂ, ಸಹೃದಯರ ಅನುಭವಕ್ಕೆ ಬಾರದೆ ಇರಲಾರವೆಂದು ನಾನು ನಂಬಿರುತ್ತೇನೆ.